ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/–
ಕನ್ನಡ–ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAPU PRAPANCHA

ಸಂಪುಟ–05 • ಸಂಚಿಕೆ–03 • ಆಗಸ್ಟ್ 2023



ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಭಾರತ ಸಂವಿಧಾನ

ಪ್ರಸ್ತಾವನೆ

ಭಾರತದ ಜನತೆಯಾದ ನಾವು ಭಾರತವನ್ನು
ಸಾರ್ವಭೌಮ ಸಮಾಜವಾದಿ
ಮತಧರ್ಮ ನಿರಪೇಕ್ಷ ಜನತಂತ್ರಾತ್ಮಕ
ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ
ಭಾರತದ ಎಲ್ಲ ನಾಗರಿಕರಿಗೆ
ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯ
ಸ್ಥಾನಮಾನ, ಅವಕಾಶಗಳ ಸಮತೆ
ದೊರೆಯುವಂತೆ ಮಾಡುವ,
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ
ಎಲ್ಲರಲ್ಲಿ ಭ್ರಾತೃತ್ವ ಭಾವನೆ ಮೂಡಿಸುವ
ದೃಢ ಸಂಕಲ್ಪ ಮಾಡಿ
ನಮ್ಮ ಸಂವಿಧಾನ ಸಭೆಯಲ್ಲಿ
1949ರ ನವೆಂಬರ್ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ
ಅರ್ಪಿಸಿಕೊಂಡು ಅಂಗೀಕರಿಸಿ, ಶಾಸನವಾಗಿ
ವಿಧಿಸಿಕೊಂಡಿದ್ದೇವೆ

ರೂ. 28/– BAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–05 • ಸಂಚಿಕೆ–03 • ಆಗಸ್ಟ್ 2023

ಹಿಂದಿನ ರಕ್ಷಾಪುಟ ಚಿತ್ರ : ಎಂ ಎಸ್ ಮೂರ್ತಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations**, Bangalore

ಪತ್ರಗಳು

ಮಹಾತ್ಮ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಕಪ್ಪು ಜನರ ಹಕ್ಕಿಗಾಗಿ ಹೋರಾಡಿ ಯಶಸ್ವಿಯಾದ ಕಥೆ ರೋಚಕವಾಗಿದೆ. ಭಾರತ ದೇಶದಲ್ಲಿ ತನ್ನದೇ ನಾಡಿನ ಜನರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧ ನೀತಿಯ ವಿರುದ್ಧ ಅಲ್ಲಿನ ಕಪ್ಪು ಜನರನ್ನು ಸಂಘಟಿಸಿ ಹೋರಾಡಿದ ಬಗ್ಗೆ ಭಾರತೀಯರಾದ ನಾವು ಹೆಮ್ಮೆ ಪಡಬೇಕು. ಶೀರ್ಷಿಕೆ ಹೇಳುವಂತೆ ಅವರು ದೇವದೂತರೇ ಸರಿ.

ಅವಿನಾಶ್, ಮೈಸೂರು

* * *

ಬಾಪೂ ಪ್ರಪಂಚ ಪತ್ರಿಕೆಯನ್ನು ಯುವಜನರನ್ನು ಗಮನದಲ್ಲಿ ಇಟ್ಟು ಕೊಂಡು ರೂಪಿಸಿರಿ. ಗಾಂಧೀಜಿಯವರ ವಿಚಾರಗಳ ಹಿನ್ನೆಲೆಯಲ್ಲಿ ಸಮಕಾಲೀನ ವಿಷಯಗಳನ್ನು ಪರಾಮರ್ಶಿಸಿ ಲೇಖನಗಳನ್ನು ಬರೆದರೆ ಓದುಗರಿಗೆ ಅನುಕೂಲವಾಗುತ್ತದೆ.

ನವೀನ್, ಬೆಂಗಳೂರು

* * *

ಗಾಂಧಿ ವಿಚಾರ ಸಾಹಿತ್ಯ ಮತ್ತು ಅದಕ್ಕೆ ಪೂರಕವಾದ ಕೃತಿಗಳ ಡಿಜಟಲೀಕರಣಕ್ಕೆ ಗಾಂಧಿ ಸ್ಮಾರಕ ನಿಧಿ ಶ್ರಮಿಸುತ್ತಿರುವುದು ಸಂತೋಷದ ಸಂಗತಿ . ಈ ನಿಟ್ಟಿನಲ್ಲಿ ಸಾರ್ವಜನಿಕರು ಹೇಗೆ ಸಹಕರಿಸ ಬಹುದು ಎನ್ನುವ ಬಗ್ಗೆ ಮಾಹಿತಿಯನ್ನು ಮುಂದಿನ ಸಂಚಿಕೆಗಳಲ್ಲಿ ತಿಳಿಸಿ.

ಶಶಿಕಲಾ, ಬೆಂಗಳೂರು

* * *

ಕರ್ನಾಟಕ ಮತ್ತು ಗಾಂಧೀಜಿ ಲೇಖನ ಸರಣಿ ಸ್ವಾರಸ್ಯವಾಗಿದೆ. ಅಂದಿನ ಸ್ವಾತಂತ್ರ್ಯ ಹೋರಾಟ ಮತ್ತು ಅಂದಿನ ಗಾಂಧೀಜಿಯ ಒಲವು ನಿಲುವುಗಳನ್ನು ಅದು ಪರಿಚಯಿಸುತ್ತಿದೆ .ಸರಣಿ ಲೇಖನಗಳನ್ನು ಸಂಕ್ಷಿಪ್ತಗೊಳಿಸುವ ಅವಕಾಶವಿದ್ದರೆ ಪ್ರಯತ್ನಿಸಿ.

ಮನೋಹರ್, ಮಂಡ್ಯ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು gandhi.sanchaya.net ಜಾಲತಾಣದಲ್ಲಿ ವೀಕ್ಷಿಸಿ.

ಪತ್ರಿಕೆಗೆ ಚಂದಾದಾರರಾಗಲು ಆಸಕ್ತಿ ಇರುವವರು ವಾರ್ಷಿಕ 250 ರೂಗಳನ್ನು ಪಾವತಿಸಿ ವಿಳಾಸ ಕಳುಹಿಸಿದರೆ ಅವರಿಗೆ ಅಂಚೆ ಮೂಲಕ ಪತ್ರಿಕೆಯನ್ನು ಕಳುಹಿಸಲಾಗುವುದು.



ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :

ಸಂಪಾದಕರು, ಬಾಪು ಪ್ರಪಂಚ


ಗಾಂಧಿ ಭವನ

ಕುಮಾರ ಪಾರ್ಕ್ ಪೂರ್ವ,

ಬೆಂಗಳೂರು –560001

gandhibhavanabengaluru@gmail.com


ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.



ಭಾರತ ಸ್ವಾತಂತ್ರ್ಯಕ್ಕೆ ಮುನ್ನುಡಿ ಬರೆದ

ಕ್ವಿಟ್ ಇಂಡಿಯಾ ಚಳವಳಿ

ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲ್ ಸಾಮಾನ್ಯ ಸಭೆಯ ನಾಯಕರಾದ ಕ್ರಿಪ್ಸ್‌ನನ್ನು ಮಾರ್ಚ್ 22ರಂದು ಭಾರತಕ್ಕೆ ಕಳುಹಿಸಿದರು. ಭಾರತಕ್ಕೆ ಬಂದ ಕ್ರಿಪ್ಸ್ ಮಿಷನ್ ನೀಡಿದ ವರದಿಯು ಭಾರತೀಯರಿಗೆ ವಿರುದ್ಧವಾಗಿತ್ತು. ಆ ಸಂದರ್ಭದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದವರು ಮೌಲಾನಾ ಆಜಾದ್ ಅವರು. ಇದೇ ಒಳ್ಳೆಯ ಸುಸಂಧಿ ಎಂದು ತಿಳಿದುಕೊಂಡ ಆಜಾದ ಅವರು ಬ್ರಿಟಿಷರ ಜೊತೆಗೆ ಸ್ವಾತಂತ್ರ್ಯಕ್ಕಾಗಿ ಮಾತುಕತೆಗೆ ಕುಳಿತರು. ಮಾತುಕತೆಯ ಸಂದರ್ಭದಲ್ಲಿ ಬ್ರಿಟಿಷರು 2ನೇ ವಿಶ್ವಸಮರ ಮುಗಿದ ಮೇಲೆ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವುದಾಗಿ ಭರವಸೆ ನೀಡಿದರು. ಆದರೆ ಈ ಭರವಸೆಯನ್ನು ಪಂಡಿತ್ ನೆಹರೂ ಅವರು ಪೂರ್ಣವಾಗಿ ಒಪ್ಪಲಿಲ್ಲ. ಮಹಾತ್ಮ ಗಾಂಧೀಜಿಯವರಿಗಂತೂ ಆ ಕುರಿತು ಎಳ್ಳಷ್ಟು ಒಪ್ಪಿಗೆ ಇರಲಿಲ್ಲ.



ಜುಲೈ ತಿಂಗಳು 1942ನೇ ಇಸ್ವಿಯಲ್ಲಿ ಮಹಾರಾಷ್ಟ್ರದ ವಾರ್ಧಾ– ಸೇವಾಗ್ರಾಮ ಆಶ್ರಮದಲ್ಲಿ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿ ಸಭೆ ಸೇರಿ ಕ್ರಿಪ್ಸ್ ನೀಡಿದ ವರದಿಯನ್ನು ತಿರಸ್ಕಾರ ಮಾಡಬೇಕೆಂದು ಕರೆಕೊಟ್ಟಿತು. ಕ್ರಿಪ್ಸ್ ವರದಿಯು ಭಾರತವನ್ನು ಎರಡು ಹೋಳು ಮಾಡುವಂತಿದೆ ಎಂದು ಗಾಂಧೀಜಿಯವರು ಆತಂಕ ವ್ಯಕ್ತ ಪಡಿಸಿದರು. ಬಾಪೂ 1942ನೇ ಇಸ್ವಿ ಜುಲೈ ತಿಂಗಳಲ್ಲಿ ವಿದೇಶಿ ಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ಈ ಅಂಶಗಳನ್ನು ಕಾಣಬಹುದು.

1942 ನೇ ಇಸ್ವಿ ಆಗಸ್ಟ್ ತಿಂಗಳ 7ನೇ ತಾರೀಖಿನ ದಿವಸ ಮುಂಬೈಯಲ್ಲಿ ಸಭೆ ಸೇರಿದ ಕಾಂಗ್ರೆಸ್, ಗೊತ್ತುವಳಿಯನ್ನು ಅಂಗೀಕರಿಸುವಂತೆ ನಿರ್ಧಾರ ಮಾಡಿತು. ಈ ನಡುವೆ ಮಹಾತ್ಮ ಗಾಂಧೀಜಿಯವರು ವೈಸ್ರಾಯ್ ಜೊತೆಗೆ ಮಾತುಕತೆ ನಡೆಸಿದರು.ಆದರೆ ಅದು ಯಶಸ್ಸನ್ನು ಕಾಣಲಿಲ್ಲ.

ಪರಿಣಾಮ, ಆಗಸ್ಟ್ 8ರಂದು ಮುಂಬೈ ಗೋವಾಲಿಯ ಟ್ಯಾಂಕ್ ಮೈದಾನದಲ್ಲಿ ಬ್ರಿಟಿಷರಿಗೆ ಭಾರತ ಬಿಟ್ಟು ತೊಲಗಿ ಎಂದು ಗಾಂಧೀಜಿಯವರು ಎಚ್ಚರಿಕೆ ನೀಡಿ, ಭಾರತೀಯರಿಗೆ 'ಡು ಆರ್ ಡೈ ' 'ಮಾಡು ಇಲ್ಲವೇ ಮಡಿ' ಎಂಬ ರಣಮಂತ್ರವನ್ನು ನೀಡಿದರು. ಕೂಡಲೇ ಆಂಗ್ಲರು ಭಾರತವನ್ನು ಬಿಟ್ಟು ತೊಲಗಬೇಕು ಇಲ್ಲದಿದ್ದರೆ ನಾವು ನಡೆಸುವ ಅಹಿಂಸಾತ್ಮಕ ಹೋರಾಟವನ್ನು ಎದುರಿಸಬೇಕು ಎಂದು ಬಾಪೂಜಿ ಎಚ್ಚರಿಸಿದರು. ಗಾಂಧೀಜಿಯವರ ಘೋಷವಾಕ್ಯಕ್ಕೆ ಪಂಡಿತ್ ನೆಹರೂ ಅವರು ಧ್ವನಿಗೂಡಿಸಿದರು.

ಇದರಿಂದ ಬೆಚ್ಚಿಬಿದ್ದ ಬ್ರಿಟಿಷ ಸರ್ಕಾರ ಅಗಸ್ಟ್ 09ರ ಬೆಳಿಗ್ಗೆ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ನಾಯಕ ಗಾಂಧಿ, ಪಂಡಿತ್ ನೆಹರೂ, ಸರದಾರ ಪಟೇಲ್, ಸರೋಜಿನಿ ನಾಯ್ಡು, ಮೌಲಾನಾ ಆಜಾದ್, ಆಚಾರ್ಯ ಕೃಪಲಾನಿ, ಡಾಕ್ಟರ್ ಬಾಬು ರಾಜೇಂದ್ರ ಪ್ರಸಾದ್ ರು ಸೇರಿದಂತೆ ಅತಿರಥ ಮಹಾರಥ ಕಾಂಗ್ರೆಸ್ ನಾಯಕರನ್ನ ಬಂಧಿಸಿ ಜೈಲಿಗೆ ತಳ್ಳಿತು.ಒಂದು ಮಾಹಿತಿಯ ಪ್ರಕಾರ ಒಟ್ಟು 148 ಕಾಂಗ್ರೆಸ್ ನಾಯಕರನ್ನು ಸೆರೆಮನೆಗೆ ಕಳುಹಿಸಿದರು ಎಂದು ತಿಳಿದು ಬರುತ್ತದೆ

ಅಂದೇ ಸಂಜೆ ಅಂದರೆ ಆಗಸ್ಟ್ 9 ರಂದು ಗೋವಾಲಿಯಾ ಟ್ಯಾಂಕ್ ಮೈದಾನದಲ್ಲಿ ಗಾಂಧೀಜಿಯವರು ಭಾಷಣ ಮಾಡುವವರಿದ್ದರು, ಆದರೆ ಆಂಗ್ಲರು ಅದಕ್ಕೆ ಅವಕಾಶ ನೀಡದೇ ಇದ್ದುದರಿಂದ ಆ ಸ್ಥಾನವನ್ನು ತುಂಬಲು ಕಸ್ತೂರಬಾ ಗಾಂಧಿಯವರು ಸೇವಾಗ್ರಾಮ ಆಶ್ರಮದಿಂದ ಬರುತ್ತಿದ್ದರು. ನಡು ದಾರಿಯಲ್ಲಿಯೇ ಕಸ್ತೂರಬಾ ಅವರನ್ನು ನಿಲ್ಲಿಸಿದ ಬ್ರಿಟಿಷ್ ಸರಕಾರ ಅವರನ್ನು



ಅರೆಸ್ಟ್ ಮಾಡಿ ಪುಣೆಯ ಜೈಲಿಗೆ ಕಳುಹಿಸಿತು. ಕೇವಲ 24 ಗಂಟೆಯಲ್ಲಿ ಎಲ್ಲ ಕಾಂಗ್ರೆಸ್ ನಾಯಕರನ್ನು ಅರೆಸ್ಟ್ ಮಾಡಿದ ಸರಕಾರ ದೇಶದ ಬೇರೆ ಬೇರೆ ಜೈಲುಗಳಿಗೆ ಹಾಕಿದರು. ಇದರಿಂದ ಆ ಚಳವಳಿಯ ಕಾವು ಎಷ್ಟಿತ್ತು ಅನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು.

ಅಷ್ಟೇ ಅಲ್ಲದೆ ಕಾಂಗ್ರೆಸ್‌ನ್ನು ನೀತಿ ಬಾಹಿರ ಸಂಸ್ಥೆ ಎಂದು ಘೋಷಿಸಿ ಕಾಂಗ್ರೆಸಿನ ಕೇಂದ್ರ ಕಚೇರಿ ಮತ್ತು ಪ್ರಾಂತೀಯ ಕಚೇರಿಗಳನ್ನು ನಿಷೇಧ ಮಾಡಿ, ಅಹಮದಾಬಾದಿನಲ್ಲಿದ್ದ ಕಾಂಗ್ರೆಸ್ಸಿನ ಕೇಂದ್ರ ಕಚೇರಿಯನ್ನು ವಶಪಡಿಸಿಕೊಂಡು ಅಲ್ಲಿರುವ ನಿಧಿಯನ್ನು ಮುಟ್ಟುಗೋಲು ಹಾಕಿಕೊಂಡಿತು ಮತ್ತೂ ಗಾಂಧೀಜಿಯವರು ಪ್ರಕಟಿಸುತ್ತಿದ್ದ ಪ್ರಸಿದ್ಧವಾದ ಹರಿಜನ ಪತ್ರಿಕೆಯನ್ನು ಬ್ಯಾನ್ ಮಾಡಿತು.

ಇವುಗಳ ಜೊತೆಗೆ ಗಾಂಧೀಜಿಯವರು ಯಾವುದೇ ಪತ್ರಿಕೆಗಳಿಗೆ ಯಾವುದೇ ಹೇಳಿಕೆಗಳನ್ನು ಕೊಡದಂತೆ ನಿರ್ಬಂಧ ಹೇರಿತು. ಬ್ರಿಟಿಷರ ಈ ದಮನಕಾರಿ ನೀತಿಯಿಂದ ರೊಚ್ಚಿಗೆದ್ದ ಭಾರತೀಯರು ಗಾಂಧೀಜಿಯವರು ನೀಡಿದ ಕರೆ 'ಮಾಡು ಇಲ್ಲವೇ ಮಡಿ' ಗೆ ಸಿದ್ದರಾದರು. ಕೋರ್ಟು– ಕಚೇರಿಗಳಿಂದ ವಕೀಲರು, ಶಾಲಾ–ಕಾಲೇಜುಗಳಿಂದ ವಿದ್ಯಾರ್ಥಿಗಳು ಅಧ್ಯಾಪಕರು ಹೊರಗೆ ಬಂದರು. ಕಾರ್ಮಿಕರು ಮುಷ್ಕರ ನಡೆಸಿದರು ವಿದ್ಯಾರ್ಥಿಗಳು ಯಾವಾಗ ಹೊರಗೆ ಬಂದರೋ ಚಳವಳಿ ಹಿಂಸಾ ರೂಪಕ್ಕೆ ತಿರುಗಿತು. ರೈಲು ನಿಲ್ದಾಣಗಳನ್ನು, ಪೋಸ್ಟ್ ಆಫೀಸ್ ಗಳನ್ನು, ಅಂಚೆ ಕಚೇರಿಗಳನ್ನು ಮುತ್ತಿಗೆ ಹಾಕಿ ರೈಲು ಕಂಬಿಗಳನ್ನು ಕೀಳಲಾಯಿತು. ಟೆಲಿಫೋನ್ ವೈರ್ ಗಳನ್ನು ಹರಿದು ಸರ್ಕಾರಿ ಕಟ್ಟಡಗಳನ್ನು ಧ್ವಂಸ ಮಾಡಲಾಯಿತು. ರೈಲು ಡಬ್ಬಿಗಳನ್ನ ಆಕ್ರೋಶದಿಂದ ಸುಟ್ಟು ಹಾಕಲಾಯಿತು. ಸೇನಾ ವಾಹನಗಳನ್ನು ಬೆಂಕಿ ಹಚ್ಚಿ ಸುಡಲಾಯಿತು ಹೀಗೆ ಇಡೀ ದೇಶ ಕಾದ ಕಬ್ಬಿಣದ ಬಾಣಲೆಯಂತಾಯಿತು. ರೊಚ್ಚಿಗೆದ್ದ ಚಳವಳಿಗಾರರನ್ನು. ಹತ್ತಿಕ್ಕಲು ಭಾರತೀಯರ ಮೇಲೆ ಕಂಡಲ್ಲಿ ಗುಂಡು ಹಾಕಲು ಆಂಗ್ಲರು ಆದೇಶ ನೀಡಿದರು.ಸಿಕ್ಕವರನ್ನು ಥಳಿಸಿದರು,ದಂಡ ಕಟ್ಟಿದರು. ಲಾಟಿ ಚಾರ್ಜ್ ಮಾಡಿದರು.

ಆ ಸಂದರ್ಭದಲ್ಲಿ ಅಂದಾಜು ಒಂದು ಕೋಟಿಯಷ್ಟು ದಂಡವನ್ನು ವಸೂಲಿ ಮಾಡಲಾಯಿತು ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.ಉತ್ತರ ಭಾರತದ ಬಿಹಾರ, ಬಂಗಾಳ, ದಕ್ಷಿಣ ಭಾರತದ ಮಧುರೈ, ಮದ್ರಾಸ್ ಹೀಗೆ ದೇಶದ ವಿವಿಧ ಕಡೆ ಅತಿಯಾದ ಹಿಂಸೆ ನಡೆದು ಚಳವಳಿಗಾರರ ಮೇಲೆ ಗುಂಡುಗಳನ್ನ ಹಾರಿಸಲಾಯಿತು. ಆಗಸ್ಟ್ ತಿಂಗಳಿನಿಂದ ಶುರುವಾಗಿ ಆ ವರುಷದ ಕೊನೆಗೆ ಸಾವಿರಾರು ಜನರ ಮೇಲೆ ಗೋಲಿಬಾರ್ ಮಾಡಲಾಯಿತು. ಆ ಹೊಡೆತಕ್ಕೆ ಸಾವಿರಾರು ಜನರು ಅಸು ನೀಗಿದರು.

ಆ ಸಂದರ್ಭದಲ್ಲಿ ಬ್ರಿಟಿಷ್ ಪತ್ರಕರ್ತ ಒಬ್ಬರು ನೀಡಿದ ವರದಿಯಂತೆ ಒಟ್ಟು 940 ಜನರು ಮೃತರಾಗಿ ಅದಕ್ಕಿಂತಲೂ ಹೆಚ್ಚು ಜನರು ಗಾಯಗೊಂಡರು ಎಂದು. ಇದನ್ನು ಪಂಡಿತ ನೆಹರೂ ಅವರು ಒಪ್ಪಲಿಲ್ಲ ಅವರ ಹೇಳಿಕೆಯ ಪ್ರಕಾರ ಅಂದಾಜು 10,000 ಜನರು ಮೃತರಾಗಿದ್ದರು ಎಂದು.

ಅರೆಸ್ಟ್ ಆಗಿದ್ದ ಸುಮಾರು 60 ಸಾವಿರಕ್ಕಿಂತಲೂ ಅಧಿಕ ಜನರು ದೇಶದ ವಿವಿಧ ಜೈಲುಗಳಿಗೆ ಭರ್ತಿಯಾದರು, ಸುಮಾರು 20 ಸಾವಿರ ಜನರಿಗೆ ಶಿಕ್ಷೆ ಆಯಿತು ಎಂದು ಇನ್ನೊಂದು ವರದಿ ಹೇಳುತ್ತದೆ. ವಾಯುದಾಳಿಯಲ್ಲಿ ಸತ್ತವರ ಸಂಖ್ಯೆ ಅಂದಾಜು 400 ಗಾಯಗೊಂಡವರ ಸಂಖ್ಯೆ ಅಂದಾಜು 600 ಎಂದು 1943 ಫೆಬ್ರವರಿ 12ರಂದು ಬ್ರಿಟಿಷರು ನೀಡಿದ ವರದಿಯಲ್ಲಿ ಈ ಅಂಶ ದಾಖಲಾಗಿದೆ. ಜನರಿಗೆ ಮಾರ್ಗದರ್ಶನ ನೀಡಲು ಇದ್ದ ನಾಯಕರನ್ನು ಜೈಲಿಗೆ ಹಾಕಿದ್ದರಿಂದ ಇಷ್ಟೊಂದು ಹಿಂಸಾಚಾರ ನಡೆಯಲು ಕಾರಣ ಎಂದು ಇತಿಹಾಸ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಹೋರಾಟಕ್ಕೆ ಕರೆ ಕೊಟ್ಟ ಕೆಲವೇ ಘಂಟೆಗಳಲ್ಲಿ ಗಾಂಧೀಜಿಯೂ ಸೇರಿದಂತೆ ವಿವಿಧ ನಾಯಕರನ್ನು ಅರೆಸ್ಟ್ ಮಾಡಿದ್ದರಿಂದ ಜನರು ರೊಚ್ಚಿಗೆದ್ದರು. ಅವರಿಗೆ ಮಾರ್ಗದರ್ಶನ ಇಲ್ಲದೆ ಇರುವುದು ಸಹ ಹಿಂಸಾಚಾರಕ್ಕೆ ಕಾರಣವಾಯಿತು. ಪ್ರಮುಖ ನಾಯಕರ ನಾಯಕತ್ವ ಇಲ್ಲದೆ ಇರುವುದರಿಂದ ರೊಚ್ಚಿಗೆದ್ದ ಜನರು ಮನಸ್ಸಿಗೆ ಬಂದಂತೆ ಹಿಂಸೆಯಲ್ಲಿ ತೊಡಗಿ ತಮ್ಮ ಮೂಲ ಉದ್ದೇಶವನ್ನೇ ಮರೆತರು.

ಸ್ವಲ್ಪ ದಿನಗಳ ಕಾಲ ಈ ಚಳವಳಿಯನ್ನು ಮುಂದೆ ನಡೆಸಿದವರು ಜಯಪ್ರಕಾಶ್ ನಾರಾಯಣ್ ಅವರು. ಇವರ ಜೊತೆಗೆ ಇನ್ನೊಂದು ಹೆಸರನ್ನು ಸ್ಮರಿಸುವುದಾದರೆ ಧೈರ್ಯಶಾಲಿ ಅರುಣಾ ಆಸಫ್ ಅಲಿ ಅವರದು. ಆ ಉದ್ವಿಗ್ನ ವಾತಾವರಣದಲ್ಲಿ ಮಹಿಳಾ ಸಿಂಹಿಣಿಯಾಗಿ ಗೋವಾಲಿಯ ಟ್ಯಾಂಕ್ ಮೈದಾನವನ್ನು ಪ್ರವೇಶ ಮಾಡಿದ ಅರುಣಾ ಸಾವಿರಾರು ಜನರ ಸಮ್ಮುಖದಲ್ಲಿ ಬ್ರಿಟಿಷ ದಂಡಿನ ನಡುವೆ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿ ಭೂಗತರಾದರು. ಒಂದು ಕಡೆ ಗಾಂಧೀಜಿಯವರ ಕರೆಯಂತೆ ದೇಶ ವಾಸಿಗಳು ಹೋರಾಟವನ್ನು ಮುಂದುವರಿಸಿದ್ದರೆ, ಇನ್ನೊಂದು ಕಡೆ, ದೇಶದ ಹೊರಗಿನಿಂದ ನೇತಾಜಿ ಬೋಸ್‌ರು 'ಇಂಡಿಯನ್ ನ್ಯಾಷನಲ್ ಆರ್ಮಿ'ಯ ಮುಖಾಂತರ ದಾಳಿ ಮಾಡುತ್ತ ಬರುತ್ತಿದ್ದರು. ಈ ನಡುವೆಯೂ ಕೆಲವು ಇತಿಹಾಸಕಾರರು ಗಾಂಧೀಜಿಯವರ ಶಾಂತಿಯ ಹೋರಾಟ ನೇತಾಜಿಯವರ ಕ್ರಾಂತಿಯ ಹೋರಾಟ ವಿಫಲವಾಯಿತು ಎಂದು ಅಭಿಪ್ರಾಯಪಡುತ್ತಾರೆ.

ನೆಹರೂ ನಾಯಕತ್ವದಲ್ಲಿ ಸಂಧಾನ ಹಾಗೂ ರಾಜಿಯ ಮೂಲಕ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎಂದು ಡಾಕ್ಟರ್ ಬ್ಯಾನರ್ಜಿ ಅಭಿಪ್ರಾಯ ಪಡುತ್ತಾರೆ. Quit India ಚಳವಳಿಯು ಕೊನೆಯ ಹಂತದಲ್ಲಿ ವಿಫಲ ಆದರೂ ಸಹಿತ 1947ರ ಆಗಸ್ಟ್ 15ರ ಸ್ವಾತಂತ್ರ್ಯ ದಿನಕ್ಕೆ ಅಡಿಪಾಯ ಹಾಕಿತು ಎಂದು ಡಾಕ್ಟರ್ ಅಂಬಾ ದಾಸ್ ಹೇಳುತ್ತಾರೆ.

ಒಟ್ಟಿನಲ್ಲಿ ಈ ಚಳವಳಿಯ ನಂತರ ಬ್ರಿಟಿಷರಿಗೆ ಅನಿಸಿದ್ದೇನು ಅಂದರೆ ಇನ್ನು ಮುಂದೆ ಭಾರತದಲ್ಲಿ ನಮ್ಮ ಆಳ್ವಿಕೆ ಸಾಧ್ಯ ಇಲ್ಲ ಎಂದು. ಯಾಕೆಂದರೆ ಭಾರತೀಯರ ಮೇಲೆ ಬ್ರಿಟಿಷರ ದೌರ್ಜನ್ಯ ಮಿತಿಮೀರಿತ್ತು. ಭಾರತದಲ್ಲಿ ಉಳಿಯಲು ಅನರ್ಹರು ಎಂಬ ಭಾವ ಭಾರತೀಯರಲ್ಲೂ ಮೂಡಿತ್ತು.


ಕೊನೆಯದಾಗಿ ಹೇಳುವುದಾದರೆ, ಭಾರತ ಸ್ವಾತಂತ್ರ್ಯ ಚಳವಳಿಯ ಇತಿಹಾಸದ ಪುಟಗಳಲ್ಲಿ ಈ ಕ್ವಿಟ್ ಇಂಡಿಯಾ ಆಂದೋಲನ ಒಂದು ಮೈಲುಗಲ್ಲಾಗಿ ಉಳಿಯುತ್ತದೆ. 1917ರಲ್ಲಿ ಜರುಗಿದ ಚಂಪಾರಣ್ ಸತ್ಯಾಗ್ರಹ ಮೊದಲಾದರೆ, 1942 ರಲ್ಲಿ ಜರುಗಿದ ಕ್ವಿಟ್ ಇಂಡಿಯಾ ಚಳವಳಿ ಗಾಂಧೀಜಿಯವರ ಹೋರಾಟದ ಕೊನೆಯ ಚಳವಳಿಯಾಗಿತ್ತು ಎಂದು ಹೇಳಬಹುದು

– ನೇತಾಜಿ ಗಾಂಧಿ (ಬಿಜಾಪುರ)

■



"ವಕೀಲರಾಗಿ ಗಾಂಧಿ"
ಪುಸ್ತಕ ಬಿಡುಗಡೆ....



ನವದೆಹಲಿಯಲ್ಲಿರುವ ರಾಷ್ಟ್ರೀಯ ಗಾಂಧಿ ಸ್ಮಾರಕ ಮ್ಯೂಸಿಯಂ ನ ನಿರ್ದೇಶಕರಾದ ಎ ಅಣ್ಣಾಮಲೈ ಅವರು ಬರೆದಿರುವ 'Gandhi The lawyer ' ಪುಸ್ತಕವನ್ನು ಬಿಡುಗಡೆ ಮಾಡಿದ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್. ಎನ್ ನಾಗಮೋಹನ ದಾಸ್ ಅವರು "ಯಾವ ಕ್ರಾಂತಿಯೂ ತರಲಾರದ ಕ್ರಾಂತಿಯನ್ನು ಪುಸ್ತಕ ಕ್ರಾಂತಿ ತಂದಿದೆ' ಎಂದು ಹೇಳಿದರು. ಇದಕ್ಕಾಗಿ ನಾವು ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿ ನಮ್ಮ ಜ್ಞಾನವನ್ನು ಹೆಚ್ಚಿಸಿ ಕೊಳ್ಳ ಬೇಕು. ಸಮಾಜದ ಒಳಿತಿಗಾಗಿ ಈ ಜ್ಞಾನವನ್ನು ಬಳಸಿಕೊಳ್ಳ ಬೇಕು ಎಂದು ಕರೆ ನೀಡಿದರು.

ಮಹಾತ್ಮ ಗಾಂಧಿಯವರ ಬಗ್ಗೆ ಹಲವಾರು ಪುಸ್ತಕಗಳು ಬಂದಿವೆ. ಸಿನಿಮಾ ಬಂದಿದೆ. ಆದರೆ ಅವರು ವಕೀಲರಾಗಿ ಬೆಳೆದು ಬಂದ ಕತೆಯನ್ನು ವಿವರವಾಗಿ ಸೂಕ್ಷ್ಮವಾಗಿ ತಿಳಿಸುವ ಪುಸ್ತಕಗಳು ಬಹಳ ಕಡಿಮೆ ಇವೆ. ಅಣ್ಣಾ ಮಲೈ ಅವರ ಈ ಪುಸ್ತಕ ಈ ಕೊರತೆಯನ್ನು ತುಂಬಿದೆ. ವಕೀಲರಾಗಿ ಗಾಂಧಿ ನಿರ್ವಹಿಸಿದ ಮತ್ತು ಸಾಧಿಸಿದ ಸಾಧನೆಗಳ ಬಗ್ಗೆ ಬೆಳಕು ಚೆಲ್ಲುವ ಇಂಥ ಪುಸ್ತಕ ಇವತ್ತಿನ ಅನಿವಾರ್ಯವಾಗಿತ್ತು. ಕಕ್ಷಿದಾರರ ನಡುವೆ ರಾಜಿ ಮಾಡಿಸಿ ಸುಲಭವಾಗಿ ಇಬ್ಬರಿಗೂ ನ್ಯಾಯ ಒದಗಿಸುವ ಕೆಲಸವನ್ನು ಗಾಂಧಿ ತಮ್ಮ ವಕೀಲಿಕೆಯ ಆರಂಭದ ದಿನಗಳಲ್ಲೇ ಯಶಸ್ವಿಯಾಗಿ ನಿರ್ವಹಿಸಿ ಹೆಸರು ಗಳಿಸಿದರು. ಸತ್ಯ ಶೋಧನೆಯಲ್ಲಿ, ನ್ಯಾಯದಾನ ನೀಡುವಲ್ಲಿ









ವಕೀಲರು ನ್ಯಾಯಾಲಯದ ನೆರವಿಗೆ ನಿಲ್ಲ ಬೇಕು. ಅದೇ ನಿಜವಾದ ವಕೀಲಿಕೆಯ ಸತ್ವ ಎಂದು ಅವರು ತಮ್ಮ ವಕೀಲ ವೃತ್ತಿಯುದ್ದಕ್ಕೂ ಇತರೆ ವಕೀಲ ಸಮೂಹಕ್ಕೆ ಮನದಟ್ಟು ಮಾಡಿದರು.

ಗಾಂಧಿ ವಕೀಲಿ ವೃತ್ತಿಯಲ್ಲಿ ವಿಫಲರಾಗಿದ್ದರು ಎಂದು ಹಲವಾರು ಜನರು ಸುಳ್ಳು ಮಾಹಿತಿಯನ್ನು ಹರಡುತ್ತಿದ್ದಾರೆ. ಆದರೆ ಗಾಂಧಿ ತಮ್ಮ ವಿಶಿಷ್ಟ ನಡವಳಿಕೆಯಿಂದ ವಕೀಲ ಸಮುದಾಯದಲ್ಲಿ ಬಹಳ ಜನಪ್ರಿಯರಾಗಿದ್ದರು. ತಾವು ವಕೀಲಿ ವೃತ್ತಿ ನಡೆಸುತ್ತಿದ್ದ ಆ ಕಾಲಕ್ಕೆ ಇಂಗ್ಲೆಂಡಿನಲ್ಲಿ ಗಾಂಧಿ ಕೈತುಂಬಾ ಆದಾಯ ಗಳಿಸುತ್ತಿದ್ದ ವಕೀಲರಾಗಿದ್ದರು. ಅವರು ಮನಸ್ಸು ಮಾಡಿದ್ದರೆ ಲಕ್ಷಾಂತರ ರೂಗಳ ಆದಾಯ ಗಳಿಸುವಷ್ಟು ಸಂಖ್ಯೆಯ ಕೇಸುಗಳು ಅವರ ಬಳಿ ಇದ್ದವು. ಅವರು ನ್ಯಾಯಾಲಯದಲ್ಲಿ ವಾದ ಮಾಡಿ ಕೇಸು ಗೆಲ್ಲುವುದಕ್ಕಿಂತ ಹೆಚ್ಚಾಗಿ ನ್ಯಾಯಾಲಯದ ಪ್ರೀತಿ ವಿಶ್ವಾಸಗಳಿಗೆ ಹೆಚ್ಚು ಪಾತ್ರರಾಗಿ ಕೇಸುಗಳನ್ನು ಗೆಲ್ಲುತ್ತಿದ್ದರು.

ಎಂಥ ಪರಿಸ್ಥಿತಿಯಲ್ಲೂ ಅವರು ನ್ಯಾಯಾಲಯದಲ್ಲಿ ಸುಳ್ಳು ಹೇಳಲಿಲ್ಲ.ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧ ನೀತಿಯ ವಿರುದ್ಧ ಹೋರಾಟ ಮಾಡುವ ಸಂದರ್ಭದಲ್ಲಿ ಸಹಜವಾಗಿಯೇ ಗಾಂಧಿ ಕಾನೂನು ಉಲ್ಲಂಘನೆ ಮಾಡುತ್ತಿದ್ದರು. ಆದರೆ ಅವರು ಅದನ್ನು ನ್ಯಾಯಾಲಯದ ಮುಂದೆ ನೇರವಾಗಿ ಒಪ್ಪಿಕೊಂಡು ಅದಕ್ಕೆ ಅನುಗುಣವಾದ ಶಿಕ್ಷೆಯನ್ನು ನೀಡುವಂತೆ ನ್ಯಾಯಾಲಯಕ್ಕೆ ಒತ್ತಾಯಿಸುತ್ತಿದ್ದರು. ಇಂಥ ಅಪರೂಪದ ನಡವಳಿಕೆಯಿಂದ ಗಾಂಧೀಜಿ ವಿಶಿಷ್ಟವಾಗಿ ಗುರುತಿಸಲ್ಪಡುತ್ತಿದ್ದರು. ತಮ್ಮ ಕಕ್ಷಿದಾರರು ಸುಳ್ಳು ಹೇಳಿದರೆ ಹಾಗೆ ಹೇಳದಂತೆ ಸಲಹೆ ನೀಡಿ ಸತ್ಯವನ್ನೇ ನ್ಯಾಯಾಲಯದ ಮುಂದೆ ಮಂಡಿಸುತ್ತಿದ್ದರು. ಇವೆಲ್ಲಾ ಗಾಂಧೀಜಿಯವರನ್ನು ವಕೀಲ ಸಮೂಹದಿಂದ ಭಿನ್ನವಾಗಿ ನಿಲ್ಲಿಸುತ್ತಿತ್ತು .

ದಕ್ಷಿಣ ಆಫ್ರಿಕಾದಲ್ಲಿ ಯಶಸ್ವೀ ವಕೀಲರಾಗಿ ಮತ್ತು ನಾಗರೀಕ ಅಸಹಕಾರ ಚಳವಳಿಯನ್ನು ಜನರಿಗೆ ಕಲಿಸಿದ ಗಾಂಧಿ ಇಂದಿನ ಯುವ ವಕೀಲರಿಗೆ ಮಾದರಿಯಾಗ ಬೇಕು. ಸತ್ಯಾಗ್ರಹ ಪರಿಕಲ್ಪನೆಯನ್ನು ಮೊಟ್ಟ ಮೊದಲ ಬಾರಿಗೆ ಹುಟ್ಟು ಹಾಕಿದ ಗಾಂಧಿ ಇಂದು ಇಡೀ ವಿಶ್ವವೇ ಅವರ ಅಹಿಂಸಾ ತತ್ವವನ್ನು ಒಪ್ಪಿ ಕೊಳ್ಳುವಂತೆ ಮಾಡಿದ ವಿಶ್ವ ನಾಯಕ. ಅವರ ಬಗ್ಗೆ ಪ್ರಕಟವಾಗುವ ಪ್ರತಿಯೊಂದು ಪುಸ್ತಕವೂ ಮುಂದಿನ ಪೀಳಿಗೆಗೆ ಓದುವ ಪುಸ್ತಕವಾಗ ಬೇಕು ಎನ್ನುವುದು ನನ್ನ ಆಶಯ. ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರಾದ ವಿವೇಕ್ ಸುಬ್ಬಾರೆಡ್ಡಿಯವರು 'ರಕ್ತರಹಿತ ಕ್ರಾಂತಿಯ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಟ್ಟವರು ಗಾಂಧಿ ಎಂದು ಯುರೋಪಿಯನ್ನರು ಇತಿಹಾಸದಲ್ಲಿ ಗುರುತಿಸಿದ್ದಾರೆ' ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು. ಬೆಂಗಳೂರು ವಿಶ್ವ ವಿದ್ಯಾಲಯದ ಕಾನೂನು ಕಾಲೇಜಿನ ಪ್ರಿನ್ಸಿಪಾಲ್ ಹಾಗೂ ಡೀನ್ ಆದ ಸುರೇಶ್ ವಿ ನಾಡಗೌಡರ್, ಪುಸ್ತಕದ ಲೇಖಕ ಎ ಅಣ್ಣಾ ಮಲ್ಯೆ ಮುಖ್ಯ ಅತಿಥಿಗಳಾಗಿದ್ದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ವೂಡೇ ಪಿ ಕೃಷ್ಣ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ■

ವಿಶ್ವವ್ಯಾಪಿ ಬಾಪೂ

ನಟ್ಟ ನಡು ರಾತ್ರಿಯಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡಲು ಕಾರಣೀಭೂತರಾದ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ನೇತಾರ, ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಪ್ರತಿಮೆಯನ್ನು ಅದೇ ಬ್ರಿಟಿಷರು (ಲಂಡನ್ ಪಾರ್ಲಿಮೆಂಟ್ ಚೌಕದಲ್ಲಿ) ತಮ್ಮ ನೆಲದಲ್ಲಿ ಪ್ರತಿಷ್ಠಾಪಿಸಿ ಕೊಂಡಿದ್ದಾರೆ.

2015 ನೇ ಇಸ್ವಿ ಮಾರ್ಚ್ 14ರಂದು ಅಂದಿನ ಕೇಂದ್ರ ಮಂತ್ರಿಗಳಾದ ಅರುಣ್ ಜೆಟ್ಲಿ ಅವರು ಬಾಪೂಜಿಯ ಪ್ರತಿಮೆಯನ್ನು ಲೋಕಾರ್ಪಣೆ ಮಾಡಿದರು. ಬ್ರಿಟನ್ ಪ್ರಧಾನಿ ಡೆವಿಡ್ ಕ್ಯಾಮೆರೂನ್, ಬಾಪೂ ಮೊಮ್ಮಗ ಗೋಪಾಲಕೃಷ್ಣ ಗಾಂಧಿ, ಹಿಂದಿ ಚಿತ್ರರಂಗದ ಮೇರು ನಟ ಅಮಿತಾಬ್ ಬಚ್ಚನ್ ಈ ಸಂದರ್ಭದಲ್ಲಿ ಹಾಜರಿದ್ದರು.


ಸುಮಾರು 9 ಅಡಿ ಎತ್ತರವಿರುವ ಬಾಪೂಜಿಯ ಕಂಚಿನ ಪ್ರತಿಮೆಯ ಶಿಲ್ಪಿ ಫಿಲಿಪ್ ಜಾಕ್ಸನ್.

ಸೌತ್ ಆಫ್ರಿಕೆಯ 21 ವರ್ಷಗಳ ಸಂಘರ್ಷದ ಬದುಕನ್ನು ಮುಗಿಸಿಕೊಂಡು ಸತ್ಯಾಗ್ರಹಿ ಗಾಂಧಿ ಭಾರತಕ್ಕೆ ಬಂದ ಸವಿನೆನಪಿಗಾಗಿ (1915–2015) ಈ ಪ್ರತಿಮೆಯನ್ನು ನಿರ್ಮಿಸಲಾಗಿದೆ.

ಪ್ರತಿಷ್ಠಿತ ಈ ಪಾರ್ಲಿಮೆಂಟ್ ಸ್ಕೈಯರ್ ನಲ್ಲಿ ಒಟ್ಟು 11 ಪ್ರತಿಮೆಗಳಿದ್ದು ಆ ಎಲ್ಲ ನಾಯಕರು ಆಯಾ ದೇಶದ ಬೇರೆ ಬೇರೆ ಹುದ್ದೆಯಲ್ಲಿದ್ದವರು ಮತ್ತು ಅಧಿಕಾರವನ್ನು ಅನುಭವಿಸಿದವರು,

ಆದರೆ ಯಾವುದೇ ಹುದ್ದೆಯನ್ನು ಅಲಂಕರಿಸದ, ಯಾವುದೇ ಅಧಿಕಾರವನ್ನು ಅನುಭವಿಸದ ರಾಜಕೀಯೇತರ ವ್ಯಕ್ತಿ ಎಂದರೆ ಅದು ನಮ್ಮ ಬಾಪೂಜಿ ಮಾತ್ರ. ಜೀವಮಾನದಲ್ಲಿ ಗಾಂಧಿಯನ್ನು ಎಂದೂ ಪ್ರೀತಿಸದ, ಕೊನೆಯವರೆಗೂ ವಿರೋಧಿಸಿ, ಸ್ವಾತಂತ್ರ್ಯ ಕೇಳಲು ಬಂದ ಭಾರತೀಯ ಬೆಗ್ಗರ್ ಎಂದು ಅವಮಾನಿಸಿ, ಅರೆಬೆತ್ತಲೆ ಫಕೀರ ಎಂದು ಮೂದಲಿಸಿದ ಬ್ರಿಟನ್ ಪ್ರಧಾನಿ ವಿನ್ಸಿನ್ ಚರ್ಚಿಲ್ ಪ್ರತಿಮೆ ಹಾಗೂ ಸೌತ್ ಆಫ್ರಿಕೆಯಲ್ಲಿ ಗಾಂಧಿ ಹೋರಾಟದಲ್ಲಿದ್ದಾಗ, ಎದೆಗೆ ಒದ್ದು ಜೈಲಿಗೆ ಹಾಕಿ, ಕೊಡಬಾರದ ಹಿಂಸೆ ಕೊಟ್ಟ ವಿಕೃತ ಮನಸಿನ ಸರ್ವಾಧಿಕಾರಿ ಧೋರಣೆಯ ಮಿಲ್ಟ್ರಿ ಅಧಿಕಾರಿ ಜನರಲ್ ಸ್ಮಟ್ಸ್ ಈ ಇಬ್ಬರೂ ಗಾಂಧೀಜಿಯವರ ರಾಜಕೀಯ ವೈರಿಗಳ ಪ್ರತಿಮೆ ನಡುವೆ ನಮ್ಮ ಗಾಂಧೀಜಿಯವರ ಪ್ರತಿಮೆಯನ್ನು ನಿಲ್ಲಿಸಿದ್ದು ಇಲ್ಲಿಯ ವಿಶೇಷವಾಗಿದೆ.

ಸಂಗ್ರಹ : ನೇತಾಜಿ ಗಾಂಧಿ



ಗಾಂಧಿ ಮತ್ತು ಕರ್ನಾಟಕ

ಭಾಗ –3

ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.



ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲೆ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.



ಕರ್ನಾಟಕಕ್ಕೆ ಮೊಟ್ಟಮೊದಲು ಗಾಂಧೀಜಿ ಬಂದದ್ದು 1919ರ ಮೇ ತಿಂಗಳಲ್ಲಿ. ಅದೇ ತಿಂಗಳಲ್ಲಿಯೇ ಅಹಮದಾಬಾದಿನ ಬಳಿ ಸತ್ಯಾಗ್ರಹ ಆಶ್ರಮವೂ ಸ್ಥಾಪಿತವಾಯಿತು. ಅದೇ ಕಾಲಕ್ಕೆ ಮೊಟ್ಟಮೊದಲನೇ ಕನ್ನಡ ಸಾಹಿತ್ಯ ಸಮ್ಮೇಳನವೂ ಬೆಂಗಳೂರಿನಲ್ಲಿ ನಡೆಯಿತು. ದಕ್ಷಿಣ ಆಫ್ರಿಕಾದಲ್ಲಿ ದಿಗ್ವಿಜಯ ಮಾಡಿ ಬಂದ ' ಕರ್ಮವೀರ ' ಎಂ.ಕೆ.ಗಾಂಧಿಯನ್ನು ಸ್ವಾಗತಿಸಲು ಬೆಂಗಳೂರು ನಗರ ಉತ್ಸಾಹದಿಂದ ತುಳುಕುತ್ತಿತ್ತು. ಮೈಸೂರಿನ ಸಾರ್ವಜನಿಕ ಜೀವನದಲ್ಲಿ, ನುಡಿಯ ಸೇವೆಯಲ್ಲಿ ಆ ವೇಳೆಗೆ ಆಗಲೇ ಒಂದು ಗೌರವ ಸ್ಥಾನವನ್ನು ಗಳಿಸಿಕೊಂಡಿದ್ದ ಕನ್ನಡನಾಡಿನ ಹಿರಿಯ ರಾಜಕಾರಣಿ ಸಾಹಿತಿ ಶ್ರೀ ಡಿ.ವಿ.ಗುಂಡಪ್ಪನವರು ಗಾಂಧೀಜಿಯನ್ನು ಬೆಂಗಳೂರಿಗೆ ಬರಮಾಡಿಕೊಳ್ಳಲು ಮದರಾಸಿನ ಶ್ರೀ ಜಿ.ಎ.ನಟೇಶನ್ ಅವರ ಸಂಗಡ ಪತ್ರವ್ಯವಹಾರ ಮಾಡಿದರು. ಆ ಕಾಲಕ್ಕೆ ರಾಷ್ಟ್ರೀಯ ಸಾಹಿತ್ಯವನ್ನು ಸುಲಭವಾಗಿ ಒದಗಿಸಿ ದಕ್ಷಿಣ ಭಾರತಕ್ಕೆ ಶ್ರೀ ಜಿ.ಎ.ನಟೇಶನ್ ಅತ್ಯಂತ ಸ್ತುತ್ಯ ಸೇವೆಯನ್ನು ಮಾಡಿ ಹೆಸರಾಗಿದ್ದರು.

ಆಫ್ರಿಕಾಕ್ಕೆ ಕನ್ನಡಿಗರ ಕಾಣಿಕೆ

ಆಗ ಶ್ರೀ ಡಿ.ವಿ. ಗುಂಡಪ್ಪನವರ "ಕರ್ನಾಟಕ' ಎಂಬ ಇಂಗ್ಲಿಷ್ ಪತ್ರಿಕೆ ಬೆಂಗಳೂರಿಂದ ಹೊರಡುತ್ತಿತ್ತು . ಶ್ರೀ ಜಿ.ಎ. ನಟೇಶನ್ ಗಾಂಧೀಜಿಯ ದಕ್ಷಿಣ ಆಫ್ರಿಕಾ ಸತ್ಯಾಗ್ರಹಕ್ಕೆ ದಕ್ಷಿಣ ಭಾರತದಲ್ಲಿ ನಿಧಿ ಕೂಡಿಸುವ ಕೆಲಸ ಕೈಕೊಂಡಿದ್ದರು. ಗುಂಡಪ್ಪನವರ 'ಕರ್ನಾಟಕ' ಪತ್ರಿಕೆಯಲ್ಲೂ ಒಂದು ಬಿನ್ನಹ ಬಂತು. ಮೈಸೂರು ಸಂಸ್ಥಾನಕ್ಕೆ ಆಗ ದಿವಾನರಾಗಿದ್ದವರು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ಅವರಿಂದ ನಿಧಿಗೆ ಇನ್ನೂರು ರೂಪಾಯಿ ದಾನ ಬಂತು. ಒಟ್ಟು 1800 ರೂಪಾಯಿ ಕೂಡಿತು. ಆ ನಿಧಿಯನ್ನು ಶ್ರೀ ನಟೇಶನ್ ಗಾಂಧಿ ಅವರಿಗೆ ಕಳಿಸಿದ್ದರು.

ಮೈಸೂರಿನವರು–ಕನ್ನಡಿಗರು ದಕ್ಷಿಣ ಆಫ್ರಿಕಾ ಹೋರಾಟಕ್ಕೆ ತಮ್ಮ ಕಾಣಿಕೆ ಸಲ್ಲಿಸಿದ್ದರಲ್ಲ ; ಈಗ ಅವರ ಕಡೆಯಿಂದ ಇಲ್ಲಿಗೆ ಬರಬೇಕು ಎಂಬ ಪ್ರಾರ್ಥನೆ ಹೋದಾಗ ಗಾಂಧೀಜಿ ಮನ್ನಿಸಿದರು. ಅಂತೂ ಆ ಕರ್ಮವೀರರು ಮೇ ತಿಂಗಳ 8ನೇ ತಾರೀಖು ಬೆಂಗಳೂರಿಗೆ ಬರುವುದು ಗೊತ್ತಾಯಿತು. ಅದೇ ಮೊಟ್ಟ ಮೊದಲು (1915) ಗಾಂಧೀಜಿ ಬೆಂಗಳೂರಿಗೆ ಬಂದದ್ದು.

ಮದರಾಸಿನಿಂದ ಶ್ರೀ ನಟೇಶನ್ ಜೊತೆಯಲ್ಲಿ ಗಾಂಧೀ ಪರಿವಾರ ಬಂದಿತು . ಗಾಂಧೀ ದಂಪತಿಗಳು ಇಬ್ಬರೂ ಬಂದರು. ಈಗಿನಂತೆ ಮದರಾಸ್ ಮೈಲ್ ಬೆಂಗಳೂರಿಗೆ ಬೆಳಗ್ಗೆ ಬರುತ್ತಿತ್ತು. ಗಾಂಧೀಜಿ ಯಾವಾಗಲೂ ಮೂರನೇ ತರಗತಿ ಪ್ರಯಾಣಿಕರು. ಅವತ್ತು ಮಾತ್ರ ಮೊದಲನೆ ತರಗತಿಯಲ್ಲಿ ಬಂದರು. ಶ್ರೀ ನಟೇಶನ್ಗೆ ದೇಹಾಲಸ್ಯ. ಅವರನ್ನು ನೋಡಿಕೊಂಡು ಆರೈಕೆ ಮಾಡಬೇಕಲ್ಲ. ಅದಕ್ಕಾಗಿ ಅವತ್ತು ಅವರ ಜೊತೆಯಲ್ಲೇ ಗಾಂಧೀಜಿ ಬಂದರು.

ಆಗಲೇ ಗಾಂಧೀಜಿಯ ಕೀರ್ತಿ ಭರತಖಂಡದಲ್ಲೆಲ್ಲ ವ್ಯಾಪಿಸಿತ್ತು. ಅಷ್ಟಾದರೂ ಸರಳತೆಯಿಂದ ತುಂಬಿ ತುಳುಕುತ್ತಿದ್ದ ಗಾಂಧೀಜಿಯನ್ನು ನೋಡಿ ಬೆಂಗಳೂರಿನ ಜನ ಬೆರಗಾದರು. ಗಾಂಧೀಜಿಯ ಪೋಷಾಕಿನಲ್ಲಿ ಅಂತಸ್ತು ಯಾವುದೂ ಇರಲಿಲ್ಲ. ಅಚ್ಚ ಗುಜರಾತಿ ಕಾಠೇವಾಡಿಯ ಹಾಗೆ ಅವರ ಬದುಕು. ಒಂದು ಕಸೆ ಅಂಗಿ, ಒಂದು ಗುಜರಾತಿ ಪೇಟಾ, ಒಂದು ಧೋತರ. ಕಸ್ತೂರಬಾನೂ ಅಷ್ಟೇ. ಒಂದು ಕೆಂಪು ಅಂಚಿನ ಬಿಳಿ ಸೀರೆ, ಸ್ವಚ್ಛ, ಶುಭ್ರ. ಗಾಂಧೀಜಿಯದ್ದೂ ಅದೇ ಸರಳತೆ. ಅವರ ಸಾಮಾನೂ ಬಹಳ ಸ್ವಲ್ಪ. ಒಂದು ಕೈಗಂಟು , ನೀರು ಕುಡಿಯುವ ಒಂದು ಹೂಜಿ. ಅವನ್ನು ತೆಗೆದುಕೊಂಡೇ ರೈಲಿಂದ ಇಳಿದರು ಗಾಂಧೀಜಿ. ಈ ಲೋಕನಾಯಕ ಇಷ್ಟು

ಸರಳ, ಸಾದಾ ರೈತನ ಹಾಗೆ ಇರುತ್ತಾನೆ ಎಂದು ಬೆಂಗಳೂರಿನವರಿಗಂತೂ ಅನಿಸಿರಲಿಲ್ಲ. ಅವರನ್ನು ಗುರುತಿಸುವುದು ಸ್ವಾಗತಿಸಲು ಬಂದಿದ್ದವರಿಗೆ ಸ್ವಲ್ಪ ಕಷ್ಟವೇ ಆಯಿತು.

ಸತ್ಯಾಗ್ರಹದ ನಾಯಕ, ಅಹಿಂಸಾವೀರ ಇಂಥವರಿಗೆ ಭವ್ಯ ಸ್ವಾಗತ ನೀಡಬೇಡವೆ? ಬೀದಿಯಲ್ಲಿ ಬಣ್ಣ ಬಣ್ಣದ ಪತಾಕೆಗಳನ್ನು ಕಟ್ಟಿ ಅಲಂಕರಿಸಿದ್ದರು. ಮದರಾಸಿನಲ್ಲಿಯೂ ಹೀಗೆಯೇ ಮಾಡಿದ್ದರು. ಆದರೆ ಈ ಅಚ್ಚ ಭಾರತೀಯನಿಗೆ ಇದೆಲ್ಲವೂ ಬೇಡವಾಗಿತ್ತು. ಇದು ಪಾಶ್ಚಾತ್ಯರ ಅನುಕರಣೆ. ಇದಕ್ಕಿಂತಲೂ ನಮ್ಮ ಹಳ್ಳಿಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಮಾಡುವಂತೆ ತಳಿರು–ತೋರಣ ಕಟ್ಟಿದ್ದರೆ ಚೆನ್ನು. ಅಲಂಕಾರಕ್ಕೆ ಅಲಂಕಾರ, ಸಂಪ್ರದಾಯಕ್ಕೆ ಸಂಪ್ರದಾಯ, ಮಿತವ್ಯಯಕ್ಕೆ ಮಿತವ್ಯಯ. ಗಾಂಧಿ ಮದರಾಸಿನಲ್ಲಿ ಮನಬಿಚ್ಚಿ ಅದ್ದೂರಿಯ ಸ್ವಾಗತ ಹಮ್ಮಿಕೊಂಡಿದ್ದಕ್ಕಾಗಿ ಅಲ್ಲಿಯ ವ್ಯವಸ್ಥಾಪಕರನ್ನ ಟೀಕಿಸಿದ್ದರು. ಪತ್ರಿಕೆಗಳಲ್ಲಿ ಇದು ಸುದ್ದಿಯಾಗಿ ಬಂದಿತು. ಅದನ್ನು ಓದಿ ಬೆಂಗಳೂರಿನವರು ಮೊದಲೇ ಎಚ್ಚೆತ್ತುಗೊಂಡರು . ರಾತ್ರೋರಾತ್ರಿ ಆ ಬಾವುಟಗಳನ್ನು ಬಿಚ್ಚಿಸಿದರು. ಅದರ ಬದಲು ಮಾವಿನ ತಳಿರು ತೋರಣಗಳನ್ನು ಕಟ್ಟಿದರು. ಬಾಳೆಯ ಕಂಬಗಳನ್ನು ನಿಲ್ಲಿಸಿದರು. ಎಲ್ಲವೂ ಶುಭ ಸಂಕೇತ. ಬ್ಯಾಂಡನ್ನು ಬಿಟ್ಟರು. ಆಗಲೇ ಬ್ಯಾಂಡ್ ಜನಪ್ರಿಯ ಎಂದೆನಿಸಿ ಕೊಂಡಿತ್ತು. ಆಡಂಬರಕ್ಕೆ, ಶ್ರೀಮಂತಿಕೆಗೆ ಬ್ಯಾಂಡ್ ಮುಖ್ಯ . ಬ್ಯಾಂಡ್ ವಾದ್ಯಗಾರರಿಗೆ ಹೆಚ್ಚು ದುಡ್ಡು ಕೊಡಬೇಕಲ್ಲ. ಆದರೆ ಸ್ವಾಗತ ಸಮಿತಿಯವರು ಇದರಲ್ಲೂ ಮಾರ್ಪಾಟು ಮಾಡಿದರು. ಅದನ್ನು ಕೈಬಿಟ್ಟು ಸೊಗಸಾದ ನಾಗಸ್ವರವನ್ನು ಏರ್ಪಡಿಸಿದರು. ಓಲಗ ಬಹಳ ಚೆನ್ನಾಗಿತ್ತು ಆಮೇಲೆ ಓಲಗವೇ ಸಂಪ್ರದಾಯ ಆಯಿತು.

ಗಾಂಧೀಜಿ ಬಂದರು

ಗಾಂಧೀಜಿ ಕಸ್ತೂರಬಾ ಇಬ್ಬರೂ ರೈಲು ಇಳಿದು ಸ್ಟೇಷನ್ನಿನಿಂದ ಹೊರಬಿದ್ದರು. ಅವರಿಗಾಗಿ ಕುದುರೆ ಗಾಡಿ ಸಿದ್ಧವಾಗಿ ನಿಂತಿತ್ತು. ಈ ಸುಪ್ರಸಿದ್ಧ ಅತಿಥಿಗಳನ್ನು ಮೆರವಣಿಗೆಯ ಮೂಲಕ ಬಿಡಾರಕ್ಕೆ ಕರೆದೊಯ್ಯಬೇಕಲ್ಲ. ಶುಭದಿನಗಳಲ್ಲಿ ಸಾಮಾನ್ಯ ಅತಿಥಿಗಳಿಗೇ ಈ ಮರ್ಯಾದೆ ನಡೆಯುತ್ತದೆ. ಲೋಕ ವಿಖ್ಯಾತ ಅತಿಥಿ. ಮೊದಲ ಬಾರಿಗೆ ಬಂದಿದ್ದಾರೆ. ಅವರಿಗಾಗಿ ಮೆರವಣಿಗೆ ಸಜ್ಜು ಆಗಿತ್ತು. ವಿದ್ಯಾರ್ಥಿಗಳಿಗೆ ಇಷ್ಟರಿಂದ ಖುಷಿ ಆದೀತೆ? ವಿದ್ಯಾರ್ಥಿಗಳು ಎಂದರೆ ಆಗಲೂ ಒಂದೇ ಈಗಲೂ ಒಂದೇ. ಅತ್ಯುತ್ಸಾಹ. ವಿದ್ಯಾರ್ಥಿಗಳು ಬಂದರು. ಸಾರೋಟಿಗೆ ಕಟ್ಟಿದ್ದ ಕುದುರೆಗಳನ್ನು ಬಿಚ್ಚಿದರು. "ನೀವು ಕುಳಿತುಕೊಳ್ಳಿ, ನಾವು ಗಾಡಿಯನ್ನು ಎಳೆಯುತ್ತೇವೆ. ಗಾಂಧೀಜಿಗೆ ತಮ್ಮ ಗೌರವ ಸಲ್ಲಿಸಬೇಡವೆ? ಆದರೆ ಗಾಂಧೀಜಿ ಒಪ್ಪಬೇಕಲ್ಲ_ ನರವಾಹನರಾಗಿ ಬರುವುದುಂಟೆ ? ಅದು ಅಮಾನುಷ

"ಮನುಷ್ಯ ಮನುಷ್ಯನಿಗೆ ಅಗೌರವ ಮಾಡಿದಂತೆ" (Man's inhumanity to man) ಅವರು ಗಾಡಿಯಲ್ಲಿ ಕುಳಿತುಕೊಳ್ಳಲು ಒಪ್ಪಲಿಲ್ಲ. ಖಂಡಿತ ಆಗುವುದಿಲ್ಲ ಎಂದರು. ಸ್ಟೇಷನ್ನಿನಿಂದ ಬಿಡಾರ ಎಷ್ಟು ದೂರ ಎಂದು ಕೇಳಿದರು. ಸುಮಾರು ಅರ್ಧ ಮೈಲಿ ಎಂದು ತಿಳಿಯಿತು. "ಹಾಗಾದರೆ ನಡೆದೇ ಹೋಗೋಣ' ಎಂದರು. ವಿಧಿಯಿಲ್ಲ. ಕಾಲು ನಡಿಗೆಯಲ್ಲೇ ಮೆರವಣಿಗೆ ಆಯಿತು. ಜಯಘೋಷ ಮುಗಿಲನ್ನು ಮುಟ್ಟಿತು .

ಅಂತೂ ಬಿಡಾರಕ್ಕೆ ಗಾಂಧೀಜಿ ಬಂದರು. ಈ ಬಿಡಾರವೂ ಬಹಳ ದೂರ ಇರಲಿಲ್ಲ. ಈಗ ಆನಂದರಾವ್ ವೃತ್ತ ಇದೆಯಲ್ಲ, ಅದರ ಬಳಿಯಲ್ಲಿಯೇ ಶೇಷಾದ್ರಿ ರೋಡಿನಲ್ಲಿರುವ ನಾಲ್ಕನೆಯ ಬಿಡಾರ. ಜಿಲ್ಲಾ ನ್ಯಾಯಾಧೀಶರು ಶ್ರೀ ಬಿ.ಎಸ್. ಕೃಷ್ಣಸ್ವಾಮಿ ಅಯ್ಯಂಗಾಯರ್ ರು ಅಲ್ಲಿ ಹೊಸತಾಗಿ ಮನೆ ಕಟ್ಟಿಸಿದ್ದರು. ಈಗ ಹೆಬ್ಬಾರ್ ಶ್ರೀವೈಷ್ಣವ ಸಭಾ ಇದೆಯಲ್ಲ ಅದರ ಎದುರಿಗೆ . ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್ಯರು ನಿವೃತ್ತರಾಗಿದ್ದರು .ಅವರ ಮಗ ಶ್ರೀ ಬಿ. ಕೆ. ಶ್ರೀನಿವಾಸ ಅಯ್ಯಂಗಾರ್ಯರು ಸೆಂಟ್ರಲ್ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್. ಆ ಬಂಗ್ಲೆ ಹೊಸದು. ಇನ್ನೂ ಗೃಹಪ್ರವೇಶ ಆಗಿರಲಿಲ್ಲ ಶಾಸ್ತ್ರೋಕ್ತವಾಗಿ. ಅಂಥಲ್ಲಿ ಇಂಥ ದೊಡ್ಡವರ ಪಾದಧೂಳಿ ಬಿದ್ದರೆ ಶುಭ ಅಲ್ಲವೆ. ಶ್ರೀ ಅಯ್ಯಂಗಾರ್ಯರು ಇಡೀ ಮನೆಯನ್ನೇ ಗಾಂಧೀಜಿಯ ಬಿಡಾರಕ್ಕೆ ಬಿಟ್ಟುಕೊಟ್ಟಿದ್ದರು.

ಮನೆಯ ಬಾಗಿಲಿಗೆ ಬಂದೊಡನೆ ಗಾಂಧೀ ದಂಪತಿಗಳಿಗೆ ಆರತಿ ಎತ್ತಿದರು. ಒಳಗೆ ಸ್ನಾನ, ಊಟ, ತಿಂಡಿ ಎಲ್ಲ ವ್ಯವಸ್ಥೆಯೂ ಸಮರ್ಪಕ ಆಗಿತ್ತು. ಐರಿಷ್ ಪ್ರೆಸ್ಸಿನ ಶ್ರೀ ಕೆ.ಎಸ್. ಕೃಷ್ಣಯ್ಯರ್ ಮೇಲ್ವಿಚಾರಕರು ಎಂದ ಮೇಲೆ ಅದರಲ್ಲಿ ಲೋಪ ಇಲ್ಲ ಎಂದು ಬೆಂಗಳೂರಿನ ಅನುಭವ. ಮುಂದೆ ಶ್ರೀ ಕೃಷ್ಣಯ್ಯರ್ ಅವರು ದೇಶೀಯ ವಿದ್ಯಾಶಾಲೆಯಲ್ಲಿ ಉಪಾಧ್ಯಾಯರೂ ಮುಖ್ಯೋಪಾಧ್ಯಾಯರೂ ಆದರು.

ಗಾಂಧೀಜಿಯ ಊಟ

ಆಗ ಗಾಂಧೀಜಿ ತಿನ್ನುತ್ತಿದ್ದುದು ನೆಲಗಡಲೆ ಬೀಜ, ಹಣ್ಣುಹಂಪಲು. ಅದೂ ಕೂಡ ಇಷ್ಟೇ ಎಂದು ಮಿತಿ. ಇದೆಲ್ಲವನ್ನೂ ಶ್ರೀ ಕೃಷ್ಣಯ್ಯರ್ ಮೊದಲೇ ತಿಳಿದುಕೊಂಡಿದ್ದರು. ಅತಿಥಿಗೆ ರಾಜೋಪಚಾರ ಬೇಡವೆ? ಬೆಂಗಳೂರಿನ ನಾಗರಿಕರ ಅಭಿಪ್ರಾಯವೂ ಹಾಗೆಯೇ ಇತ್ತು. ಅದನ್ನು ಶ್ರೀ ಡಿ.ವಿ.ಗುಂಡಪ್ಪನವರ ಮಾತಿನಲ್ಲಿಯೇ ಮುಂದೆ ತಿಳಿಸುತ್ತೇನೆ. ಅಂತೂ ಬೆಲೆ ಬಾಳುವ ಸೇಬಿನ ಹಣ್ಣನ್ನು ತರಿಸಿದ್ದರು. ಇಷ್ಟು ಬೆಲೆಯದು ಏಕೆ ಎಂದು ಗದರಿದರು ಗಾಂಧೀಜಿ. ಅದನ್ನು ಬಿಟ್ಟು ಅಲ್ಲಿದ್ದ ಪರಂಗಿ ಹಣ್ಣನ್ನು ತಿಂದರು. ಪರಂಗಿ ಹಣ್ಣು ಗಾಂಧೀಜಿಗೆ ತುಂಬಾ ಇಷ್ಟ .

ಬೆಂಗಳೂರಿನ ಮೊಟ್ಟ ಮೊದಲಿನ ಸಾರ್ವಜನಿಕ ಕಾರ್ಯಕ್ರಮ ಶ್ರೀ ಗುಂಡಪ್ಪನವರ ಸೋಷಿಯಲ್ ಕ್ಲಬ್ ಏರ್ಪಡಿಸಿತ್ತು. ಸ್ಥಳ ಆಗಿನ ಗೌವರ್ನಮೆಂಟ್ ಹೈಸ್ಕೂಲ್ ಸಭಾಭವನ. ಈಗ ಅದು ಆರ್ಟ್ಸ್ ಮತ್ತು ಸೈಯನ್ಸ್ ಕಾಲೇಜು ಆಗಿದೆ. ಸಭೆಯಲ್ಲಿ ಅನೇಕರು ಗಣ್ಯವ್ಯಕ್ತಿಗಳು ನೆರೆದಿದ್ದರು. ನಿವೃತ್ತ ದಿವಾನ್ ಸರ್.ಟಿ. ಆನಂದರಾಯರು ಯಾವ ಸಾರ್ವಜನಿಕ ಸಭೆಯಲ್ಲೂ ಭಾಗವಹಿಸುತ್ತಿರಲಿಲ್ಲ. ವಿಶ್ರಾಂತಿ ಪಡೆಯುತ್ತಿದ್ದರು. ಅಂದಿನ ಸಭೆಗೆ ಅವರೂ ಬಂದಿದ್ದರು.

ಅವತ್ತು ಮೇ ತಿಂಗಳು 8ನೇ ತಾರೀಖು, 1915 ನೇ ಇಸವಿ. ಕಾರ್ಯಕ್ರಮ ಹೊತ್ತಿಗೆ ಸರಿಯಾಗಿ ಪ್ರಾರಂಭ ಆಯಿತು. ನಾಟ್ಯಕಳಾ ಪ್ರಪೂರ್ಣ ಬಳ್ಳಾರಿ ರಾಘವ ಅವರು ಸಭೆಗೆ ಬಂದಿದ್ದರು. ಮೊಟ್ಟ ಮೊದಲು ಕವಿ ಸಾರ್ವಭೌಮ ರವೀಂದ್ರನಾಥ ಠಾಕೂರರ ಗೀತಾಂಜಲಿಯಿಂದ ಕೆಲವು ಸಮಯೋಚಿತ ಕವನ (Leave this chanting and telling of beads) ಗಳನ್ನು ಇಂಗ್ಲಿಷಿನಲ್ಲಿ ವಾಚನ ಮಾಡಿದರು, ಬಲು ಸೊಗಸಾಗಿತ್ತು ವಾಚನ. ಕಾರ್ಯಕ್ರಮವೂ ಅದರಿಂದಲೇ ಪ್ರಾರಂಭ. ಆಮೇಲೆ ಗಾಂಧಿ ದಂಪತಿಗಳಿಗೆ

ಒಂದು ಬಿನ್ನವತ್ತಳೆಯನ್ನು ಸಮರ್ಪಿಸಿದರು. ಇಂಗ್ಲಿಷಿನ ಬಿನ್ನವತ್ತಳೆಯನ್ನು ಶ್ರೀ ಕೆ.ಎಸ್. ಕೃಷ್ಣಯ್ಯರ್ ಅವರು ಓದಿದರು. ಕನ್ನಡದ್ದನ್ನು ಶ್ರೀ ಡಿ.ವಿ.ಗುಂಡಪ್ಪನವರು ಓದಿದರು.

ಗೋಖಲೆ ಭಾವಚಿತ್ರ ಅನಾವರಣ

ಗಾಂಧೀಜಿ ಬಿನ್ನವತ್ತಳೆಗೆ ಇಂಗ್ಲಿಷಿನಲ್ಲಿ ಉತ್ತರಕೊಟ್ಟರು. ಆಮೇಲೆ ಗೋಖಲೆಯವರ ಭಾವಚಿತ್ರವನ್ನು ಅನಾವರಣ ಮಾಡಬೇಕೆಂದು ಸಭೆಯ ಪರವಾಗಿ ಕೇಳಿಕೊಳ್ಳಲಾಯಿತು. ಸಭೆಯ ಮುಖ್ಯ ಉದ್ದೇಶವೂ ಅದೇ. ಗಾಂಧೀಜಿ ಸಂತೋಷದಿಂದ ಭಾವಚಿತ್ರ ಅನಾವರಣ ಮಾಡಿದರು. ಅಗ ಹೀಗೆ ಹೇಳಿದರು: "ನನ್ನ ಪ್ರಿಯ ದೇಶ ಬಾಂಧವರೇ, ಈ ಭಾವಚಿತ್ರ ಅನಾವರಣ ಮಾಡಲು ನನ್ನನ್ನು ಇಲ್ಲಿಗೆ ಬರಮಾಡಿದ್ದೀರಿ. ಈ ಶುಭ ಕಾರ್ಯ ಮಾಡುವ ಮುನ್ನ ಎರಡು ಮಾತು ಹೇಳಬಯಸುತ್ತೇನೆ. ಈ ಕೆಲಸಕ್ಕಾಗಿ ನನ್ನನ್ನು ಇಲ್ಲಿಗೆ ಬರಹೇಳಿ ನನಗೆ ಒಂದು ಒಳ್ಳೆಯ ಅವಕಾಶ ಮಾಡಿಕೊಟ್ಟಿದ್ದೀರಿ. ಅಲ್ಲದೆ ಮನ್ನಣೆಯನ್ನು ಮಾಡಿದ್ದೀರಿ,

"ಈಗ ಹಾಡಿದ ಗೀತೆ ಬಹಳ ಭಾವಪೂರ್ಣವಾದ ಸುಂದರ ಗೀತೆ. ಯಾರ ಬಟ್ಟೆ ಹರಿದು ಇದೆಯೋ, ಕೊಳೆಯಾಗಿ ಇದೆಯೋ ಅವರ ಜೊತೆಗೆ, ಅವರೊಳಗೆ ಪರಮಾತ್ಮ ಇರುವ ಎಂದು ಹೇಳುತ್ತದೆ ಈ ಗೀತೆ. ಅದನ್ನು ಕೇಳಿದ ಕೂಡಲೆ ನನ್ನ ವಸ್ತ್ರದ ತುದಿಯ ಕಡೆ ಹೊರಳಿತು ನನ್ನ ದೃಷ್ಟಿ . ನಾನು ಉಟ್ಟ ಬಟ್ಟೆಯನ್ನು ಪರೀಕ್ಷಿಸಿ ನೊಡಿದೆ. ಅದು ಹರಿದೂ ಇಲ್ಲ, ಸುಕ್ಕೂ ಆಗಿಲ್ಲ! ಸಾಕಷ್ಟು ಶುಭ್ರವಾಗಿ ಸ್ವಚ್ಛ ಆಗಿದೆ. ದೇವರು ನನ್ನ ಒಳಗೆ ಇಲ್ಲ, ಇದೇ ಅಲ್ಲದೆ ಇನ್ನೂ ಕೆಲವು ನಿರ್ಬಂಧಗಳು ಅಲ್ಲಿವೆ . ಈ ಪರೀಕ್ಷೆಯಲ್ಲಿ ನಾನು ಉತ್ತೀರ್ಣನಾಗಲಾರೆ. ತಾವೂ ಕೂಡ ಇದರಲ್ಲಿ ಉತ್ತೀರ್ಣರು ಆಗದೆ ಹೋಗಬಹುದು.

ಆದರೆ ಯಾವ ಮಾತನ್ನು ಇಲ್ಲಿ ಕೇಳಿದೆವೋ ಅದನ್ನು ಸರಿಯಾಗಿ ನಡೆಸಿಕೊಂಡು ಬಂದರೆ ಇವತ್ತು ಯಾರ ಭಾವಚಿತ್ರವನ್ನು ಅನಾವರಣ ಮಾಡಲು ನನ್ನನ್ನು ಕರೆಸಿದ್ದೀರೋ ಅವರ ಸವಿ ನೆನಪಿಗೆ ಗೌರವ ಸಲ್ಲುತ್ತದೆ.

"ರಾಜಕೀಯದಲ್ಲಿ ಶ್ರೀ ಗೋಖಲೆ ನನ್ನ ಗುರುಗಳು ಎಂದು ತಿಳಿದಿದ್ದೇನೆ. ನನ್ನ ರಾಜಗುರುಗಳು ಅವರು ಎಂದು ಸಾರಿ ಹೇಳಿದ್ದೇನೆ . ಭಾರತೀಯರ ಎಲ್ಲರ ಮುಂದೆ ಈ ಮಾತನ್ನು ಹೇಳುತ್ತೇನೆ. 1996 ರಲ್ಲಿ ಈ ಘೋಷಣೆ ಮಾಡಿದೆ. ಆ ಬಗ್ಗೆ ನನಗೆ ಎಳ್ಳಷ್ಟೂ ವ್ಯಸನ ಇಲ್ಲ.

"ರಾಜಕೀಯಕ್ಕೂ ರಾಜಕೀಯ ಸ್ಥಳಗಳಿಗೂ ಧಾರ್ಮಿಕ ಸ್ವರೂಪ ಕೊಡಬೇಕು. ಇದು ಪ್ರತಿಯೊಬ್ಬ ಭಾರತೀಯರ ಕರ್ತವ್ಯ. ಇದು ನನ್ನ ದೇಶ, ನನ್ನ ನಾಡು. ಎಂದು ಎಲ್ಲರೂ ಹಿಗ್ಗುತ್ತೇವೆ. ಸುಮ್ಮನೆ ಹೀಗೆ ಬಡಾಯಿ ಕೊಚ್ಚಿಕೊಂಡರೆ ಆಯಿತೆ ? ಆ ಬಡಾಯಿಯಲ್ಲಿ ನಾವು ತೃಪ್ತರಾಗಬಾರದು ಎಂದು ಗೋಖಲೆಯವರಿಂದ ನಾನು ಕಲಿತಿದ್ದೇನೆ. ನನ್ನ ಬಾಳಿಗೆ ಉತ್ತೇಜನ ಕೊಟ್ಟವರು ಅವರೇ. ಇಂದಿಗೂ ಅವರ ಪ್ರೋತ್ಸಾಹ, ಉತ್ತೇಜನಗಳೇ ನನ್ನ ದಾರಿ ದೀಪ. ನನ್ನ ಜೀವನ ಪರಿಶುದ್ಧ ಆಗಬೇಕು. ಅದಕ್ಕೆ ಧಾರ್ಮಿಕ ರೂಪ ಸಿಗಬೇಕು .ಇದು ನನ್ನ ಬಯಕೆ. ಈ ಸಾಧನೆಯೇ ನನ್ನ ಬದುಕಿನ ಪಾಠ. ಈ ಗುರಿಯನ್ನು ನಾನು ಮುಟ್ಟಲಿಕ್ಕಿಲ್ಲ. ಸಾಧನೆಯಲ್ಲಿ ಸೋಲಲೂ ಬಹುದು. ಹಾಗಾದರೆ ಅಷ್ಟರ ಮಟ್ಟಿಗೆ ನನ್ನ ಗುರುಗಳ ಶಿಷ್ಯನಾಗಲು ನಾನು ಅನರ್ಹ ಎಂದು ಹೇಳಿಕೊಳ್ಳಬೇಕಾಗುತ್ತದೆ.

"ದೇಶದ ರಾಜಕೀಯಕ್ಕೆ ಧಾರ್ಮಿಕ ಸ್ವರೂಪ ಕೊಡಬೇಕೆಂದರೆ ಹೇಗೆ ? ಹೀಗೆಂದರೆ ಏನು ಅರ್ಥ? ನನ್ನ ಬಾಳೇ ಧಾರ್ಮಿಕ ಆಗಿ ಮಾರ್ಪಡಬೇಕು. ಏನು ಹೀಗೆಂದರೆ? ಎಷ್ಟು ಸಲ ನನ್ನ ಇದಿರಿಗೆ ಬಂದು ನಿಂತಿದೆ ಈ ಪ್ರಶ್ನೆ. ಇದಕ್ಕೆ ಒಂದೇ ಒಂದು ಅರ್ಥ ಇಲ್ಲ. ನಾನು ಒಂದು ಅರ್ಥ ಮಾಡಬಹುದು. ನೀವೇ ಒಂದು ಅರ್ಥ ಕೊಡಬಹುದು. ಭಾರತ ಸೇವಕ ಸಮಾಜದ (Servants Of India Society) ಸದಸ್ಯರು ಒಬ್ಬೊಬ್ಬರೂ ಒಂದೊಂದು ವಿಧವಾಗಿ ಅರ್ಥ ಮಾಡಿಕೊಳ್ಳಬಹುದು. ಈ ಸಮಸ್ಯೆ ಅಷ್ಟು ಜಟಿಲ. ನನ್ನ ದೇಶವನ್ನು ನಾನು ಪ್ರೀತಿಸಬೇಕು.

ನನ್ನ ದೇಶಕ್ಕೆ ನನ್ನ ಸೇವೆ ಸಲ್ಲಬೇಕು. ನನ್ನ ದೇಶ ನನ್ನಿಂದ ಗೌರವ ಪಡೆಯಬೇಕು. ಈ ರೀತಿ ಎಷ್ಟೋ ಜನ ಹಂಬಲಿಸುತ್ತೀರಿ. ಆ ಕೆಲಸದಲ್ಲಿ ನೀವು ಎಷ್ಟು ಕಷ್ಟ ಇದಿರಿಸಬೇಕೋ ಇದು ತಿಳಿಸುತ್ತದೆ. ಯಾರೇ ಆಗಲಿ, ವೈಯಕ್ತಿಕ ಜೀವನದ ಮಾರ್ದನಿ ಆಗಬೇಕು ಅವರ ರಾಜಕೀಯ ಜೀವನ. ಅದರಲ್ಲಿ ಕಿಂಚಿತ್ತೂ ದ್ವಂದ್ವ ಇರಬಾರದು. ಇದು ನನ್ನ ಅಭಿಪ್ರಾಯ.

ಇಲ್ಲಿ ಗಾಂಧೀಜಿ "ಕರುಣಾಳು ಬಾ ಬೆಳಕೆ' ಎಂದು ಕನ್ನಡದಲ್ಲಿ ಆಚಾರ್ಯ ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಭಾಷಾಂತರಿಸಿರುವ ಕಾರ್ಡಿನಲ್ ನ್ಯೂಮನ್ ರಚಿಸಿದ ' Lead Kindly Light ' ಎಂಬ ಸುಂದರ ಹೃದಯಸ್ಪರ್ಶಿ ಗೀತೆಯನ್ನು ನೆನೆದುಕೊಂಡರು. ಗೋಖಲೆಯವರು ಪದೇ ಪದೇ ಈ ಗೀತೆಯನ್ನು ಹೇಳಿಕೊಳ್ಳುತ್ತಿದ್ದರು ಎಂದು ತಿಳಿಸಿದರು. ಮತ್ತೆ ಹೇಳಿದರು: ಪ್ರಗತಿಯಲ್ಲಿ ಒಂದೊಂದು ಹೆಜ್ಜೆಯಾಗಿ ಹೋಗಬೇಕು. "ದೂರದ ನೋಟ ಕೇಳೆನು, ನನಗೆ ಒಂದೇ ಹೆಜ್ಜೆ ಸಾಕು' ಎಂದು ಹೇಳಿಲ್ಲವೆ ಕವಿ, ಕಾಂಚನ ಗಂಗಾ ಶಿಖರಕ್ಕೆ ಹತ್ತಬೇಕಾದರೆ ವಿಶಾಲವಾದ ಗಂಗಾನದಿಯ ಮೈದಾನವನ್ನು ನಿಧಾನವಾಗಿ ದಾಟಿ ಒಂದೊಂದು ಹೆಜ್ಜೆಯಾಗಿ ಹತ್ತಬೇಕು. ಜಗತ್ತಿನ ಯಾವ ಶಿಖರವನ್ನು ಹತ್ತಬೇಕಾದರೂ ಹೀಗೆಯೇ.

ಆ ರಾಜಕೀಯ ವ್ಯಕ್ತಿ ಅತ್ಯಂತ ಧಾರ್ಮಿಕ ಸ್ವರೂಪದವರು. ಅವರು ಕಡೆಯ ಉಸಿರು ಬಿಡುವವರೆಗೂ ಅವರ ನಾಮ ಪದದಲ್ಲಿಯೇ ಇದ್ದೆ ನಾನು. ಅವರಲ್ಲಿ ಅಹಂಕಾರ ಲವಲೇಶವೂ ಇರಲಿಲ್ಲ. ನೀವೆಲ್ಲರೂ ಸಮಾಜ ಸೇವಾ ಸಂಸ್ಥೆಯ ಸದಸ್ಯರು. ನಿಮ್ಮನ್ನು ಕೇಳುತ್ತೇನೆ: ನಿಮ್ಮಲ್ಲಿ "ಅಹಂ' ಇಲ್ಲವೆ ? ರಾಜಕೀಯ ಕ್ಷೇತ್ರದಲ್ಲಿ ಹೆಸರು ಪಡೆಯಬೇಕು, ಕೀರ್ತಿ ಗಳಿಸಬೇಕು ಎಂದು ಅವರಿಗೆ ಆಸೆ ಇರಲಿಲ್ಲ. ಸ್ವಂತ ಲಾಭಕ್ಕಾಗಿ, ಸ್ವಪ್ರತಿಷ್ಠೆಗಾಗಿ ಎಂದು ಅವರು ಪ್ರಯತ್ನಿಸಿದವರೇ ಅಲ್ಲ. ದೇಶಕ್ಕೆ ಲಾಭ ಬರಲಿ ಎಂದೇ ಅವರ ಬಯಕೆ. ತಮ್ಮೊಳಗೆ ಅಡಗಿದ್ದ ಸದ್ಗುಣ

ಒಂದೊಂದನ್ನು ಬೆಳೆಸಿಕೊಳ್ಳಲು ಅವರು ಪ್ರಯತ್ನಿಸಿದರು. ಅದರಿಂದ ಪ್ರಪಂಚದಲ್ಲಿ ಕೀರ್ತಿಯನ್ನು ಗಳಿಸಬೇಕು ಎಂಬ ಆಸೆ ಅವರಿಗೆ ಇರಲಿಲ್ಲ. ದೇಶ ಅದರಿಂದ ಪ್ರಯೋಜನ ಪಡೆಯಲಿ ಎಂಬುದು ಅವರ ಹೆಬ್ಬಯಕೆ . ಜನರ ಮೆಚ್ಚುಗೆ ಅಥವಾ ಶಾಭಾಷ್ಗಿರಿ ಅವರಿಗೆ ಬೇಕಾಗಿರಲಿಲ್ಲ. ಅದಕ್ಕೆ ಅವರು ಆಸೆ ಪಡಲೂ ಇಲ್ಲ. ಆದರೆ ಆ ಕೀರ್ತಿ, ಆ ಮೆಚ್ಚುಗೆಯನ್ನು ಜನರು ಅವರ ಮೇಲೆ ಮಳೆಗರೆದರು. ಅವರ ಮೇಲೆ ಹೇರಿದರು. ದೇಶಕ್ಕೆ ಅದರಿಂದ ಪ್ರಯೋಜನ ಆಗಲಿ ಎಂದು ಎಲ್ಲಕ್ಕೂ ಅವರು ತಲೆ ಕೊಟ್ಟರು. ಅವರು ನಮಗೆ ಇತ್ತ ಪ್ರೋತ್ಸಾಹ ಮತ್ತು

ಕೊಟ್ಟ ಉತ್ತೇಜನ ಇದೇ.

"ದೇಶದಲ್ಲಿ ಅನೇಕ ಲೋಪದೋಷಗಳು ಇವೆ. ಅದಕ್ಕಾಗಿ ಭಾರತವನ್ನು ಜನ ತೆಗಳುತ್ತಾರೆ. ಇನ್ನೊಂದು ದೋಷವನ್ನು ಅದರ ಜೊತೆಗೆ ಕೂಡಿಸಿಕೊಳ್ಳೋಣ. ಆ ತಪ್ಪಿಗೆ ನೀವು ಮಾತ್ರವೇ ಹೊಣೆಗಾರರಾಗುವುದಿಲ್ಲ. ಇವತ್ತಿನ ಸಭೆಯಲ್ಲಿ ಭಾಗವಹಿಸಿದುದರಿಂದ ನನ್ನದೂ ಹೊಣೆ ಇದೆ. ಆ ದೋಷಕ್ಕೆ ನಾನೂ ಪಾತ್ರ . ಆದರೆ ಒಂದು; ನನ್ನ ದೇಶ ಬಾಂಧವರಲ್ಲಿ ನನ್ನ ವಿಶ್ವಾಸ ಅಚಲವಾದುದು. ಅತ್ಯಂತ ಭಕ್ತಿ ಗೌರವದಿಂದ ಈ ಭಾವಚಿತ್ರವನ್ನು ಅನಾವರಣ ಮಾಡುತ್ತೇನೆ. ಈಗಲೂ ಗಾಂಧೀಜಿ ಅನಾವರಣ ಮಾಡಿದ ಗೋಖಲೆಯವರ ಭಾವಚಿತ್ರ ಬೆಂಗಳೂರು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಇದೆ. ಯಾರು ಬೇಕಾದರೂ ಹೋಗಿ ನೋಡ ಬಹುದು.

ಸಭೆ ಮುಗಿದ ಮೇಲೆ ದಿವಾನ್ ಬಹದ್ದೂರ್ ಪುಟ್ಟಣ್ಣ ಶೆಟ್ಟರ ಕುದುರೆ ಗಾಡಿಯಲ್ಲಿ ಗಾಂಧೀಜಿಯನ್ನು ಬಿಡಾರಕ್ಕೆ ಕರೆತಂದರು. ಗಾಡಿಯಲ್ಲಿ ಪುಟ್ಟಣ್ಣ ಶೆಟ್ಟರ ಜೊತೆಗೆ ಕೃಷ್ಣಯ್ಯರೂ ಇದ್ದರು. ಇದು ಸೆಂಟ್ರಲ್ ಬೆಂಗಳೂರಿನ ಕಟ್ಟಡ–ಎಂದು ಗಾಂಧೀಜಿಗೆ ತೋರಿಸಿದರೋ ಇಲ್ಲವೋ, ಒಡನೆಯೆ ಗಾಂಧೀಜಿ ಹೇಳಿದರು: ಇದೆಲ್ಲವೂ ನನಗೇಕೆ? ಬೇಡ. ಬಡವರು ಇರುವ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿ. ಬಡವರು ವಾಸಮಾಡುವ ಸ್ಥಳಕ್ಕೆ, ಆಗ ಅರಳೆ ಪೇಟೆ. ಚಿಕ್ಕ ಪೇಟೆಗಳ ಮಾರ್ಗವಾಗಿ ಅವರನ್ನು ಕರೆತರಲಾಯ್ತು.



ಕೆಲವರು ಪುರಪ್ರಮುಖರು, ನಾಗರಿಕರು ಗಾಂಧೀಜಿಯೊಡನೆ ಸ್ವಂತವಾಗಿ ಮಾತನಾಡಬೇಕು ಎಂದು ಅವರ ಬಿಡಾರಕ್ಕೆ ಬಂದರು. ಯಾರು ಯಾರು ಬಂದಿದ್ದರು ಎಂಬುದು ಸರಿಯಾಗಿ ತಿಳಿದಿಲ್ಲ. ಅಂತೂ ಕೆಲವರು ಗಾಂಧೀಜಿಯನ್ನು ಕಂಡು ಮಾತಾಡಿಸಿದರು. ಭಾರತದ ದಾರಿದ್ರ್ಯದ ಪ್ರಶ್ನೆಯನ್ನು ಬಂದಿದ್ದವರು ಎತ್ತಿದರು. ಭಾರತ ದಿನೇ ದಿನೇ ಹೆಚ್ಚು ಹೆಚ್ಚು ದಾರಿದ್ರ್ಯದತ್ತ ನಡೆಯುತ್ತಿದೆ. . ಈ ಭಾರಕ್ಕೆ ದೇಶ ತಿಣುಕುತ್ತಿದೆ. ನಮ್ಮ ಕೈಮಗ್ಗಕ್ಕೆ, ಕೈಗಾರಿಕೆಗೆ ಇದಿರಿಸಲಾಗದಂಥ ಪೈಪೋಟಿ ಬಂದು ನಮ್ಮ ಕಚ್ಚಾ ಮಾಲು ಭಾರತ ಬಿಟ್ಟು ಹೊರಕ್ಕೆ ಹೋಗುತ್ತಿದೆ ಎಂದರು. ಇದಕ್ಕೆ ಕಾರಣ ನಾವು ಮಾಡುತ್ತಿರುವ ಐರೋಪ್ಯರ ಅಂಧಾನುಕರಣೆ .ಎಷ್ಟು ಮಟ್ಟಿಗೆ ಇದು ಹೆಚ್ಚು ಹೋಗುತ್ತಿದೆ ಎಂದರೆ ನಮ್ಮ ಆತ್ಮಗೌರವವನ್ನೆ ಬಹಳ ಮಟ್ಟಿಗೆ ಕಳೆದುಕೊಂಡಿದ್ದೇವೆ. ನಾವು ಯೋಚಿಸುವುದು ಇಂಗ್ಲಿಷಿನಲ್ಲಿ: ಮಾತನಾಡುವುದೂ

ಇಂಗ್ಲಿಷ್ನಲ್ಲೇ. ಇದರಿಂದ ನಮ್ಮ ದೇಶಭಾಷೆಗಳು ಬಡವಾದವು, ಸೊರಗಿ ಹೋದವು. ಜನಸಾಮಾನ್ಯರಿಗೂ ಅವರ ಭಾವನೆಗೂ ನಮಗೂ ಬಹಳ ದೂರ ಆಯಿತು. ಅಂತರ ಹೆಚ್ಚು ಆಯಿತು. ನಮ್ಮ ಮಾತೃಭೂಮಿಯ ಸೇವೆಗೆ ಇಷ್ಟು ಇಂಗ್ಲಿಷ್ ಭಾಷೆಯ ಜ್ಞಾನ ಅಗತ್ಯವೆ ಇಲ್ಲ. ಆ ಮೇಲೆ ಜಾತಿ ವಿಚಾರ ಬಂತು. ಹಿಂದೂ ಧರ್ಮದ ಗುಟ್ಟು, ಅದರ ಮಹಾ ಶಕ್ತಿ ಜಾತಿಯಲ್ಲಿ ಅಲ್ಲ, ವರ್ಣವ್ಯವಸ್ಥೆಯಲ್ಲಿ ಅಡಗಿದೆ ಎಂದರು.

ಗಾಂಧೀಜಿಯ ನಿವಾಸ

ಭಾರತದಲ್ಲಿ ಎಲ್ಲಿ ವಾಸ ಮಾಡುತ್ತೀರಿ ನೀವು? ಬಂಗಾಳದಲ್ಲಿ ವಾಸ ಮಾಡುವಂತೆ ಬಹಳ ಬಲವಂತ ಮಾಡುತ್ತಿದ್ದಾರೆ. ಆದರೆ ನನಗಿರುವ ಅನುಭವವೆಲ್ಲ ಗುಜರಾತಿಗೆ ಸಂಬಂಧಿಸಿದುದು. ಅಲ್ಲಿಗೆ ಬಂದು ನೆಲೆಸುವಂತೆ ನನಗೆ ಅನೇಕ ಪತ್ರ ಬರುತ್ತಿವೆ. ಆ ಮೇಲೆ ಹಲವು ವಿಷಯಗಳ

ಬಗ್ಗೆ ಅವರ ಅಭಿಪ್ರಾಯ ಹೇಳಿದರು. ಪುಸ್ತಕ ಭಂಡಾರಗಳ ಬಗ್ಗೆ ಮಾತಾಡುತ್ತ – "ನಮಗೆ ದೇಶೀಯ ಭಾಷೆ ಅತಿ ಮುಖ್ಯ . ಎಲ್ಲ ಪುಸ್ತಕಗಳೂ ಬೇಕು, ಸರಸ್ವತಿ ಭಂಡಾರವೇ ಬೇಕು. ಪುಸ್ತಕ ಭಂಡಾರಗಳನ್ನು ಸ್ಥಾಪಿಸಲು ಸ್ನೇಹಿತರು ಧನ ಸಹಾಯ ಮಾಡಬೇಕು ಎಂದು ನನ್ನ ಅಪೇಕ್ಷೆ" ಎಂದರು.

ಆಧುನಿಕ ನಾಗರಿಕತೆ ಒಂದು ಶಾಪ ಆಧುನಿಕ ನಾಗರಿಕತೆಯ ಬಗ್ಗೆ ಮಾತನಾಡುತ್ತ– "ಯೂರೋಪಿಗೆ ಮಾತ್ರವೇ ಅಲ್ಲ.. ಈ ಆಧುನಿಕ ನಾಗರಿಕತೆ ಭಾರತಕ್ಕೂ ಒಂದು ಶಾಪ. ಆಧುನಿಕ ನಾಗರಿಕತೆಯ ಪ್ರತ್ಯಕ್ಷ ಪರಿಣಾಮ ಎಂದರೆ ಯುದ್ಧ. ಪ್ರತಿಯೊಂದು ಸಶಕ್ತ ರಾಜ್ಯವೂ ಯುದ್ಧ ಸನ್ನಾಹ ಮಾಡಿ ಕೊಳ್ಳುತ್ತಿದೆ" ಎಂದರು.

ಸಾತ್ವಿಕ ನಿರೋಧ – ನೀತಿ ಬಲ ಮುಂದೆ ಸಾತ್ವಿಕ ನಿರೋಧದ ಮಾತನ್ನು ಹೇಳಿದರು. ಸಬಲರಿಗೂ ಅಬಲರಿಗೂ ಪ್ರಯೋಜನಕರವಾದ ಮಹಾ ನೀತಿಬಲ ; ಈ ಸ್ವಾತಿಕ ನಿರೋಧ. ಇದು ಅತ್ಮಬಲ, ಅದ್ದರಿಂದ ಸ್ವಯಂಪೋಷಿತ. ನಾವು ಯಾವುದೇ ಧ್ಯೇಯವನ್ನು ಇಟ್ಟುಕೊಳ್ಳಲಿ, ಅದು ಕ್ರಿಯಾತ್ಮಕ ಆಗಿರಬೇಕು; ಇಲ್ಲದೆ ಹೋದರೆ ಆ ಧ್ಯೇಯ ಶಕ್ತಿಹೀನ ಆಗುತ್ತದೆ.

" ಧ್ಯೇಯದ ಜ್ಞಾನ ಒಂದು, ಅದರ ಆಚರಣೆಯೇ ಮತ್ತೊಂದು, ಆಚರಣೆ ಹೆಚ್ಚಿದಷ್ಟೂ ಶಿಸ್ತು ಹೆಚ್ಚು, ಶಿಸ್ತು ಹೆಚ್ಚಿದಷ್ಟು ಸೇವೆ ಹೆಚ್ಚು . ಈ ಲಾಭ ಸರಕಾರಕ್ಕೆ ಸಿಗುತ್ತದೆ. ಸಾತ್ವಿಕ ನಿರೋಧ ಬಹಳ ಪ್ರಭಾವಶಾಲಿ ಅಸ್ತ್ರ . ಆದರೆ ಮನಸ್ಸು ಬಲು ಚಂಚಲ. ಎಲ್ಲ ಬಗೆಯ ಚಿಂತನೆಗೂ ಅವಕಾಶ ಕೊಡುತ್ತದೆ.

ಪಾಪಮೂಲ

ಹೆಣ್ಣು, ಹೊನ್ನು ಮಣ್ಣು–ಇವು ಮೂರು ಮೋಹಕ. ಇವೇ ಪಾಪಕ್ಕೆ ಮೂಲ. ಈ ಮೋಹಗಳನ್ನು ನಿವಾರಿಸಿಕೊಳ್ಳಲು ಸತತವೂ ಹೋರಾಟ ನಡೆಸಬೇಕು ನಾವು ಮತ್ತು ನಮ್ಮ ಸುಖ ಭೋಗಗಳಿಗೆ ಈ ಭೂಮಿ, ಈ ಹೆಣ್ಣು, ಈ ಹೊನ್ನು ಬೇಕೆ? ಇದರಿಂದ ನನಗೆ ತೃಪ್ತಿ ಆಗಬೇಕೆ? ಯಾರಿಗೊ ಕೆಲವರಿಗೆ ತಲೆ ಕೆಟ್ಟರೆ ನಾನೂ ನನ್ನ ತಲೆ ಕೆಡಿಸಿಕೊಳ್ಳಬೇಕೆ? ನಮ್ಮ ಗುರಿಯನ್ನು ಸಾಧಿಸಲು ಪ್ರಯತ್ನ ಮಾಡತೊಡಗಿದರೆ, ಕ್ರಿಯಾತ್ಮಕವಾಗಿ ತೊಡಗಿದರೆ, ಈ ಪಾಪ ಚೇಷ್ಟೆಗಳಿಗೆ ಅವಕಾಶ ಎಲ್ಲಿ? ಬಹಳ ಕಡಿಮೆ ಅವಕಾಶ. ಈ ದೃಷ್ಟಿಯಿಂದ ಜನಜೀವನವನ್ನು ತಿದ್ದಬೇಕು, ರೂಪಿಸಬೇಕು.

ಭಾರತದ ಸಾಧುಗಳು

ಯಾವ ಪ್ರವಾಹವೇ ಆಗಲಿ, ಎಷ್ಟೋ ವೇಳೆ ತನ್ನ ಪಾತ್ರವನ್ನು ಬದಲಾಯಿಸುತ್ತದೆ. ತನ್ನ ಓಟವನ್ನೂ ಬದಲಾಯಿಸುತ್ತದೆ. ನಮ್ಮಲ್ಲಿ 15 ಲಕ್ಷ ಸಾಧುಗಳಿದ್ದಾರೆ. ಈ ಸಾಧುಗಳು ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯವನ್ನು ಪಾಲಿಸಿದರೆ ಭಾರತಕ್ಕೆ ಎಷ್ಟು ಲಾಭ? ಜಗದ್ಗುರು ಶಂಕರಾಚಾರ್ಯರು, ಈಗ "ಜಗದ್ಗುರು' ಎಂಬ ವಿಶೇಷಣಕ್ಕೆ ತಕ್ಕ ಶಕ್ತಿ ಪಡೆದಿಲ್ಲ ತುಂಬ ಶಕ್ತಿಹೀನರು.

ಭಾರತೀಯ ಆದರ್ಶಗಳು

ಶಾರೀರಿಕ ಕ್ರಿಯೆಗಳು ದುಷ್ಟ ಆಗಬಾರದು, ಯಾರಿಗೂ ಅದರಿಂದ ಒಳಿತು ಆಗದು. ಸುಖವನ್ನು, ಮೌಲ್ಯವನ್ನು ಹೆಚ್ಚಿಸಿಕೊಳ್ಳುವ ದಾರಿಯನ್ನು ಅದು ಹುಡುಕುತ್ತ ಹೋಗುತ್ತದೆ. ಆಧುನಿಕ ಕರ್ಮಗಳಲ್ಲಿ ಎಷ್ಟೋ ಅನುಪಯುಕ್ತ ಅಂಥವನ್ನು ಭಾರತೀಯ ಸಂಸ್ಥೆಗಳ ಮೇಲೆ ಹೊರಿಸಬಾರದು. ನಮ್ಮ ಸಂಸ್ಥೆಗಳನ್ನು ಹಿಂದೂ ಧರ್ಮದ ಆದರ್ಶಗಳ ತಳಹದಿಯ ಮೇಲೆ ರಚಿಸಬೇಕು. ಈ ಆದರ್ಶಗಳನ್ನು ಆರಿಸಿಕೊಳ್ಳಬಹುದು. ಭಾರತದಲ್ಲಿ ಕೆಲವು ಗುಣಗಳನ್ನು ಕೆಲವು ಆಚಾರಗಳನ್ನು ಸದ್ಗುಣ ಸದಾಚಾರ ಎಂದು ಭಾವಿಸುತ್ತಾರೆ. ಪಡುವಣ ದೇಶಗಳಲ್ಲಿ ಅವನ್ನೇ ಸರಿಯಲ್ಲ ಎಂದು ತಿಳಿಯುತ್ತಾರೆ. ರಘುವಂಶದ ದಶರಥ ಮಹಾರಾಜ ತನ್ನ ಹೆಂಡತಿಗೆ ಮಾತು ಕೊಟ್ಟಿದ್ದ. ಅದರಂತೆ. ನಡೆದುಕೊಂಡ, ನಾವು ಅವನನ್ನು ಸತ್ಯಸಂಧ ಎಂದುಕೊಂಡರೆ ಪರದೇಶದ ಜನರು ಅವನನ್ನು ಮೂರ್ಖ ಎನ್ನುತ್ತಾರೆ. ವಚನ ಪಾಲನೆ ಉತ್ತಮ ನಡವಳಿಕೆ ಎಂದು ಭಾರತ ತಿಳಿದಿದೆ . ಸತ್ಯ ಒಂದೇ ಸತ್ಯ; ಕೊನೆಯಲ್ಲಿ ಅದಕ್ಕೇ ಗೆಲುವು.

ವಲಸೆಗಾರರು

ಯಾವ ದೇಶದಿಂದಲೂ ಜನ ಹೊರಗೆ ಹೊರಟು ಹೋಗಬಾರದು. ಅಲ್ಲಿಂದ ಜನರು ವಲಸೆ ಹೊರಟರೆ ಅದು ಆ ದೇಶಕ್ಕೆ ಶುಭವಲ್ಲ. ವಲಸೆ ಬಂದವರು ನಿಷ್ಠೆಯಿಂದ ಸ್ವದೇಶವನ್ನು ಸ್ಮರಿಸಿಕೊಳ್ಳುತ್ತಿದ್ದು, ಮತ್ತೆ ಅಲ್ಲಿಗೆ ಹಿಂದಿರುಗುವುದಿಲ್ಲ. ಈ ವಿಷಯ ಒಂದು ಧರ್ಮಕ್ಕೆ ವಿರುದ್ಧ . ಅಲ್ಲಿ ದೇವಾಲಯಗಳು ಅಭಿವೃದ್ಧಿ ಅಗುವುದಿಲ್ಲ. ಆಚಾರ ವ್ಯವಹಾರಗಳಿಗೂ ಅವಕಾಶವಿಲ್ಲ . ಪುರೋಹಿತರು ಸಿಗುವುದಿಲ್ಲ. ಒಂದು ವೇಳೆ ಸಿಕ್ಕರೂ ಅವರಿಗೆ ಏನೂ ಗೊತ್ತಿರುವುದಿಲ್ಲ. ಎಷ್ಟೋ ವೇಳೆ ಅವರು ಕಸಕ್ಕಿಂತಲೂ ಕೀಳು, ಸಹಜವಾಗಿ ತುಂಟತನ ಹೆಚ್ಚು, ವಲಸೆ ಬಂದವರಲ್ಲಿ, ಸಹಜವನ್ನು ಕೆಡಿಸುತ್ತಾರೆ. ಇದು ಸಾಹಸವೂ ಅಲ್ಲ, ಒಳ್ಳೆಯ ಕೆಲಸವೂ ಅಲ್ಲ. ಇವರು ಹೋಗಿ ನೆಲೆಸುವ ಕಡೆ ಹೆಚ್ಚು ಧನ ಸಂಪಾದನೆ ಆಗುತ್ತದೆ. ಹಾಗಂದರೆ ಏನು? ಕಷ್ಟ ಪಟ್ಟು ದುಡಿದು ಧರ್ಮ ಮಾರ್ಗದಲ್ಲಿ ಮಾಡುವ ಧನ ಸಂಪಾದನೆ ಅವರಿಗೆ ಬೇಡ. ಅವರಿಗೆ ಐಹಿಕ ಸುಖ ಬೇಕು, ಸುಖ ಸಾಧನಗಳೂ ಬೇಕು ಹೆಚ್ಚಾಗಿ.

ಥಿಯಾಸಾಫಿಕಲ್ ಸೊಸೈಟಿ ಬಗ್ಗೆ ಯಾರೋ ಒಂದು ಪ್ರಶ್ನೆ ಎತ್ತಿದರು. ಅದಕ್ಕೆ ಗಾಂಧೀಜಿ ಹೇಳಿದರು: "ವ್ಯಕ್ತಿಗಳು ಹೇಗಾದರೂ ಇರಲಿ. ಥಿಯಸಾಫಿಕಲ್ ಸೊಸೈಟಿಯಲ್ಲಿ ಒಳ್ಳೆಯದು ಬಹಳ ಇದೆ. ಅದರಿಂದ ಆಚಾರ ವಿಚಾರಗಳಿಗೆ ಪ್ರೇರಣೆ ದೊರಕುವಂತಾಗುತ್ತದೆ.

ಲಾಲ್‌ಬಾಗ್ ಸಭೆ

ಸಂಜೆಗೆ ಲಾಲ್ಬಾಗಿನ ಗಾಜಿನ ಮನೆಯಲ್ಲಿ ಒಂದು ದೊಡ್ಡ ಬಹಿರಂಗ ಸಭೆ ನಡೆಯಿತು. ಇಂಗ್ಲಿಷಿನಲ್ಲಿ ಒಂದು ಮಾನಪತ್ರವನ್ನು ಬೆಂಗಳೂರಿನ ನಾಗರಿಕರ ಪರವಾಗಿ ಪೌರಸಭೆಯ ಅಧ್ಯಕ್ಷರಾದ ದಿವಾನ್ ಬಹದ್ದೂರ್ ಕೆ.ಪಿ. ಪುಟ್ಟಣ್ಣ ಶೆಟ್ಟರು ಓದಿದರು. ತೆಲುಗು ಭಾಷೆಯಲ್ಲೂ, ಉರ್ದು ಭಾಷೆಯಲ್ಲೂ ಕವನಗಳನ್ನು ಓದಲಾಯಿತು. ದಿವಾನ್ ಬಹದ್ದೂರ್ ಸರ್ ಪುಟ್ಟಣ್ಣ ಶೆಟ್ಟರು ಆಗ ಪುರಸಭಾಧ್ಯಕ್ಷರು. ಅವರೇ ಆ ಸಭೆಗೂ ಅಧ್ಯಕ್ಷರಾಗಿದ್ದರು. ಗಾಂಧೀಜಿ ಮಾನಪತ್ರಕ್ಕೆ ಉತ್ತರ ಕೊಡುತ್ತ ಹೀಗೆ ಹೇಳಿದರು:

ಅಧ್ಯಕ್ಷರೆ, ಮಿತ್ರರೆ,

ನೀವು ನನಗೂ, ನನ್ನ ಹೆಂಡತಿಗೂ ಮಾಡಿದ ಮಹತ್ ಗೌರವಕ್ಕೆ ಮನಸ್ಸಾಕ್ಷಿಯಾಗಿ ತಮ್ಮೆಲ್ಲರಿಗೂ ನನ್ನ ವಂದನೆ ಎಂದು ಹೇಳಿದರೆ ಅದು ಅತಿ ವಿನಯ ಎನಿಸೀತು. ನನಗೋ ಮಾತೇ ಹೊರಡುತ್ತಿಲ್ಲ. ಒಂದು ಚಿಂತೆ ನನ್ನನ್ನು ತುಂಬಾ ಕಾಡುತ್ತಿದೆ. ನಾನಾಗಲಿ ಅಥವಾ ನಾವಾಗಲಿ ಈ ಗೌರವಕ್ಕೆ ಪಾತ್ರರೆ ?

(ಖಂಡಿತವಾಗಿಯೂ ಪಾತ್ರರು ಎಂದು ಸಭೆಯಿಂದ ಧ್ವನಿಗಳು) ನಿಮ್ಮ ಔದಾರ್ಯ, ಪೂರ್ವ ದೇಶದ ಪದ್ಧತಿಗೆ ಅನುಗುಣವಾಗಿದೆ. ಆದರೆ ಈ ಪ್ರೀತಿಗೆ ನಾವು ಪಾತ್ರರೆ? ಸಭಾಧ್ಯಕ್ಷರು ಈ ಪ್ರೀತಿಗೆ ಒಂದು ಆಧಾರವನ್ನು ಸೂಚಿಸಿದ್ದಾರೆ. ಮಾನ್ಯ ಗೋಖಲೆಯವರ ಹೆಸರನ್ನು ನೆನೆದಿದ್ದಾರೆ. ಅದರ ಕೀರ್ತಿಯ ಬೆಳಕಿನಲ್ಲಿ ನಾನು ಬೆಳಗಲಾರೆ. ನಾನು ಕೆಲಸ ಮಾಡುವಾಗ ಪ್ರತ್ಯಕ್ಷವಾಗಿ ನನ್ನನ್ನು ಸಂಪೂರ್ಣವಾಗಿ ಪರೀಕ್ಷಿಸಿ, ನನ್ನ ಸ್ವಂತ ಇತಿಮಿತಿಗಳನ್ನು ನೋಡಿ. ಆಗ ನಿಮಗೆ ನನ್ನ ಗುಟ್ಟು ತಿಳಿಯುತ್ತದೆ. ನಾನು ಕಾಲಿಡುವ ಸ್ಥಳ ಬಹಳ ಸೂಕ್ಷ್ಮವಾದುದು. ನಾನು ಕಾಡಿನಲ್ಲಿ ಹಾದು ಹೋಗಬೇಕಾಗಿದೆ. ನಿಮಗೆ ನನ್ನ ಪರಿಚಯ ಹೆಚ್ಚು ಆದ ಮೇಲೆ, ಆ ಸಂತ ರಾಜಕಾರಣಿ ಗೋಖಲೆಯವರ ಪ್ರಭಾವ ನಿಮ್ಮ ಕಣ್ಣಿಗೆ ಕಟ್ಟದೆ ಮರೆಯಾಗಿ ಹೋದ ಮೇಲೆಯೂ, ಆ ಮೇಲೆಯೂ, ಈ ಗೌರವಕ್ಕೆ ನಾನು ಪಾತ್ರನಾಗುವಂತೆ ಆಗಲಿ. ಎಷ್ಟು ಜನ ಸೇರಿದಿರಿ– ಇವತ್ತು ನನ್ನನ್ನು ಗೌರವಿಸಲಿಕ್ಕೆ . ಇವತ್ತು ಬೆಳಗ್ಗೆ ನನಗೆ ತುಂಬ ಗೌರವ ತೋರಿಸಿದಿರಿ. ನನ್ನನ್ನು ಗಾಡಿಯಲ್ಲಿ ಕೂಡಿಸಿ, ಎಳೆದುಕೊಂಡು ಹೋಗಲು ನಾನು ಒಪ್ಪಲಿಲ್ಲ. ನಮ್ಮ ವಿಚಾರಗಳನ್ನು ಅಳೆದು ಅಳೆದು, ನಮ್ಮನ್ನು ನಾವೇ ಮರೆಯದಂತೆ ಮಾಡಿಕೊಳ್ಳಬೇಕು.

ಇಷ್ಟೇ ಅಲ್ಲದೆ ಈ ಊರಿನ ಮುಖಂಡರೊಡನೆ ಮಾತುಕತೆ ಆಡಿ, ಅವರಿಗೆ ನನ್ನ ಹೃದಯವನ್ನು ಬಿಚ್ಚಿತೋರಿಸಲು, ಅವರ ಹೃದಯಾಂತರಾಳದ ಭಾವಗಳನ್ನು ಗ್ರಹಿಸಿಕೊಳ್ಳಲು ಶಾಂತವಾಗಿ ಮಾತುಕತೆ ನಡೆಸಲು ಸ್ವಾಗತ ಸಮಿತಿಯವರು ನನಗೆ ಒಂದು ಅವಕಾಶ ಮಾಡಿಕೊಟ್ಟರು. ಇದಕ್ಕಿಂತಲೂ ಹೆಚ್ಚಿನ ಗೌರವ ಉಂಟೆ?

ಬೆಳಿಗ್ಗೆ ಗಾಡಿಯಲ್ಲಿ ನನ್ನನ್ನು ಕೂಡಿಸಿ, ನೀವು ಎಳೆದುಕೊಂಡು ಹೋಗಲು ನಾನು ಒಪ್ಪಲಿಲ್ಲ. ಅದಕ್ಕೆ ಒಂದು ಅರ್ಥ ಇದೆ. ನಮ್ಮ ಸಾರ್ವಜನಿಕ ಸೇವಕರನ್ನು ಹೀಗೆ ಗಾಡಿಯಲ್ಲಿ ಕೂಡಿಸಿ, ಮೆರೆವಣಿಗೆಯಲ್ಲಿ ಕರೆದುಕೊಂಡು ಹೋಗಿ ಅವರನ್ನು ಕೆಡಿಸಬಾರದು. ಸ್ವಲ್ಪವೂ ಸದ್ದು ಇಲ್ಲದೆ ಕೆಲಸ ಮಾಡಲಿ ಅವರು, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಿದರೆ ನನಗೂ ಇದೇ ರೀತಿ ಗೌರವ ದೊರೆತೀತು ಎಂಬ ಭಾವನೆ ಅವರಲ್ಲಿ ಮೂಡಬಾರದು. ಸೇವೆ ಸಲ್ಲಿಸುವವರಿಗೆ ಕಲ್ಲಿನ ಏಟು ಬೀಳುತ್ತದೆ. ಜನರು ಅವರನ್ನು ಕಸಕ್ಕಿಂತ ಕಡೆಯಾಗಿ ಕಾಣುತ್ತಾರೆ ಎಂಬ ಭಾವನೆ ಬರಲಿ. ಆದರೂ ನನ್ನ ದೇಶ ಪ್ರೇಮವನ್ನು ನಾನು ಬಿಡಲಾರೆ ಎನಿಸಲಿ. ಅವರ ಸೇವೆಗೆ ಸೇವೆಯೇ ಪ್ರತಿಫಲ, ನಮಗೆ ಕಟ್ಟುನಿಟ್ಟಾಗಿ ವ್ಯಾವಹಾರಿಕ ರೀತಿಯಲ್ಲಿ ಕೆಲಸ ಮಾಡಲು ಬರುವುದಿಲ್ಲ; ನಮ್ಮದು ಬರೀ ತೋರಿಕೆ, ಪ್ಯೂಡಲ್ ಎಂದು ನಮ್ಮ ದೇಶವನ್ನೇ ಆಕ್ಷೇಪಿಸುತ್ತಾರೆ ಈ ಜನ . ನಿಜ. ಒಪ್ಪಿಕೊಳ್ಳಬೇಕಾದದ್ದೇ. ಹೊಸ ಕಾರ್ಯಕಲಾಪಗಳನ್ನು ಅನುಕರಿಸಬೇಕೋ ಅಥವಾ ಅನೇಕಾನೇಕ ಆಘಾತಗಳನ್ನು ಇದಿರಿಸಿ ಇನ್ನೂ ನಡೆದು ಬರುತ್ತಿರುವ ನಮ್ಮ ಪುರಾತನ ನಾಗರೀಕತೆಯನ್ನು ಅನುಸರಿಸಿ ನೀವು ನಾನು ಲೋಕಸೇವೆಯನ್ನು ರಾಜಕಾರಣದಲ್ಲಿ ಧಾರ್ಮಿಕ ದೃಷ್ಟಿಯಿಂದ ನಡೆಯಬೇಡವೆ? ಹೀಗೆ ಮಾಡಿದರೆ ನಮ್ಮನ್ನು ಯಾರು ಗೆದ್ದಿದ್ದಾರೋ ಅವರನ್ನು ಗೆಲ್ಲಬಹುದು. ಆಗ ನಮ್ಮನ್ನಾಳುವ ಇಂಗ್ಲಿಷರನ್ನು ನಮ್ಮ ಜೊತೆಗಿರುವ ಸಹಪೌರರು ಎಂದು ತಿಳಿಯಬಹುದು.

ಇಂಥ ಕಾಲ ಒಂದು ಬಂದೇ ಬರುತ್ತದೆ. (ಕರತಾಡನ) ಇಷ್ಟರಲ್ಲೇ ಬರಬಹುದು. ಆ ಕಾಲ ಎಂದು ಬಂದೀತೋ ಹೇಳುವುದು ಕಷ್ಟ. ಒಳ್ಳೆಯ ಗುಣವಂತಿಕೆ, ನಿಷ್ಠೆ, ಸದ್ಗುಣ ಪ್ರಭಾವ ಸಂಪನ್ನರಾದ ಎಷ್ಟೋ ಇಂಗ್ಲಿಷರ ಸಂಪರ್ಕ ನನಗೆ ಆಗಿದೆ. ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಈಗಿನ ಈ ಕಾರ್ಯಕ್ರಮ ಮುಗಿದು ಹೋಗುತ್ತದೆ. ಒಂದು ಹೊಸ ನಾಗರಿಕತೆ ಇದಕ್ಕಿಂತ ಹೆಚ್ಚು ಶ್ರೇಷ್ಠವಾದುದು ಬೇಗ ಬರಲಿದೆ. ನಿಮಗೆ ಆ ಭರವಸೆ ಕೊಡಬಲ್ಲೆ.

ಭಾರತ ದೊಡ್ಡ ವಸಾಹತು ರಾಷ್ಟ್ರ. ಅದರಲ್ಲಿ ಮೈಸೂರು ಶ್ರೇಷ್ಠವಾದ ಸಂಸ್ಥಾನ. ಬ್ರಿಟಿಷ್ ಗವರ್ನರಗಳಿಗೂ, ಬ್ರಿಟಿಷ್ ಉಪಕರಣಗಳಿಗೂ : ಈ ಸಂದೇಶ ತಿಳಿಸಲು ನಿಮಗೆ ಸಾಧ್ಯ . ಅದು ಹೀಗೆ: ಮೈಸೂರಿನಲ್ಲಿ ರಾಮರಾಜ್ಯವನ್ನು ಸ್ಥಾಪಿಸಿ; ಜನರು ಯಾರ ಅಪ್ಪಣೆಯನ್ನು ಒಪ್ಪಿಕೊಳ್ಳುತ್ತಾರೊ ಅಂಥ ವರಿಷ್ಠ ನಿಮ್ಮ ಮಹರ್ಷಿ . (ದೀರ್ಘ ಕರತಾಡನ!) ಹಾಗಾದರೆ ಆಗ ನೀವು ನಿಮ್ಮನ್ನು ಆಳುತ್ತಿರುವವರನ್ನು ಅಪ್ಪಣೆ ಮಾಡಿ ನಡೆಸಿಕೊಳ್ಳಬಹುದು."

ಗಾಂಧೀಜಿ ಸಭೆಯನ್ನು ಮುಗಿಸಿಕೊಂಡು ಗಾಜಿನ ಮನೆಯಿಂದ ಹೊರಗೆ ಬಂದರು. ಜನರ ಸಂದಣಿಯೊ ಸಂದಣಿ . ಎಲ್ಲರಿಗೂ ಹರ್ಷ ಉಕ್ಕುತ್ತಿತ್ತು. ದರ್ಶನಕ್ಕೆ ಎಂದು ಬಂದಿದ್ದ ಚಾಮರಾಜಪೇಟೆಯ ಏಳು ವರ್ಷದ ಹುಡುಗಿಯೊಬ್ಬಳು ಜನರ ಗುಂಪಿನ ನೂಕು ನುಗ್ಗಲಿನಲ್ಲಿ ಸಿಕ್ಕಿ ಬಿದ್ದಳು. ಯಾರಿಗೂ ಇದು ಗೊತ್ತಾಗಲಿಲ್ಲ ಆದರೆ ಗಾಂಧೀಜಿಯದು ಚುರುಕು ಕಣ್ಣು. ನಿಂತಲ್ಲಿಂದಲೇ ಅವರು ಅದನ್ನು ನೋಡಿದರು. ಆ ಮಗುವನ್ನು ಕಾಪಾಡಲು ಓಡಿದರು ಅಲ್ಲಿಗೆ. ಜನಸಂದಣಿಗೆ ಏನೂ ತಿಳಿಯಲಿಲ್ಲ. ಎಲ್ಲರೂ ಮಂತ್ರ ಮುಗ್ದರಂತೆ ನಿಂತುಬಿಟ್ಟರು. ಎಲ್ಲ ನಿಶ್ಶಬ್ದ ಆಯಿತು. ಗಾಂಧೀಜಿಗೆ ದಾರಿಬಿಟ್ಟಿತು ಗುಂಪು. ಅವರು ಆ ಹುಡುಗಿಯ ಬಳಿಗೆ ಓಡಿ, ಅವಳನ್ನು ಎತ್ತಿಕೊಂಡು ಬಂದು ಅವಳ ಅಣ್ಣನ ಕೈಗೆ ಕೊಟ್ಟರು.

ಸಂಜೆಯ ಊಟಕ್ಕೂ ಗಾಂಧೀಜಿಗೆ ನೆಲಗಡಲೆ ಬೀಜ, ಹಣ್ಣು. ಎರಡು ಮಾವಿನ ಹಣ್ಣನ್ನು ತೆಗೆದುಕೊಂಡು ಅದನ್ನು ತೊಳೆದುಕೊಡುವಂತೆ ಅತಿಥಿ ಸತ್ಕಾರದ ಪಾರುಪತ್ಯಗಾರರು ಕೃಷ್ಣಯ್ಯರ್ ಕೈಗೆ ಕೊಟ್ಟರು. ತೊಳೆದು ಕೊಡುವಂತೆ ಹೇಳಿ ಅವರು ಮತ್ತೊಬ್ಬ ಸ್ವಯಂ ಸೇವಕನ ಕೈಗೆ ಕೊಟ್ಟರು.

ಚಟಾಕಿ

ಗಾಂಧೀಜಿ ಇದನ್ನೆಲ್ಲ ನೋಡುತ್ತಿದ್ದರು. ನಡುವೆ ಅಡ್ಡಿಮಾಡಿ– "ಅಲ್ಲ ನಾನು ನಿಮಗೆ ಒಂದು ಕೆಲಸ ಒಪ್ಪಿಸಿದೆ. ನೀವು ನಿಮ್ಮ ಕೈಕೆಳಗಿನವರಿಗೆ ಹೇಳುತ್ತೀರಿ ಅವನು ಮತ್ತೊಬ್ಬನಿಗೆ ಹೇಳುತ್ತಾನೆ. ಅವನು ಮತ್ತೊಬ್ಬನಿಗೆ. ಈ ಸರಪಣಿ ಎಲ್ಲಿಗೆ ಕೊನೆ ಮುಟ್ಟಬೇಕು? ಹೀಗಾದರೆ ಈ ಕೆಲಸದ ಹೊಣೆ ಯಾರದು? ಎಂದು ಖಚಿತ ಪಡಿಸಲು ಸಾಧ್ಯವಾಗುವುದಿಲ್ಲ" ಎಂದರು. ಕೂಡಲೆ ಕೃಷ್ಣಯ್ಯರ್ ಸ್ವಯಂ ಸೇವಕನಿಂದ ಆ ಮಾವಿನ ಹಣ್ಣನ್ನು ತೆಗೆದುಕೊಂಡು ತಾವೇ ಸ್ವತಃ ತೊಳೆದುಕೊಟ್ಟರು. ಆ ರಾತ್ರಿ ಏಳು ಗಂಟೆ ಹೊತ್ತಿಗೆ ಗಾಂಧೀಜಿಯನ್ನು ನೋಡಲು ಮೈಸೂರಿನಿಂದ ನೇರಾಗಿ ದಿವಾನ್ ವಿಶ್ವೇಶ್ವರಯ್ಯನವರು ಮೋಟಾರಿನಲ್ಲಿ ಬಂದರು. ಒಳಗಡೆ ಒಂದು ಗಂಟೆಯ ಕಾಲ ಮಾತುಕತೆ ನಡೆಯಿತು. ಹೊರಗೆ ಬರುವಾಗ ವ್ಯವಸ್ಥಾಪಕರನ್ನು ನೋಡಿ ದಿವಾನರು ಗಾಂಧೀಜಿಗೆ ಮೊದಲನೆ ತರಗತಿಯ ಟಿಕೇಟು ತೆಗೆದುಕೊಡಿ ಎಂದರು. ದುಡ್ಡಿನ ಕೊರತೆ ಏನೂ ಇರಲಿಲ್ಲ. ದಂಡಿನ ಶ್ರೀಮಂತ



ಮೊದಲಿಯಾರ್ ಕೆಲವರು ವ್ಯವಸ್ಥೆ ಮಾಡುತ್ತ ಇದ್ದರು. ಗಾಂಧೀಜಿಗಾಗಿ ಎಷ್ಟು ವೆಚ್ಚ ಮಾಡಬೇಕಾಗಿ ಬಂದರೂ ಅವರು ಸಿದ್ಧ.

ಆದರೆ ಮೊದಲನೆ ತರಗತಿಯ ಡಬ್ಬಿಯಲ್ಲಿ ಪ್ರಯಾಣಮಾಡಲು ಒಪ್ಪಬೇಕಲ್ಲ; ಗಾಂಧೀಜಿ ಒಪ್ಪಲಿಲ್ಲ. ಬರುವಾಗ ನಟೇಶನ್ ಅವರಿಗೆ ಕಾಯಿಲೆ. ಆದ್ದರಿಂದ ಅವರ ಜೊತೆಯಲ್ಲಿ ಬೆಂಗಳೂರಿಗೆ ಪ್ರಥಮ ದರ್ಜೆಯಲ್ಲಿ ಪ್ರಯಾಣ ಮಾಡಬೇಕಾಯಿತು. ಆದರೆ ಈಗ ಅಂಥ ಅಗತ್ಯ ಇಲ್ಲ. ಒಂದು ವೇಳೆ ತಮ್ಮ ಮಾತನ್ನು ಅಸಡ್ಡೆ ಮಾಡದೆ, ಮೊದಲನೆ ತರಗತಿಯ ಟಿಕೆಟ್ಟನ್ನೆ ಕೊಂಡುಕೊಂಡರೆ, ಮುಂದಿನ ಸ್ಟೇಶನ್ನಿನಲ್ಲಿ ಕೆಳಗಿಳಿದು ಮೂರನೆ ತರಗತಿಯ ಡಬ್ಬಿಯಲ್ಲಿಯೆ ಹೋಗಿ ಕೂಡುತ್ತೇನೆ ಎಂದು ಗಾಂಧೀಜಿ ಹೇಳಿದರು. ಈ ಹಟಕ್ಕೆ ಮದ್ದು ಏನು ಬಂತು? ಕಡೆಗೆ ಮೂರನೆಯ ಡಬ್ಬಿಯಲ್ಲಿಯೆ ಪ್ರಯಾಣ ನಡೆಯಿತು.

ಬೆಂಗಳೂರಿನ ಸ್ವಾಗತ

ಇದು ಕರ್ನಾಟಕಕ್ಕೆ ಗಾಂಧೀಜಿಯ ಪ್ರಥಮ ಭೇಟಿ. ಭೇಟಿ ಬಹಳ ಯಶಸ್ವಿ ಆಯಿತು. ಆ ಸಂದರ್ಭದಲ್ಲಿ ಹುಟ್ಟಿಕೊಂಡದ್ದು ಗೋಖಲೆ ಸಾರ್ವಜನಿಕ ಸಂಸ್ಥೆ. ಅದರ ಸ್ಥಾಪಕರು ಶ್ರೀ ಡಿ.ವಿ. ಗುಂಡಪ್ಪನವರು. ಆ ಭೇಟಿಯ ಬಗ್ಗೆ ತಮ್ಮ ನೆನಪಿನಿಂದ ಅವರು "ಬರೆದ ಮಾತುಗಳನ್ನು ಎತ್ತಿಕೊಡುವುದು ಅಪ್ರಸ್ತುತ ಅಲ್ಲ. "ಗಾಂಧೀಜಿ ಆಗ ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದರು. ಬೆಂಗಳೂರಿಗೂ ಬರಬೇಕೆಂದು ಮದ್ರಾಸಿಗೆ ತಂತಿ ಕೊಟ್ಟೆವು. ಅವರಿಂದ ಒಪ್ಪಿಗೆ ಬಂತು. ಈ ಸಂದರ್ಭದಲ್ಲಿ ನಡೆದ ಒಂದು ಸಂಗತಿಯನ್ನು ಹೇಳಬೇಕು, ತುಂಬ ಯೋಗ್ಯ. ನಮಗೆ ದುಡ್ಡು ಬೇಕಾಗಿತ್ತು. ಕೆಲವರು ವರ್ತಕ-ವ್ಯವಹಾರಿಗಳನ್ನು ಕಂಡರೆ ಒಳ್ಳೆಯದು ಎಂದು ಒಬ್ಬ ಮಿತ್ರರು ಹೇಳಿದರು. ಅದರಲ್ಲೂ ಮುಖ್ಯವಾಗಿ ಷಣ್ಮುಗಂ ಮೊದಲಿಯಾರ್ ಬಳಿಗೆ ಹೋಗಿ ಎಂದರು. ಅದೇ ರೀತಿ ಅಲ್ಲಿಗೆ ಹೋಗಿ ನಮ್ಮ ಉದ್ದೇಶವನ್ನು ತಿಳಿಸಿದೆವು. ಅವರು ಕೇಳಿದರು:

"ನಿಮ್ಮಲ್ಲಿ ಎಷ್ಟು ಹಣ ಇದೆ?

"ನೂರೈವತ್ತೊ ಇನ್ನೂರೋ ಇದೆ"

ಅವರು ನಸು ನಕ್ಕರು. ಆಮೇಲೆ ಕೇಳಿದರು:

"ನನ್ನಿಂದ ಏನು ಆಗಬೇಕು?'

" ಒಂದು ನೂರು ರೂಪಾಯಿ ಕೊಟ್ಟರೆ ಸಾಕು."

ಶ್ರೀ ಷಣ್ಮುಖಂ ಮೊದಲಿಯಾರ್ ಗಟ್ಟಿಯಾಗಿ ನಕ್ಕು ಹೇಳಿದರು: " ಅಯ್ಯಾ ನೀವು ಎಂಥ ಕೆಲಸ ಮಾಡುತ್ತಿದ್ದೀರಿ ನಿಮಗೇ ಗೊತ್ತಿಲ್ಲ. ಅಂಥ ದೊಡ್ಡವರನ್ನು ಕರೆಸಿದ ಮೇಲೆ ಅವರಿಗಾಗಿ ಯೋಗ್ಯ ವಸತಿ, ಯೋಗ್ಯ ಸತ್ಕಾರ ಏರ್ಪಡಿಸಬೇಕು. ಇದಕ್ಕೆ ಬಹಳ ವೆಚ್ಚವಾಗುತ್ತದೆ. ಇದೋ ತೆಗೆದುಕೊಳ್ಳಿ ಎಂದು 1,000 ರೂಪಾಯಿ ಕೊಟ್ಟರು. ನನ್ನ ಸ್ನೇಹಿತರಿಗೂ ಹೇಳುತ್ತೇನೆ. ನಿಮಗೆ ಇನ್ನೂ ಹಣ ಬೇಕಾಗಬಹುದು. ಅವರು ಇರಲಿಕ್ಕೆ ಒಂದು ವಿಶಾಲವಾದ ಮನೆ ಏರ್ಪಾಡು ಮಾಡಿ. ಅದನ್ನು ಅಚ್ಚುಕಟ್ಟಾಗಿ ಸಿಂಗರಿಸಿ. ನೀವು ಏನು ಬಿನ್ನವತ್ತಳೆ ಕೊಡಬೇಕೋ ಅವರಿಗೆ ಅದನ್ನು ಅತ್ಯುತ್ತಮವಾಗಿ ಅಚ್ಚು ಮಾಡಿಸಿ. ಅದನ್ನು ಕೊಡಲು ಒಂದು ಸೊಗಸಾದ ಪೆಟ್ಟಿಗೆ ಮಾಡಿಸಿ .ಸಭಾಸ್ಥಳವನ್ನು ಮನ ತಟ್ಟುವಂತೆ ಚೆನ್ನಾಗಿ ಅಲಂಕಾರ ಮಾಡಿಸಿ. ಯಾವುದಕ್ಕೂ ಕೈ ಬಿಗಿ ಹಿಡಿಯ ಬೇಡಿ. ಧಾರಾಳವಾಗಿ ವೆಚ್ಚ ಮಾಡಿ. ಚೆನ್ನಾಗಿ ಕೆಲಸ ಮಾಡಿ . ನಮ್ಮ ಮೋಟಾರುಗಳೂ ಆಗ ನಿಮ್ಮ ಸ್ವಾಧೀನದಲ್ಲಿರುತ್ತವೆ. ನೆನಪಿರಲಿ ಆ ದೊಡ್ಡ ಸಂಭಾವಿತ ಮನುಷ್ಯನಿಗೆ ತಕ್ಕ ಹಾಗೆ ನಮ್ಮ ಸ್ವಾಗತ ಭವ್ಯವಾಗಿರಬೇಕು. ಬೆಂಗಳೂರಿಗೆ ಅಗೌರವ ತರಬಾರದು.

"ಮಹಾತ್ಮಾ ಗಾಂಧೀಜಿಯ ಈ ಭೇಟಿ ಯಶಸ್ವಿ ಆಯಿತು. ಬೆಂಗಳೂರಿಗೆ ಅವರು ಬಂದದ್ದು ಇದೇ ಮೊದಲು. ಜನರ ಉತ್ಸಾಹ, ಅವರ ಹುರುಪು ಹಿಂದೆ ಎಂದೂ ಇಷ್ಟು ಕಂಡಿರಲಿಲ್ಲ, ಮೈಸೂರಿನ ವೃದ್ಧ ಪಿತಾಮಹ ತಾತಯ್ಯನವರು ಶ್ರೀ ವೆಂಕಟಕೃಷ್ಣಯ್ಯ ಅವರು ಇದಕ್ಕಾಗಿಯೇ ಮೈಸೂರಿನಿಂದ ಬಂದಿದ್ದರು. ನಿವೃತ್ತ ಹೈಕೋರ್ಟ್ ನ್ಯಾಯಾಧಿಪತಿ ಶ್ರೀ ಎ .ಆರ್. ನಾಗೇಶ್ವರ ಅಯ್ಯರ್ ಅವರ ನೇತೃತ್ವದಲ್ಲಿ ಒಳ್ಳೇ ಶಿಸ್ತಿನ ಸ್ವಯಂ ಸೇವಕರು ನಮಗೆ ನೆರವಾಗಿ ನಿಂತರು."

■



ಮಹಾತ್ಮ ಗಾಂಧಿಯವರ ಮಹತ್ವಗಳು

- ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ತಮ್ಮ ಜೀವಮಾನದಲ್ಲಿ 79 ಸಾವಿರ ಮೈಲಿಗಳಷ್ಟು ನಡೆದರು.
- ಬಾಪೂಜಿ ಪ್ರತಿದಿನ ಸರಾಸರಿ 18 ಮೈಲಿ ದೂರ ನಡೆಯುತ್ತಿದ್ದರು.
- ಗಾಂಧೀಜಿಯವರು ಪ್ರತಿದಿನ 100 ರಿಂದ 120 ಪತ್ರಗಳನ್ನು ಬರೆಯುತ್ತಿದ್ದರು. (ಗಾಂಧೀಜಿಗೆ ಬಂದ ಪತ್ರಗಳು ಮತ್ತು ಗಾಂಧಿ ಇತರರಿಗೆ ಬರೆದ ಪತ್ರಗಳು ಸೇರಿ ಒಟ್ಟು 03 ಲಕ್ಷ 62 ಸಾವಿರ ಪತ್ರಗುಚ್ಛ)
- ಪ್ರಪಂಚದ ಬಹಳಷ್ಟು ದೇಶಗಳಲ್ಲಿ ಇಂಡಿಯಾ ಎಂದರೆ ' Gandhi Land ' ಎಂದೇ ಚಿರಪರಿಚಿತ. ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ಗಾಂಧೀಜಿಯವರಿಗೆ,

  ಮಹಾತ್ಮ ಗಾಂಧಿ – ಸುಪ್ರೀಂ ಲೀಡರ್ ಇಂಡಿಯಾ

  ಮಹಾತ್ಮ ಗಾಂಧಿ – ಭಂಗಿ ಕಾಲೋನಿ ನ್ಯೂ ಡೆಲ್ಲಿ'

  ಮಹಾತ್ಮ ಗಾಂಧಿ ಬಾರ್ – ಅಟ್ – ಲಾ, ಸೆಂಟ್ರಲ್ ಪ್ರಿಸನ್

  ಯರವಾಡ – ಪುಣೆ, ಇಂಡಿಯಾ

  ಮಹಾತ್ಮ ಗಾಂಧಿ ಪ್ರಾಮಿನೆಂಟ್ ಲೀಡರ್ ಸಬರಮತಿ ಆಶ್ರಮ, ಇಂಡಿಯಾ

ಈ ವಿಳಾಸಗಳ ಮೇಲೆ ವಿದೇಶಿಗರಿಂದ ಪತ್ರಗಳು ಬರುತ್ತಿದ್ದವು. ಅಂದರೆ ಆಗಲೇ ಗಾಂಧಿ ಅವರ ಹೆಸರು ಜಗತ್ತಿಗೆ ಅಷ್ಟು ಪರಿಚಿತವಾಗಿತ್ತು . ಇಂಡಿಯಾದ ಜೊತೆಗೆ ಗಾಂಧಿ ಹೆಸರೂ ಸಹ ಸೇರಿತ್ತು.

ಕೆಲವೊಮ್ಮೆ ವಿಳಾಸ ಬರೆಯುವಾಗ ನಗುಮೊಗದ ಬಾಪೂಜಿಯ ಭಾವಚಿತ್ರವಿರುವ ಸ್ಟ್ಯಾಂಪ್ ಅಂಟಿಸಿ, ಕೆಳಗಡೆ ಇಂಡಿಯಾ ಎಂದು ಅಷ್ಟೇ ಬರೆಯುತ್ತಿದ್ದರು.

- ಅದು 1906 ನೇ ಇಸವಿ. ದಕ್ಷಿಣ ಆಫ್ರಿಕೆಯ ಜೋಹಾನ್ಸ್ ಬರ್ಗ್ – ಡರ್ಬಾನ್ ನಲ್ಲಿ ಪ್ರತಿಭಟನೆ ಮಾಡುತ್ತಿದ್ದ ಸಮಯದಲ್ಲಿ ಸತ್ಯಾಗ್ರಹಿ ಗಾಂಧಿಯ ಎದೆಗೆ ಒದ್ದವನು, ಜೈಲಿಗೆ ಹಾಕಿ ಕೊಡಬಾರದ ಹಿಂಸೆ ಕೊಟ್ಟವನು 14 ವರುಷ ಆಗುವಷ್ಟು ಜೈಲು ಶಿಕ್ಷೆಗೆ ಗುರಿ ಪಡಿಸಿದವನು ವಿಕೃತ ಮನಸಿನ ಸರ್ವಾಧಿಕಾರಿ ಧೋರಣೆಯ ಮಿಲ್ಟ್ರಿ ಅಧಿಕಾರಿ ಜನರಲ್ ಸ್ಮಟ್ಸ್. ಅದೇ ಸ್ಮಟ್ಸ್ ಕೊನೆಗೊಂದು ದಿನ ಗಾಂಧಿಯವರ ಅಭಿಮಾನಿಯಾದ ಎಂದು ಪ್ರಪಂಚದ ಇತಿಹಾಸದ ಪುಟಗಳು ಸಾರಿ ಹೇಳುತ್ತವೆ. ಆತ ' ಗಾಂಧಿ ಪಥ ' ಹೆಸರಿನ ಕೃತಿಯಲ್ಲಿ ನಮ್ಮ ರಾಷ್ಟ್ರಪಿತನನ್ನು 'ಸೇಂಟ್' (ಸಂತ) ಎಂದು ಮೊದಲ ಬಾರಿಗೆ ಕರೆದನು. ಆರಂಭದಲ್ಲಿ ತರುಣ ಗಾಂಧಿಯನ್ನು ಸರಿಯಾಗಿ ಅರಿಯದೆ ಚಿತ್ರಹಿಂಸೆ ಕೊಟ್ಟಿದ್ದಕ್ಕೆ ಜನರಲ್ ಸ್ಮಟ್ಸ್ ಪಶ್ಚಾತಾಪ ಪಟ್ಟನು.
- ಸಿರಿವಂತ ಕುಟುಂಬದ ಬ್ರಿಟಿಷ್ ಎಡ್ಮಿರಲ್ ಮಗಳು ಮೆಡಿಲಿನ್ ಸ್ಲೇಡ್. ಫ್ರೆಂಚ್ ಆಥರ್, ನೊಬೆಲ್ ಸಾಹಿತ್ಯ ಪ್ರಶಸ್ತಿ ವಿಜೇತರಾದ ರೋಮಾ ರೋಲಾ ಅವರು ಬರೆದ ಗಾಂಧೀಜಿಯವರ ಜೀವನ ಚರಿತ್ರೆಯನ್ನು ಓದಿ ಪ್ರಭಾವಿತಗೊಂಡು ತನ್ನೆಲ್ಲ ಸಿರಿವಂತಿಕೆಯನ್ನು ಅಲ್ಲಿಯೇ ಬಿಟ್ಟು ಉಟ್ಟ ಬಟ್ಟೆಯ ಮೇಲೆ ಭಾರತಕ್ಕೆ ಬಂದ ಮೆಡಿಲಿನ್ ಸ್ಲೇಡ್ ಬಾಪೂಜಿ ಆಶ್ರಮಕ್ಕೂ ಸೇರಿಕೊಂಡಳು, ಅಲ್ಲಿ ತಾನೇ ಆಯ್ಕೆ ಮಾಡಿಕೊಂಡ ಬಡತನಕ್ಕೆ ಒಗ್ಗಿಕೊಂಡಳು. ಮಹಾತ್ಮನ ಮಾನಸ ಪುತ್ರಿಯೂ ಆದಳು.ಮುಂದೆ ಆಕೆಯ ಮೂಲ ಹೆಸರನ್ನು ಬಾಪೂಜಿ ಬದಲಾಯಿಸಿ 'ಮೀರಾ ಬೆನ್ ' ಎಂದು ಹೆಸರಿಟ್ಟು, ದತ್ತು ಮಗಳಾಗಿ ಸ್ವೀಕಾರ ಮಾಡಿದರು.

(ಸಂಗ್ರಹ : ನೇತಾಜಿ ಗಾಂಧಿ)



ಸಿದ್ಧವನಹಳ್ಳಿ ಕೃಷ್ಣಶರ್ಮ

ಸಿದ್ಧವನಹಳ್ಳಿ ಕೃಷ್ಣಶರ್ಮ ಅವರು ಗಾಂಧಿ ವಿಚಾರವಾದಿ, ಸ್ವಾತಂತ್ರ್ಯ ಹೋರಾಟಗಾರ, ವಾಗ್ಮಿ, ಲೇಖಕ, ಸಹಕಾರಿ ಕ್ಷೇತ್ರದ ಹರಿಕಾರ ಮತ್ತು ಪತ್ರಕರ್ತರು.

ಕೃಷ್ಣಶರ್ಮರು 1904ರ ಜುಲೈ 4 ರಂದು ಚಿತ್ರದುರ್ಗ ತಾಲ್ಲೂಕಿನ ಸಿದ್ಧವನಹಳ್ಳಿಯಲ್ಲಿ ಜನಿಸಿದರು. ತಂದೆ ರಂಗಾಚಾರ್, ತಾಯಿ ಶೇಷಮ್ಮನವರು. ತಂದೆಯ ತಾತಂದಿರು ಮೈಸೂರು ಪರಕಾಲ ಮಠದ ಕಾರ್ಯಕರ್ತರಾಗಿದ್ದರೆ ಅವರ ಅಣ್ಣಂದಿರು ಪರಕಾಲಮಠದ ಸ್ವಾಮಿಗಳಾಗಿದ್ದ ಪ್ರಕಾಂಡ ಪಂಡಿತರಾದ ಶ್ರೀ ಶ್ರೀನಿವಾಸ ಬ್ರಹ್ಮತಂತ್ರ ಪರಕಾಲ ಯತೀಂದ್ರರು. ಇವರು ಅಂದಿನ ಮೈಸೂರು ಮಹಾರಾಜರಿಗೆ ರಾಜಗುರುಗಳಾಗಿದ್ದವರು. ಇಂತಹ ಕೌಟುಂಬಿಕ ಹಿನ್ನೆಲೆಯಲ್ಲಿ ಹುಟ್ಟಿದ ಕೃಷ್ಣಶರ್ಮರಿಗೂ ಸ್ವಾಭಾವಿಕವಾಗಿ ವಿದ್ವತ್, ಸಂಸ್ಕಾರ, ಒಳ್ಳೆಯ ನಡವಳಿಕೆಗಳು ಬಳುವಳಿಯಾಗಿ ಬಂದಿದ್ದವು.

ಕೃಷ್ಣ ಶರ್ಮರ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಹುಟ್ಟಿದ ಹಳ್ಳಿಯಲ್ಲಿಯೆ ನಡೆಯಿತು . ಶಾಲೆಯ ಉಪಾಧ್ಯಾಯರಾಗಿದ್ದ ಸೂರಪ್ಪನವರು ಸಂಜೆಯ ವೇಳೆ ಓದುತ್ತಿದ್ದ ಭಾರತವಾಚನ ಇವರನ್ನು ಅಪಾರವಾಗಿ ಆಕರ್ಷಿಸಿತ್ತು. ಕೃಷ್ಣಶರ್ಮರು ಮಾಧ್ಯಮಿಕ ಶಾಲೆಗೆ ಸೇರಿದ್ದು ಚಿತ್ರದುರ್ಗದ ಆಂಗ್ಲೋ ವರ್ನಾಕ್ಯುಲರ್ ಶಾಲೆಗೆ. ಅಲ್ಲಿನ ಕನ್ನಡ ಪಂಡಿತರಾದ ಗರಣಿ ರಂಗಾಚಾರ್ಯರು ವ್ಯಾಕರಣದಲ್ಲಿ ನಿಷ್ಣಾತರಾಗಿದ್ದು ಸಂಸ್ಕೃತ, ಕನ್ನಡ ಎರಡು ಭಾಷೆಗಳಲ್ಲೂ ಪಂಡಿತರಾಗಿದ್ದರು. ಇವರ ಪ್ರೋತ್ಸಾಹದಿಂದ ಕೃಷ್ಣಶರ್ಮರಿಗೆ ಕನ್ನಡದಲ್ಲಿ ಅಭಿರುಚಿ ಬೆಳೆಯತೊಡಗಿತು. ಹೈಸ್ಕೂಲಿಗೆ ಬಂದಾಗ ಹನುಮಂತರಾಯರೆಂಬ ಕನ್ನಡ ಪಂಡಿತರು ಛಂದಸ್ಸನ್ನು ಕಲಿಸಿದರು. ಜೊತೆಗೆ ಚಿಕ್ಕಪ್ಪನವರ ಮನೆಯಲ್ಲಿ ತಂದಿಟ್ಟಿದ್ದ ಶ್ರೀರಾಮ ಪಟ್ಟಾಭಿಷೇಕ, ರಾಮಾಶ್ವಮೇಧ, ಆನಂದ ರಾಮಾಯಣ ಮುಂತಾದ ಕೃತಿಗಳಲ್ಲದೆ ದೈವಶಿಖಾಮಣಿ ಅಳಸಿಂಗಾಚಾರ್ಯರ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಗ್ರಂಥಗಳನ್ನೆಲ್ಲ ಓದಿ ಪರಿಚಯ ಮಾಡಿಕೊಂಡರು.

ಒಮ್ಮೆ ಹೈಸ್ಕೂಲಿನಲ್ಲಿದ್ದಾಗ ಇನ್ಸ್ಪೆಕ್ಷನ್ನಾಗಿ ಬಂದ ಇನ್ಸ್ಪೆಕ್ಟರು ತರಗತಿಯಲ್ಲಿ ಪರೀಕ್ಷೆ ನಡೆಸಿ ಇವರಿಗಿದ್ದ ಸಂಸ್ಕೃತ, ಕನ್ನಡದ ಜ್ಞಾನವನ್ನು ಕಂಡು ಬಹುಮಾನ ರೂಪವಾಗಿ ಬಿ. ವೆಂಕಟಾಚಾರ್ಯರ 'ವಂಗವಿಜೇತ', 'ವಿಷವೃಕ್ಷ' ಕಾದಂಬರಿಗಳನ್ನು ನೀಡಿದರಂತೆ. ಹೀಗೆ ದೊರೆತ ಕನ್ನಡ ಕಾದಂಬರಿಗಳನ್ನು ಓದುತ್ತಾ ಹೋದಂತೆ ಕೃಷ್ಣಶರ್ಮರಲ್ಲಿ ಕನ್ನಡದ ಬಗ್ಗೆ ಹೆಚ್ಚು ಹೆಚ್ಚು ಆಸ್ಥೆ ಬೆಳೆಯತೊಡಗಿತು. ಹೀಗೆ ಓದುತ್ತಾ ಹೋದಂತೆಲ್ಲ ಬರವಣಿಗೆಯನ್ನೂ ಪ್ರಾರಂಭಿಸಿ, ಚಿಕ್ಕಪ್ಪನೊಡನೆ ಸೇರಿ ಹೊರತಂದ ಕೈಬರಹದ ಪತ್ರಿಕೆ 'ವಾಣಿವಿಲಾಸ'. ಇದು ಒಂದೆರಡು ಸಂಚಿಕೆಯ ನಂತರ ನಿಂತುಹೋದ್ದರಿಂದ, ಮೈಸೂರಿನ 'ಮಧುರವಾಣಿ' ಪತ್ರಿಕೆಗೆ ಕೆಲ ಕತೆಗಳನ್ನು ಬರೆದರು. ಕಾಲೇಜಿಗೆ ಸೇರಿದ್ದು ಮೈಸೂರಿನಲ್ಲಿ. ಮೊದಲ ಬಿ.ಎ. ಓದುತ್ತಿದ್ದಾಗ ಗಾಂಧೀಜಿಯವರ ಕರೆಗೆ ಓಗೊಟ್ಟು ಕಾಲೇಜು ತೊರೆದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾದರು.

1920–21ರ ಸುಮಾರಿನಲ್ಲಿ, ಆಯುರ್ವೇದ, ಯೋಗ, ಶಿಕ್ಷಣ ತಜ್ಞರಾಗಿದ್ದ ಪಂಡಿತ ತಾರಾನಾಥರ ಪರಿಚಯವಾಗಿ 'ಪ್ರೇಮಾಯತನ' ಆಶ್ರಮದಲ್ಲಿ ಕೆಲಕಾಲ ಕಾರ್ಯನಿರ್ವಹಿಸಿದರು. ಹುಡುಗ ಸಂನ್ಯಾಸಿಯಾಗಿ ಬಿಡುತ್ತಾನೆ ಎಂದು ಹೆದರಿದ ಮನೆಯವರು ಹಿಂದಕ್ಕೆ ಕರೆತಂದು 1925ರಲ್ಲಿ ಮದುವೆ ಮಾಡಿದರು. ಮದುವೆಯಾದದ್ದು ಹೈದರಾಬಾದಿನ ಇನ್ಸಪೆಕ್ಟರರ ಪುತ್ರಿಯಾದ್ದರಿಂದ ಹೈದರಾಬಾದಿಗೆ ಉದ್ಯೋಗಕ್ಕಾಗಿ ತೆರಳಿ ಮೆಥಡಿಸ್ಟ್ ಶಾಲೆಯೊಂದರಲ್ಲಿ ಅಧ್ಯಾಪಕರಾಗಿ ಸೇರಿದರು. ಆಗ ಹೈದರಾಬಾದಿನ ಶಾಲೆಗಳಲ್ಲಿ ಕನ್ನಡವನ್ನೂ ಉರ್ದುವಿನಲ್ಲಿ ಬೋಧಿಸುತ್ತಿದ್ದರು. ಇವರು ಕನ್ನಡವನ್ನು ಕನ್ನಡದಲ್ಲೆ ಬೋಧಿಸಿದ ಮೊದಲ ಅಧ್ಯಾಪಕರೆನಿಸಿದರು.

ಅಧ್ಯಾಪಕರಾಗಿದ್ದರೂ ನಿಜಾಮರ ಆಡಳಿತದ ವಿರುದ್ಧ ತೆಲುಗು, ಮರಾಠಿ, ಕನ್ನಡ ಸಂಘಗಳನ್ನೂ ಸ್ಥಾಪಿಸಿ, ಆಯಾಯ ಭಾಷೆಯ ಜನ ಒಂದೆಡೆ ಸೇರುವಂತೆ ಮಾಡುತ್ತಿದ್ದ ರಾಜಕೀಯ ನಾಯಕರಿಗೆ ಒತ್ತಾಸೆಯಾಗಿರುವುದರ ಜೊತೆಗೆ, ಕನ್ನಡಿಗರನ್ನೂ ಒಗ್ಗೂಡಿಸುವ ಕೆಲಸವನ್ನು ಶರ್ಮರು ಕೈಗೊಂಡರು. ಖಾದಿ ಪ್ರಚಾರ, ಪ್ರಭಾತ್ ಫೇರಿ, ರಾಷ್ಟ್ರೀಯ ಹಾಡುಗಳನ್ನೂ ಸಾರ್ವಜನಿಕವಾಗಿ ಹಾಡುವುದು, ಸಾಮೂಹಿಕಗಾನ ಇವುಗಳಲ್ಲಿ ತೊಡಗಿಕೊಂಡಿರುವುದನ್ನು ಗಮನಿಸಿದ ನಿಜಾಮ್ ಸರಕಾರ ಶರ್ಮರನ್ನು ಹೈದರಾಬಾದಿನಿಂದ ಗಡಿಪಾರುಮಾಡಿತು. ಅಲ್ಲಿಂದ ಚಿತ್ರದುರ್ಗಕ್ಕೆ ಹಿಂದಿರುಗಿದ ಶರ್ಮರು ಕನ್ನಡ ಕೆಲಸವನ್ನು

ಮುಂದುವರೆಸಿದರು. ಧಾರವಾಡದಲ್ಲಿ ಬೇಂದ್ರೆ, ಗೋಕಾಕ್, ಬೆಟಗೇರಿ ಕೃಷ್ಣಶರ್ಮ ಮುಂತಾದವರು ನಡೆಸುತ್ತಿದ್ದ ಗೆಳೆಯರ ಗುಂಪಿನ ಸದಸ್ಯರಾಗಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು.

1941ರ ಸುಮಾರಿಗೆ ಅಹಮದಾಬಾದಿಗೆ ತೆರಳಿ ಗಾಂಧೀಜಿಯವರ ಆಶ್ರಮದಲ್ಲಿ ಕೆಲಕಾಲವಿದ್ದು, ಗಾಂಧೀಜಿಯವರ ದಿನಚರಿಯ ಬಗ್ಗೆ 'ವಾರ್ಧಾಯಾತ್ರೆ' ಮತ್ತು 'ಪರ್ಣಕುಟಿ' ಎಂಬ ಎರಡು ಗ್ರಂಥಗಳನ್ನು ರಚಿಸಿದರು. ಇವೆರಡೂ ಗಾಂಧೀಜಿಯವರ ಬಗ್ಗೆ ಬರೆದ ಶ್ರೇಷ್ಠ ಗದ್ಯ ಕೃತಿಗಳೆನಿಸಿವೆ.

1942ರ ಸುಮಾರಿಗೆ ಬೆಂಗಳೂರಿಗೆ ಹಿಂದಿರುಗಿದ ಶರ್ಮರು ತಿರುಮಲೆ ತಾತಾಚಾರ್ಯ ಶರ್ಮರು ನಡೆಸುತ್ತಿದ್ದ ವಿಶ್ವಕರ್ನಾಟಕ ಪತ್ರಿಕೆಯ ಸಹಸಂಪಾದಕತ್ವವನ್ನು ವಹಿಸಿಕೊಂಡರು. ಪತ್ರಿಕೆಯ ಮೂಲಕ ಯುವಜನರಲ್ಲಿ ರಾಷ್ಟ್ರೀಯ ಭಾವನೆಯನ್ನೂ ನಿಸ್ವಾರ್ಥ ಮನೋಭಾವವನ್ನೂ ಪ್ರೇರೇಪಿಸುವುದು ಅವರ ಗುರಿಯಾಗಿತ್ತು. ಜೊತೆಗೆ ಭೂದಾನ ಹಾಗೂ ಸಹಕಾರ ಚಳವಳಿಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು.

ವಿಶ್ವಕರ್ನಾಟಕ ಪತ್ರಿಕೆಯ ಸಹಸಂಪಾದಕರಾದಾಗ, ಸಂಪಾದಕರಾದ ತಿ.ತಾ. ಶರ್ಮರ ಲೇಖನ ಯಾವುದು, ಕೃಷ್ಣಶರ್ಮರ ಲೇಖನ ಯಾವುದು ಎಂಬುದನ್ನು ಪತ್ತೆ ಹಚ್ಚಲಾಗದ ಏಕರೂಪದ ಬರವಣಿಗೆ ಈ ಈರ್ವರದಾಗಿತ್ತು. ಇಬ್ಬರದೂ ಒಂದು ರೀತಿಯ ಹರಿತವಾದ ಭಾಷಾಪ್ರಯೋಗ, ಓದುಗರಲ್ಲಿ ಕಿಚ್ಚೆಬ್ಬಿಸುವ ಪದ ಪ್ರಯೋಗ, ರಾಷ್ಟ್ರೀಯ ಭಾವನೆಗಳನ್ನು ಬಡಿದೆಬ್ಬಿಸುವ ದಿಟ್ಟತನದ ಬರವಣಿಗೆ. ಇವುಗಳ ಜೊತೆಗೆ ಇವರು ನಿರ್ವಹಿಸುತ್ತಿದ್ದ 'ಮಾತಿನ ಮಂಟಪ', 'ಚಿಂತನ–ಮಂಥನ' ಅಂಕಣಗಳು ಬಹು ಪ್ರಸಿದ್ಧವಾಗಿದ್ದವು. ವಿಶ್ವಕರ್ನಾಟಕ ಪತ್ರಿಕೆಯಲ್ಲದೆ ವಾಹಿನಿ, ಜಯಕರ್ನಾಟಕ, ನವೋದಯ, ಭೂದಾನ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನುಡಿ ಮುಂತಾದ ಪತ್ರಿಕೆಗಳಲ್ಲಿಯೂ ಕೃಷ್ಣಶರ್ಮರು ಕಾರ್ಯನಿರ್ವಹಿಸಿದರು.

ಕೃಷ್ಣಶರ್ಮರು ಹಲವಾರು ಸಂಘ ಸಂಸ್ಥೆಗಳ ಸ್ಥಾಪನೆಗೂ ಕಾರಣರಾದರು. ಗಾಂಧಿಜಯಂತಿಯನ್ನು ಆಚರಿಸಿ ಉಳಿದ ಹಣದಲ್ಲಿ ಪುಸ್ತಕಭಂಡಾರವನ್ನೂ ಸ್ಥಾಪಿಸಿದ್ದಲ್ಲದೆ ಬೆಂಗಳೂರಿನ ಮಲ್ಲೇಶ್ವರದಲ್ಲಿ ಗಾಂಧಿ ಸಾಹಿತ್ಯಸಂಘವನ್ನು ಸ್ಥಾಪಿಸಿದರು . ಇದಲ್ಲದೆ ಸಾರ್ವಜನಿಕರ ಉಪಯೋಗಕ್ಕಾಗಿ ಮಲ್ಲೇಶ್ವರಂ ಶ್ರೀರಾಮ ಕೋ–ಆಪರೇಟಿವ್ ಬ್ಯಾಂಕ್, ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್, ಬೆಂಗಳೂರು ಎಜುಕೇಷನ್ ಸೊಸೈಟಿ, ಗಣೇಶನಗರ ನಿವೇಶನದಾರರ ಸಂಘ, ಮೈಸೂರಿನ ವಿದ್ಯೋದಯ ಸಭಾ, ಶ್ರೀನಿವಾಸ ಮಂದಿರ ಧರ್ಮಸಂಸ್ಥೆ, ಬೆಂಗಳೂರು ನಗರ ಪುಸ್ತಕ ಭಂಡಾರ, ಪ್ರಭಾತ್ ಸಾಹಿತ್ಯ, ಮುಂತಾದವುಗಳಲ್ಲದೆ ಹೈದರಾಬಾದಿನಲ್ಲೂ ಕೆಲ ಸಂಘಸಂಸ್ಥೆಗಳನ್ನು ಸ್ಥಾಪಿಸಿ 40ಕ್ಕೂ ಹೆಚ್ಚು ಸಂಘಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಅನುವಾದ ಶರ್ಮರ ಆಸಕ್ತಿಯ ಪ್ರಮುಖ ಕ್ಷೇತ್ರಗಳಲ್ಲಿ ಒಂದಾಗಿದ್ದು ಕೆ.ಎಂ. ಮುನ್ಷಿಯವರ 'ಕೃಷ್ಣಾವತಾರ', ನೆಹರುರವರ 'ಗ್ಲಿಂಪ್ಸ್ ಆಫ್ ವರ್ಲ್ಡ್ ಹಿಸ್ಟರಿ', ವಿನೋಬಾ ಭಾವೆಯವರ 'ಗೀತಾ ಪ್ರವಚನ' ಮುಂತಾದ ಮಹತ್ವದ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಲ್ಲದೆ, ಇಂಗ್ಲಿಷ್, ಹಿಂದಿ, ತೆಲುಗು ಭಾಷಣಗಳನ್ನೂ ಪರಿಣಾಮಕಾರಿಯಾಗಿ ಕನ್ನಡಕ್ಕೆ ಅನುವಾದ ಮಾಡುತ್ತಿದ್ದುದರಿಂದ ರಾಜಕೀಯ ನಾಯಕರೆಲ್ಲರೂ ತಮ್ಮ ಭಾಷಣದ ತರ್ಜುಮೆಗೆ ಇವರನ್ನೇ ಕರೆಯುತ್ತಿದ್ದರು. ವಿನೋಬಾರವರು ಭೂದಾನ ಯಜ್ಞ ಪ್ರಚಾರ ಯಾತ್ರೆ ಕೈಗೊಂಡಾಗ ಅವರೊಡನಿದ್ದು ಅನುವಾದ ಕಾರ್ಯವನ್ನು ಮಾಡಿದರು. ಗಾಂಧಿಸಾಹಿತ್ಯ, ವಿನೋಬಾ ಸಾಹಿತ್ಯ, ಸರ್ವೋದಯ ಸಾಹಿತ್ಯ, ವ್ಯಕ್ತಿಚಿತ್ರ, ಧಾರ್ಮಿಕ ಮುಂತಾದವುಗಳಿಗೆ ಸಂಬಂಧಿಸಿದಂತೆ ಶರ್ಮರು ರಚಿಸಿರುವ ಸಾಹಿತ್ಯ ಕೃತಿಗಳ ಒಟ್ಟು ಸಂಖ್ಯೆಯೇ ಸುಮಾರು 140ಕ್ಕೂ ಹೆಚ್ಚು.

'ಜಗತ್ಕಥಾವಲ್ಲರಿ'ಯು ಒಂದು ವಿಶಿಷ್ಟ ಕೃತಿಯಾಗಲು ಒಂದು ಪ್ರಮುಖ ಕಾರಣವೆಂದರೆ ನೆಹರು ರವರ 'ಗ್ಲಿಂಪ್ಸ್ ಆಫ್ ವರ್ಲ್ಡ್ ಹಿಸ್ಟರಿ'ಯನ್ನು ತಿ. ತಾ. ಶರ್ಮರೊಡನೆ ಸೇರಿ ಅನುವಾದಿಸಿದ್ದು, ಆದರೆ ಅದರಲ್ಲಿ ಕೃಷ್ಣಶರ್ಮರ ಭಾಗ ಯಾವುದು, ತಿ.ತಾ. ಶರ್ಮರ ಭಾಗ ಯಾವುದು ಎಂದು ಪತ್ತೆ ಹಚ್ಚಲಾಗದಂತಹ ಅನುವಾದವಿದ್ದು, ಈ ಇಬ್ಬರೂ ಹತ್ತು ಹತ್ತು ಪತ್ರಗಳನ್ನು ಅನುವಾದಿಸಿದ ಏಕರೂಪದ ಬರವಣಿಗೆಯಿಂದ ಕೂಡಿರುವ ವಿಶಿಷ್ಟ ಗ್ರಂಥವಾಗಿದೆ.

ಇದಲ್ಲದೆ ಕೃಷ್ಣಶರ್ಮರ ಇತರ ಅನುವಾದಗಳೆಂದರೆ – ಸಹಕಾರ, ಸರ್ವೋದಯ, ಭೂದಾನದ ಕತೆ, ವಿನೋಬಾ, ಭೂದಾನಯಜ್ಞ, ವಿನೋಬಾ ವಿಚಾರ ಲಹರಿ ಮುಂತಾದ ವಿನೋಬಾರವರ ಸಾಹಿತ್ಯ ಕೃತಿಗಳು.

ಯತಿರಾಜ ರಾಮಾನುಜ, ದೀಪಮಾಲೆ, ಕುಲದೀಪಕರು, ಕನ್ನಡದ ಕಿಡಿಗಳು, ಸರದಾರ್ ವಲ್ಲಬಾಯ್ ಪಟೇಲ್, ಜಮನಾಲಾಲ್ ಬಜಾಜ್, ಸತಿ ಕಸ್ತೂರಿಬಾ, ನೆನಪಿನ ಚಿತ್ರಗಳು ಮುಂತಾದವು ವ್ಯಕ್ತಿಚಿತ್ರಗಳು.

ಸಹಕಾರ ಕ್ಷೇತ್ರದಲ್ಲಿ ಪಂಚಾಯಿತಿ, ಮಾತಿನ ಮಂಟಪ, ನಮ್ಮ ಊರು,ನಮ್ಮ ಭೂಮಿ ಮುಂತಾದವು.

ಸಂವಾದಮಾಲೆ, ಪ್ರಸಾರ ದೀಕ್ಷೆ, ಸಂಕ್ಷಿಪ್ತ ಆತ್ಮಕಥೆ, ಮಂಗಳ ಪ್ರಭಾತ, ರಾಜಕೀಯ ಪತ್ರಗಳು, ಗೀತಾಮಾತೆ ಮೊದಲಾದವು ಗಾಂಧಿ ಸಾಹಿತ್ಯ ಕೃತಿಗಳು.

ಸರ್ವೋದಯ ಯಾತ್ರೆ, ಸರ್ವೋದಯ ಒಂದು ದರ್ಶನ, ಸರ್ವೋದಯ ಸಾಂಸ್ಕೃತಿಕ ಆಧಾರ ಮೊದಲಾದವು ಸರ್ವೋದಯ ಕೃತಿಗಳು.

ಸಿದ್ಧವನಹಳ್ಳಿ ಕೃಷ್ಣಶರ್ಮರ ಬಹುಮುಖ ಪ್ರತಿಭೆಗೆ ಗೌರವ ಸೂಚಿಸಲು ಅಭಿಮಾನಿಗಳು, ಗೆಳೆಯರು ಅರ್ಪಿಸಿದ ಗೌರವ ಗ್ರಂಥ ಸಿದ್ಧಹಸ್ತ (1973).

ಸಿದ್ಧವನಹಳ್ಳಿ ಕೃಷ್ಣಶರ್ಮರು 1973 ರ ಅಕ್ಟೋಬರ್ 14ರಂದು ಈ ಲೋಕವನ್ನಗಲಿದರು.2004ರಲ್ಲಿ ಶರ್ಮರ ಜನ್ಮಶತಾಬ್ದಿ ಸಂದರ್ಭದಲ್ಲಿ, ಸಿದ್ಧವನಹಳ್ಳಿ ಕೃಷ್ಣಶರ್ಮರ ವಿಶಿಷ್ಟ ರೀತಿಯ ನಾಡು–ನುಡಿ, ದೇಶಸೇವೆಯನ್ನು ನೆನಪಿಸುವ ಸಲುವಾಗಿ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಸಂಪಾದಕತ್ವದಲ್ಲಿ ಸರ್ವೋದಯ ಸಂಪುಟ, ನಾಡು–ನುಡಿ ಸಂಪುಟ, ಮತ್ತು ರಾಮಾವತಾರ ಸಂಪುಟ ಎಂಬ ಬೃಹತ್ ಸಂಪುಟಗಳನ್ನು ಬಿಡುಗಡೆ ಮಾಡಲಾಯಿತು.

ಲೇಖನ ಕೃಪೆ : ಕನ್ನಡ ಸಂಪದ

■



ಗಾಂಧಿ ಚಿಂತನೆ 02

– ಜಗದೀಶ್ ಕೊಪ್ಪ

ಮನುಷ್ಯ ಕೇಂದ್ರಿತ ಆಲೋಚನೆಗಳಲ್ಲಿ ಸದಾ ನಿರತರಾಗುತ್ತಿದ್ದ ಮಹಾತ್ಮ ಗಾಂಧೀಜಿಯವರು ತಮ್ಮ ಅನುಭವಗಳನ್ನು ಹಾಗೂ ಚಿಂತನೆಗಳನ್ನು ಬರಹ ಹಾಗೂ ಭಾಷಣಗಳ ಮೂಲಕ ನಮ್ಮ ಮುಂದಿರಿಸಿ ಹೋಗಿದ್ದಾರೆ. ಅವರ ಎಲ್ಲಾ ಚಿಂತನೆಗಳು ಇಂದಿಗೂ ಸಹ ಭಾರತೀಯರು ಮಾತ್ರವಲ್ಲದೆ ಇಡೀ ಜಗತ್ತಿಗೆ ಭರವಸೆಯ ಬೆಳಕುಗಳಾಗಿವೆ.

ನಾಗರೀಕತೆ ಮತ್ತು ಸಂಸ್ಕೃತಿ ಈ ಎರಡೂ ಬೇರೆ ಬೇರೆ ಶಬ್ದಗಳು ನಿಜ. ಆದರೆ, ಮಾನವೀಯತೆಯ ಮೌಲ್ಯಗಳ ಆಧಾರದ ಮೇಲೆ ಕಟ್ಟಿದ ಸಾಂಸ್ಕೃತಿಕ ತಿರುಳಿಲ್ಲದ ಸಮಾಜ ಅಥವಾ ನಾಗರೀಕತೆ ಶಾಶ್ವತವಲ್ಲ. ಅದು ಇಂದೋ ಅಥವಾ ನಾಳೆಯೋ ಬಿದ್ದು ಹೋಗುವಂತಹದ್ದು. ಇದು ಗಾಂಧೀಜಿಯವರ ಅಚಲ ನಂಬಿಕೆಯಾಗಿತ್ತು.

ಮನುಷ್ಯನ ಜೀವನದ ಮುಖ್ಯ ಗುರಿಯು ಸೃಜನಶೀಲತೆ, ಪ್ರೀತಿ ಮತ್ತು ಕರುಣೆಯಿಂದ ಕೂಡಿರಬೇಕು. ಇಲ್ಲದಿದ್ದರೆ, ಭೋಗದ ಮೇಲಿನ ಮೋಹ ಮತ್ತು ಅತಿಯಾಸೆಗಳಿಂದ ಸೃಷ್ಟಿಯಾಗಿರುವ ಸ್ವಾರ್ಥಾತ್ಮಕವಾದ ಈ ಜಗತ್ತಿನಲ್ಲಿ ಮಾನವೀಯತೆಯ ಸಮಾಜ ವಿನಾಶಕ್ಕೆ ಕಾರಣವಾಗುತ್ತದೆ ಎಂದು ಅವರು ತಾವು ನಡೆಸುತ್ತಿದ್ದ ದೈನಂದಿನ ಪ್ರಾರ್ಥನಾ ಸಭೆಗಳಲ್ಲಿ ನಮ್ಮನ್ನು ಎಚ್ಚರಿಸುತ್ತಿದ್ದರು.

ನಾವು ನ್ಯಾಯಯುತವಾಗಿ ಜೀವನ ಮಾಡುವುದರ ಜೊತೆಗೆ ನಮ್ಮ ಸಹಜೀವಿಗಳ ನ್ಯಾಯಯುತ ಜೀವನಕ್ಕೆ ನಾವು ಅವಕಾಶ ಮಾಡಿಕೊಡುವುದು ನಮ್ಮಗಳ ನೈತಿಕ ಕರ್ತವ್ಯ. ಧರ್ಮ, ಜಾತಿ, ಭಾಷೆಯ ಗಡಿಗಳನ್ನು ದಾಟಿ, ನಮ್ಮ ನೆರೆಹೊರೆಯವರನ್ನು ನಮ್ಮ ಕುಟುಂಬದಂತೆ ನಾವು ಪ್ರೀತಿಸಿ ಗೌರವಿಸಬೇಕು. ಇದಕ್ಕಾಗಿ ಸತ್ಯ ಮತ್ತು ಅಹಿಂಸೆಯ ಪಥದಲ್ಲಿ ನಡೆಯುತ್ತಾ ನಾವು ಮಾನವನ ಸಹಜಗುಣವಾದ ಪ್ರೀತಿ ಮತ್ತು ಕರುಣೆಯನ್ನು ಹೊಂದಿರುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಇದು ಕೇವಲ ಗಾಂಧೀಜಿಯವರು ಹೇಳಿದ ಮಾತುಗಳಲ್ಲ, ನಮ್ಮ ದಾರ್ಶನಿಕರಾದ ಏಸು ಕ್ರಿಸ್ತ, ಗೌತಮ ಬುದ್ಧ ಹಾಗೂ ನಮ್ಮ ಬಸವಣ್ಣರಂತಹ ಮಹಾನುಭಾವರು ಈ ಜಗತ್ತಿಗೆ ನೀಡಿದ ಸಂದೇಶಗಳಾಗಿದ್ದವು.

ಮನುಷ್ಯ ಲೋಭಿಯಾದರೆ ಅಥವಾ ಸ್ವಾರ್ಥಿಯಾದರೆ, ಮಾನವನ ಊರ್ಧ್ವಮುಖಿ ವಿಕಾಸದ ಆಕಾಂಕ್ಷೆಯನ್ನು ತಣಿಸಲು ಸಾಧ್ಯವಿಲ್ಲ ಎಂದು ನಮ್ಮನ್ನು ಎಚ್ಚರಿಸುತ್ತಿದ್ದ ಮಹಾತ್ಮ, ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನದ ಗುರಿ ಮಾನವನ ಎಲ್ಲಾ ಬಗೆಯ ಅಪರಿಮಿತ ಬೇಡಿಕೆಗಳನ್ನು ತಣಿಸುವ ಪ್ರಯತ್ನಗಳಂತೆ ಕಾಣುತ್ತಿದೆ ಎಂಬ ಸಂಶಯವನ್ನು ವ್ಯಕ್ತ ಪಡಿಸಿದ್ದರು.

ಇದರಿಂದಾಗಿ ಉಳ್ಳವರ ಮತ್ತು ಇಲ್ಲದವರ ನಡುವೆ ಪೈಪೋಟಿಯ ಜಗತ್ತು ನಿರ್ಮಾಣವಾಗಿದೆ. ಭೋಗ ಜೀವನ ನಡೆಸುವವರ ಮತ್ತು ದೀನ ದಲಿತರ ಒಳಿತಿಗಾಗಿ ಶ್ರಮಿಸುವವರ ನಡುವೆ ಸಾಮಾಜಿಕ ಸಂಘರ್ಷಕ್ಕೆ ಇಂತಹ ಬೆಳವಣಿಗೆಗಳು ಕಾರಣವಾಗುತ್ತಿವೆ ಎಂಬುದು ಗಾಂಧೀಜಿಯವರ ನಿಲುವಾಗಿತ್ತು.


ಅಸಹಾಯಕರ ನೆರವಿಗೆ ಬರುವುದು ಪ್ರತಿಯೊಬ್ಬ ನಾಗರೀಕ ಪ್ರಜೆಯ ಕರ್ತವ್ಯ. ಜೊತೆಗೆ ಇದು ಈ ಜಗತ್ತಿನ ಮೇಲಿನ ಪ್ರತಿಯೊಬ್ಬ ಮನುಷ್ಯನೂ ಹೊಂದಿರಬೇಕಾಸದ ಸುಸಂಸ್ಕೃತ ಗುಣ ಎಂದು ಪ್ರತಿಪಾದಿಸುತ್ತಿದ್ದ ಗಾಂಧೀಜಿಯವರು, ಸ್ವಾರ್ಥ ಮತ್ತು ವೈಭವದ ಬದುಕಿಗಾಗಿ ಅಧಿಕಾರವನ್ನು ಹೊಂದುವ ಪ್ರವೃತ್ತಿಯನ್ನು ಮತ್ತು ಸಂಕಲೆಂಟೂ ಐಶ್ವರ್ಯವೂ ತನ್ನದಾಗಬೇಕೆಂಬ ದುರಾಸೆಯಿಂದ ಸರ್ವಸ್ವವನ್ನು ಬಾಚಿಕೊಳ್ಳುವ ಪ್ರವೃತ್ತಿಯನ್ನು ಖಂಡಿಸುತ್ತಿದ್ದರು. ಗಾಂಧೀಜಿಯವರ ದೃಷ್ಟಿಕೋನದಲ್ಲಿ ಕಷ್ಟದಲ್ಲಿರುವ ಸಹ ಜೀವಿಗಳಿಗೆ ನೆರವಾಗದ ಸಂಪತ್ತಿನ ಸಂಗ್ರಹ ಕಾರ್ಯ ಅಕ್ರಮ ಮತ್ತು ಅಪರಾಧ ಎಂದು ಹೇಳುತ್ತಿದ್ದರು.

ಮನುಷ್ಯ ತನ್ನ ಮಾನಸಿಕ ಹಾಗೂ ನೈತಿಕ ಸ್ವಭಾವವನ್ನು ಪರಿವರ್ತನೆ ಮಾಡಿಕೊಂಡಾಗ ಮಾತ್ರ ನಾವು ಈ ಜಗತ್ತಿನ ಪತನವನ್ನು ತಡೆಗಟ್ಟಿ ನಾಗರೀಕ ಸಮಾಜವನ್ನು ಸೃಷ್ಟಿಸಲು ಸಾಧ್ಯ ಎಂದು ನಂಬಿದ್ದ ಗಾಂಧೀಜಿಯವರು ತಮ್ಮ ಸಂಪಾದಕತ್ವದ ಯಂಗ್ ಇಂಡಿಯ ಪತ್ರಿಕೆಯಲ್ಲಿ ಬರೆಯುತ್ತಾ,

" ದೂರ ಮತ್ತು ಕಾಲವನ್ನು ನಾಶ ಮಾಡುವುದು, ನಮ್ಮ ಮೃಗೀಯ ಹಸಿವನ್ನು ಹೆಚ್ಚಿಸಿಕೊಳ್ಳುವುದು, ಇಂತಹ ಅಪರಿಮಿತ ಬೇಡಿಕೆಗಳನ್ನು ತಣಿಸಿಕೊಳ್ಳಲು ಭೂ ಮಂಡಲದ ಮೂಲೆ ಮೂಲೆಗೂ ವಲಸೆ ಹೋಗುವುದು ಇಂತಹ ಮನುಷ್ಯನ ಹುಚ್ಚು ಆಸೆಗಳನ್ನು ನಾನು ಮನಪೂರ್ವಕವಾಗಿ ವಿರೋಧಿಸುತ್ತೇನೆ" ಎಂದಿದ್ದರು.

ಗಾಂಧೀಜಿಯವರಿಗೆ ಮನುಷ್ಯನ ಆಧುನಿಕ ನಾಗರೀಕತೆಯ ಭೋಗದ ಜಗತ್ತಿನ ಮೇಲೆ ಎಷ್ಟೊಂದು ಅಸಹನೆ ಇತ್ತೆಂದರೆ, ಇದು ನನಗೆ ಅರ್ಥವಾಗದಿದ್ದರೂ ಸರಿಯೆ, ಅಂತಹ ದುರಾಸೆಯ ಜಗತ್ತು ಸದಾ ನನ್ನ ಪಾಲಿಗೆ ಸೈತಾನ ಅಥವಾ ದೆವ್ವ ಇದ್ದಂತೆ ಎಂದು ಬಣ್ಣಿಸುತ್ತಿದ್ದರು.

ಭೋಗ ಸಂಸ್ಕೃತಿ ಅಥವಾ ಕೊಳ್ಳುಬಾಕ ಸಂಸ್ಕೃತಿಯೆಂಬುದು ಎಂದೂ ದಣಿವರಿಯದ ಕುದುರೆಯಿದ್ದಂತೆ. ದೀಪದ ಹುಳು ಬೆಳಕಿನ ಮೋಹಕ್ಕೆ ಒಳಗಾಗಿ ಉನ್ಮಾದದಲ್ಲಿ ಬೆಂಕಿಯಲ್ಲಿ ಬಿದ್ದು ಪತನಗೊಳ್ಳುವಂತೆ ಮನುಷ್ಯ ಪತನಗೊಳ್ಳಬಾರದು, ಇದು ಮಹಾತ್ಮರ ನೈಜ ಕಾಳಜಿಯಾಗಿತ್ತು. ■



GANDHI -THE LAWYER

ಮಹಾತ್ಮ ಗಾಂಧಿ ಸ್ವಾತಂತ್ರ್ಯ ಹೋರಾಟಗಾರರಾಗಿ ಭಾರತದಲ್ಲಿ ಚಿರಪರಿಚಿತರು.ಭಾರತದ ರಾಷ್ಟ್ರಪಿತ ಎಂದೇ ಅವರನ್ನು ಗುರುತಿಸಲಾಗುತ್ತಿದೆ. ಅವರು ಅಹಿಂಸಾ ಪ್ರತಿಪಾದಕರಾಗಿ ವಿಶ್ವಖ್ಯಾತಿ ಗಳಿಸಿದರು. ಈ ಕಾರಣಕ್ಕಾಗಿಯೇ ವಿಶ್ವಸಂಸ್ಥೆ ಅವರ ಜನ್ಮದಿನ ಅಕ್ಟೋಬರ್ 2 ನ್ನು ವಿಶ್ವ ಅಹಿಂಸಾ ದಿನವನ್ನಾಗಿ ಆಚರಿಸುತ್ತಿದೆ. ಇಂಥ ಮಹಾನ್ ಚೇತನ ಮಹಾತ್ಮ ಗಾಂಧಿಯವರ ಬದುಕು ದಕ್ಷಿಣ ಆಫ್ರಿಕಾದಲ್ಲಿ ವಕೀಲರ ರೂಪದಲ್ಲಿ ಮಲ್ಲಿಗೆಯ ಮೊಗ್ಗಾಗಿ ಮೂಡಿ ಭಾರತದಲ್ಲಿ ಸೌಗಂಧಿಕಾ ಪುಷ್ಪವಾಗಿ ಅರಳಿ ಇಡೀ ಜಗತ್ತಿಗೆ ಅಹಿಂಸಾ ಸುಗಂಧವನ್ನು ಹರಡಿತು.

ಮೋಹನದಾಸ ಕರಮ ಚಂದ ಗಾಂಧಿ ಮೂಲತಃ ವಕೀಲರು. ಆದರೆ ತಮ್ಮ ಸತ್ಯನಿಷ್ಠ ನಿಲುವು ಹಾಗೂ ಸಂಕೋಚದ ಕಾರಣದಿಂದಾಗಿ ಭಾರತದಲ್ಲಿ ಅವರು ವಕೀಲರಾಗಿ ಯಶಸ್ವಿಯಾಗಲಿಲ್ಲ. ಅವರು ನಂತರ ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯ ಮೂಲದ ಅಬ್ದುಲ್ಲಾ ಅವರ ಕಂಪನಿಗೆ ವಕೀಲಿ ಸೇವೆ ನೀಡಲು ತೆರಳುತ್ತಾರೆ. ಆ ನಂತರ ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ನಡೆಸಿದ ಹೋರಾಟ ಈಗ ಇತಿಹಾಸ.


ಗಾಂಧೀಜಿ ವಕೀಲ ವೃತ್ತಿಗೆ ಹೇಗೆ ಇಳಿದರು, ಗಾಂಧಿಯವರ ವಕೀಲಿ ವೃತ್ತಿ ಬದುಕಿನ ವಿವಿಧ ಮಜಲುಗಳು, ವಕೀಲಿ ವೃತ್ತಿ ಅವರನ್ನು ಹೇಗೆ ರೂಪಿಸಿತು, ದಕ್ಷಿಣ ಆಫ್ರಿಕಾದಲ್ಲಿ ಗಾಂಧಿಯವರ ಸತ್ಯಾಗ್ರಹ ಪರಿಕಲ್ಪನೆ ಹೇಗೆ ಅವತರಿಸಿತು, ಹಿಂದ್ ಸ್ವರಾಜ್ ಕೃತಿಯಲ್ಲಿ ಗಾಂಧಿಯವರ ಕಾನೂನಿನ ನೋಟ , ಅವರ ಅಂತಿಮ ಕೋರ್ಟ್ ಕೇಸ್ (1910) ಇತ್ಯಾದಿ ವಿವರಗಳನ್ನು ಒಳಗೊಂಡ ' GANDHI - THE LAWYER ' ಎನ್ನುವ ಪುಸ್ತಕವನ್ನು ನವದೆಹಲಿಯಲ್ಲಿರುವ ರಾಷ್ಟ್ರೀಯ ಗಾಂಧಿ ಮ್ಯೂಸಿಯಂ ಪ್ರಕಟಿಸಿದೆ. ಈ ಮ್ಯೂಸಿಯಂನ ನಿರ್ದೇಶಕರಾದ ಎ . ಅಣ್ಣಾಮಲೈ ಅವರು ಈ ಕೃತಿಯನ್ನು ರಚಿಸಿದ್ದಾರೆ. 2023 ರ ಜೂನ್ ತಿಂಗಳಿನಲ್ಲಿ ಈ ಕೃತಿ ದಕ್ಷಿಣ ಆಫ್ರಿಕಾದಲ್ಲಿ ಬಿಡುಗಡೆಯಾಯಿತು . ನಂತರದಲ್ಲಿ ಈ ಕೃತಿಯನ್ನು ಭಾರತದಲ್ಲಿ ದೆಹಲಿ , ಚೆನ್ನೈ ಮತ್ತು ಬೆಂಗಳೂರಿನಲ್ಲಿ ಕೂಡಾ ಬಿಡುಗಡೆ ಮಾಡಲಾಗಿದೆ.

ಈ ಕೃತಿಗೆ ಅಮೇರಿಕಾದ ವಿದ್ವಾಂಸ ಚಾರ್ಲ್ಸ್ ಆರ್ ಡಿಸಾಲ್ವೊ ಅವರು ಮುನ್ನುಡಿ ಬರೆದಿದ್ದಾರೆ. " ಅಹಿಂಸಾ ಅಸಹಕಾರ ಚಳವಳಿಯನ್ನು ಜಗತ್ತಿಗೆ ಪರಿಚಯಿಸಿದ ಮೋಹನದಾಸ ಕರಮಚಂದ ಗಾಂಧಿ ಇಪ್ಪತ್ತನೇ ಶತಮಾನದಲ್ಲಿ ಚಳವಳಿಕಾರರಾಗಿ ಸಾರ್ವಜನಿಕ ರಂಗಕ್ಕೆ ಪ್ರವೇಶ ಮಾಡಲಿಲ್ಲ ; 19ನೇ ಶತಮಾನದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವಕೀಲರಾಗಿ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದರು . ಅವರು ವಕೀಲಿ ವೃತ್ತಿಯ ಮೂಲಕ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ಕಪ್ಪು ಜನರನ್ನು ಸಂಘಟಿಸಿ ಯಶಸ್ವಿಯಾದರು . ನಂತರ ಬ್ರಿಟಿಷರ ಸಾಮ್ರಾಜ್ಯದ ವಿರುದ್ಧ 20 ನೇ ಶತಮಾನದಲ್ಲಿ ಭಾರತದಲ್ಲಿ ಹೋರಾಟದ ನೇತೃತ್ವ ವಹಿಸಿ ಕೊಂಡು ಸ್ವಾತಂತ್ರ್ಯ ದೊರಕಿಸಿ ಕೊಟ್ಟರು .ಇದಕ್ಕಿಂತ ಮಿಗಿಲಾಗಿ ಅವರು 21 ನೇ ಶತಮಾನದಲ್ಲಿ ಕೂಡಾ ಜಗತ್ತಿನಲ್ಲಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಸ್ಫೂರ್ತಿ ಹಾಗೂ ಚೈತನ್ಯವಾಗಿದ್ದಾರೆ ' ಎಂದು ಗಾಂಧಿಯವರ ಮೂರು ಶತಮಾನಗಳಲ್ಲಿ ಅವರ ಪ್ರಭಾವವನ್ನು ಚಾರ್ಲ್ಸ್ ಡಿಸಾಲ್ವೋ ಗುರುತಿಸಿದ್ದಾರೆ.

ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ 19 ನೇ ಶತಮಾನದಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದಾಗ ರೂಪುಗೊಂಡ ಸತ್ಯಾಗ್ರಹ ಪರಿಕಲ್ಪನೆ ಅಲ್ಲಿನ ಕಪ್ಪು ಜನರಿಗೆ ವರ್ಣಬೇಧ ನೀತಿಯಿಂದ ಬಿಡುಗಡೆಗೊಳಿಸಿತು . 20ನೇ ಶತಮಾನದಲ್ಲಿ ಭಾರತಕ್ಕೆ ಬ್ರಿಟಿಷರಿಂದ ಬಿಡುಗಡೆಗೊಳಿಸಿ ಸ್ವಾತಂತ್ರ್ಯ ದೊರಕಿಸಿ ಕೊಟ್ಟಿತು. 21ನೇ ಶತಮಾನದಲ್ಲಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಜಗತ್ತಿನಾದ್ಯಂತ ಹೋರಾಡುತ್ತಿರುವ ಎಲ್ಲ ಚಳವಳಿಗಳಿಗೆ ಅಹಿಂಸಾ ಸ್ವರೂಪದ ಹೋರಾಟ ಮಾರ್ಗವನ್ನು ತೋರಿಸಿಕೊಟ್ಟಿದೆ.

ನವದೆಹಲಿಯ ರಾಷ್ಟ್ರೀಯ ಗಾಂಧಿ ಮ್ಯೂಸಿಯಂನಲ್ಲಿರುವ ಮೂಲ ಪತ್ರಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು ಇತ್ಯಾದಿ ಅಮೂಲ್ಯ ಆಕರಗಳನ್ನು ಅಧ್ಯಯನ ಮಾಡಿ ಮತ್ತು ಅವುಗಳನ್ನು ಬಳಸಿಕೊಂಡು 'Gandhi - The lawyer' ಕೃತಿಯನ್ನು ರಚಿಸಲಾಗಿದೆ. ಈ ಕೃತಿಯ ಮೊದಲ ಆವೃತ್ತಿಯನ್ನು ಕೊಡುಗೆ ರೂಪದಲ್ಲಿ 1000 ರೂಗಳನ್ನು ಕೊಟ್ಟು ಖರೀದಿ ಮಾಡುವ ಅವಕಾಶ ಕಲ್ಪಿಸಲಾಗಿದೆ. ಇದರಿಂದ ದೊರಕುವ ಹಣವನ್ನು ಯುವಜನರಿಗೆ ಗಾಂಧಿ ಪರಿಚಯಿಸುವ ಕಾರ್ಯಗಳಿಗಾಗಿ ವಿನಿಯೋಗಿಸುವ ಉದ್ದೇಶವನ್ನು ಹೊಂದಲಾಗಿದೆ. ಮಧುರೈ ನಗರದಲ್ಲಿರುವ ಗಾಂಧಿ ಮ್ಯೂಸಿಯಂ ಈ ಕೃತಿಯ ಪ್ರಕಟಣೆಗೆ ಆರ್ಥಿಕ ನೆರವು ನೀಡಿದೆ.

■



ಅಸ್ಪೃಶ್ಯತಾ ನಿವಾರಣೆ

ಗಾಂಧೀ ವಿಚಾರ

• ಡಾ.ಎಸ್.ಬಿ. ಬಸೆಟ್ಟಿ

ಅಸ್ಪೃಶ್ಯತಾ ನಿವಾರಣೆಯನ್ನು ಕೇವಲ ರಾಜಕೀಯ ಅಗತ್ಯವೆಂದು ಭಾವಿಸಬಾರದು. ಈ ವ್ಯವಸ್ಥೆಗಂಟಿದ ಸಾಮಾಜಿಕ–ಆರ್ಥಿಕ ಸಮಸ್ಯೆಗಳನ್ನು ನಿವಾರಿಸಬೇಕು. ಹರಿಜನರು ಮತ್ತು ಹರಿಜನರಲ್ಲದವರ ನಡುವಿನ ವಿಬೇದಿಯ ರೇಖೆಯನ್ನು ಅಳಿಸಬೇಕು. ಗುಡಿಕೈಗಾರಿಕೆಗಳಿಂದ ಹರಿಜನರಿಗೆ ಆರ್ಥಿಕ ಸ್ವಾತಂತ್ರ್ಯ ಕಲ್ಪಿಸಿಸಬೇಕು.

ಅಸ್ಪೃಶ್ಯತೆಯನ್ನು ಹಿಂದೂ ಧರ್ಮಕ್ಕೆ ಹತ್ತಿದ ಅಭಿಶಾಪವೆಂದು ಕರೆದಿರುವ ಗಾಂಧೀಜಿಯವರು ಅದನ್ನು ತೊಡೆದು ಹಾಕುವುದು ಸರ್ವೋದಯ ಸಮಾಜದ ಆದ್ಯ ಕರ್ತವ್ಯವೆಂದಿದ್ದರು. ಎಲ್ಲಾ ಬಗೆಯ ತುಳಿತಕ್ಕೆ ಹಾಗೂ ಶೋಷಣೆಗೆ ಒಳಗಾಗಿದ್ದ ತಥಾಕಥಿತ ಅಸ್ಪೃಶ್ಯರನ್ನು ಅವರು "ದೇವರ ಮಕ್ಕಳು" ಎಂಬ ಅರ್ಥದಲ್ಲಿ "ಹರಿಜನ"ರೆಂದು ಕರೆದರು. "ಹರಿಜನ" ಎಂಬ ಪದಕ್ಕೆ ಗಾಂಧೀಜಿಯವರು ನೀಡಿದ ಭಾರೀ ಪ್ರಚಾರ ಪ್ರಸಿದ್ಧಿಯಿಂದಾಗಿ ಆ ಪದವನ್ನು ಅವರೇ ಮೊದಲ ಬಾರಿಗೆ ಪರಿಚಯಿಸಿದರು ಎಂಬ ನಂಬಿಕೆ ಹೆಚ್ಚಿನ ಕಡೆಗಳಲ್ಲಿದೆ. ಆದರೆ ಸ್ವತಃ ಗಾಂಧೀಜಿಯವರೇ ದಿ: 06.08.1931ರ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ತಾವು ಗುಜರಾತಿನ ನರಸಿನ್ಹ ಮೆಹತಾ ಎಂಬ ನಗರ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಪ್ರಸಿದ್ಧ ಸನ್ಯಾಸಿಯೋರ್ವನಿಂದ ಆಗಲೇ ಪರಿಚಯಿಸಲ್ಪಟ್ಟಿದ್ದ "ಹರಿಜನ" ಎಂಬ ಪದವನ್ನು ಸ್ವೀಕರಿಸಿ ಬಳಸುತ್ತಿದ್ದೇನೆ ಎಂಬುದಾಗಿ ತಿಳಿಸಿರುತ್ತಾರೆ.

ಗಾಂಧೀಜಿಯವರು ದೇಶದಲ್ಲಿ ಆಚರಣೆಯಲ್ಲಿದ ಅಸ್ಪೃಶ್ಯತೆಯ ವಿರುದ್ಧ ಹೋರಾಟ ಆರಂಭಿಸಿದರು. ಅಸ್ಪೃಶ್ಯರಿಗೆ ಹರಿಜನ ಎಂಬ ಪದ ಬಳಸಿದ್ದರು. ಅದರರ್ಥ ಹರಿಯ ಮಕ್ಕಳು ಅಥವಾ ಭಗವಂತನ ಮಕ್ಕಳು. ಗಾಂಧೀಜಿ ಪ್ರಕಾರ ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗಾಗಿದ್ದು ಇದು ಹಿಂದೂ ಸಮಾಜಕ್ಕೆ ಒಂದು ಕಪ್ಪು ಚುಕ್ಕೆಯಿದ್ದಂತೆ. ಸಾಮಾಜಿಕ ಬದಲಾವಣೆಗೆ ಈ ಪದ್ಧತಿಯು ಅತ್ಯಂತ ತೊಡಕಾಗುವುದು.

ಗಾಂಧೀಜಿಯವರು ಈ ಅಸ್ಪೃಶ್ಯತೆಯ ನಿರ್ಮೂಲನೆಗೆ ಎರಡು ಪ್ರಮುಖ ಯೋಜನೆಗಳನ್ನು ರೂಪಿಸಿದರು. ಅವುಗಳೆಂದರೆ, ಕ್ರಾಂತಿಕಾರ ಮತ್ತೊಂದು ಪ್ರತಿಭಟನಾತ್ಮಕವಾದುದು, ಉಪವಾಸ ನಡೆಸುವುದು, ದೇಶಾದ್ಯಂತ ಪ್ರವಾಸ ಕೈಗೊಳ್ಳುವುದು, ಹರಿಜನಸೇವಕ ಸಂಘಗಳನ್ನು ಸ್ಥಾಪಿಸುವುದು, ಪತ್ರಿಕೆ ಮತ್ತು ಲೇಖನಗಳ ಮೂಲಕ ಜನಜಾಗೃತಿ ಮೂಡಿಸುವುದು ಇತ್ಯಾದಿಗಳ ಮೂಲಕ ಅಸ್ಪೃಶ್ಯತೆ ನಿರ್ಮೂಲನೆಗೆ ಹೋರಾಟ ನಡೆಸಿದರು.

ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ರಚನಾತ್ಮಕ ಕಾರ್ಯದಲ್ಲಿ ಗಾಂಧೀಜಿಯವರು ಈ ರೀತಿ ಹೇಳಿದ್ದಾರೆ, "ಅಸ್ಪೃಶ್ಯತೆಯು ಹಿಂದೂ ಧರ್ಮದಲ್ಲಿ ಕಳಂಕವು ಈ ವಿಷಯದಲ್ಲಿ ಕಾಂಗ್ರೆಸ್ಸು ಬಹಳ ಕೆಲಸ ಮಾಡಿರುವುದು ನಿಜವಾದದ್ದು. ಆದರೆ ಒಂದು ಸಂಗತಿಯ ವಿಷಯವಾಗಿ ನನಗೆ ಖೇದವೆನಿಸಿದೆ. ಅದೆಂದರೆ ಕಾಂಗ್ರೆಸ್ಸಿನ ಅನೇಕ ಜನರು ಇದು ಒಂದು ರಾಜಕೀಯ ಅವಶ್ಯಕತೆಯೆಂದು ತಿಳಿದುಕೊಂಡಿರುವರೇ ಹೊರತು ಹಿಂದೂ ಧರ್ಮದ ಅಸ್ತಿತ್ವಕ್ಕೆ ಇದು ಹಾನಿಕಾರಕವೆಂಬುದನ್ನು ಅರಿತಿಲ್ಲ. ಕಾಂಗ್ರೆಸ್ಸಿನ ಹಿಂದೂ ಜನರು ಈ ಕಾರ್ಯವನ್ನು ಕೈಗೊಂಡರೆ, ಸನಾತನ ಜನರೂ ಕೂಡ ಉದ್ಧಟತನದಿಂದ ವರ್ತಿಸದೇ ಪ್ರೇಮ ಹಾಗೂ ಅಹಿಂಸೆಯ ಮನೋವೃತ್ತಿಯಿಂದ ನಡೆದುಕೊಂಡು ಕ್ರೂರ ಪದ್ಧತಿಯಾದ ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತೊಗೆಯಬೇಕು. ಹಿಂದೂಸ್ತಾನದಲ್ಲಿಯ ಅಸ್ಪೃಶ್ಯರ ದುಃಸ್ಥಿತಿಗೆ ಸರಿಸಮಾನವಾದ ದಾರುಣ ಪರಿಸ್ಥಿತಿಯು ಜಗತ್ತಿನ ಯಾವ ದೇಶದಲ್ಲಿಯೂ ಇಲ್ಲ. ಅಸ್ಪೃಶ್ಯರ ಉದ್ಧಾರವು ಬಹುಕಠಿಣವಾದ ಕಾರ್ಯವೆಂಬುದು ನನಗೆ ಅನುಭವದಿಂದ ಗೊತ್ತಾಗಿದೆ. ಆದರೆ ಇದು ಸ್ವರಾಜ್ಯ ಸಂಪಾದನೆಯ ಒಂದು ಮೆಟ್ಟಿಲು. ಅಸ್ಪೃಶ್ಯತೆ ತೊಲಗದೇ ಪೂರ್ಣ ಸ್ವರಾಜ್ಯಕ್ಕೆ

ಅರ್ಥವಿಲ್ಲ. ಸ್ವರಾಜ್ಯದ ಹಾದಿಯು ಇಕ್ಕಟ್ಟಾದದ್ದು ಇರುವುದು. ಅಲ್ಲಿ ಅನೇಕ ಜಾರಿಕೆಗಳಿದ್ದು ಆಳವಾದ ತಗ್ಗುಗಳೂ ಇವೆ. ಅವನ್ನೆಲ್ಲ ಸಾವರಿಸಿಕೊಂಡು ನಿಧಾನವಾಗಿ ದೃಢವಾದ ಹೆಜ್ಜೆಯಿಡುತ್ತ ನಾವು ಬೀಳದಂತೆ ಎಚ್ಚರದಿಂದ ತುದಿಗೇರಬೇಕು. ಆಗ ನಮಗೆ ಸ್ವರಾಜ್ಯದ ಶುದ್ಧವಾದ ಹವೆಯು ದೊರಕುವುದು. ಅದರಂತೆ ಅಸ್ಪೃಶ್ಯತೆ ನಿವಾರಣೆ ಅಥವಾ ನಿರ್ಮೂಲನವಾಗದೆ ಸ್ವರಾಜ್ಯ ಸಾಧ್ಯವಿಲ್ಲ."

ಮಹಾತ್ಮ ಗಾಂಧೀಜಿ 1934 ರಲ್ಲಿ ಹರಿಜನರ ಏಳ್ಗೆಗಾಗಿ ನಿಧಿ ಸಂಗ್ರಹಿಸಲು ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುತ್ತಾ ಕೊಡಗು ನಾಡಿಗೆ ಪ್ರವೇಶಿಸಿದರು. ಅಂದು ಮಧ್ಯಾಹ್ನ ಅವರು ಪ್ರಥಮವಾಗಿ ಭೇಟಿ ನೀಡಿದ ಸ್ಥಳ ಕೈಕೇರಿಯ ಹರಿಜನ ಕೇರಿ. ಗಾಂಧೀಜಿ ಬರುತ್ತಾರೆಂದು ನೆರೆದಿದ್ದ ಸುಮಾರು ಹತ್ತು ಸಾವಿರದಷ್ಟು ಹರಿಜನರಲ್ಲಿ ಮಹಿಳೆಯರೂ ಸೇರಿದ್ದರು. "ನನ್ನ ಈ ಹರಿಜನ ಪ್ರವಾಸದಲ್ಲಿ ಇಷ್ಟು ಶುಚಿಯಾಗಿಟ್ಟುಕೊಂಡಿರುವಂತಹ ಹರಿಜನ ಕೇರಿಯನ್ನು ಎಲ್ಲಿಯೂ ನೋಡಲೇ ಇಲ್ಲ!" ಎಂದು ನೆರೆದಿದ್ದ ಜನರಿಗೆ ಬಾಪೂಜಿ ತಿಳಿಸಿದರು. ಅವರಿಂದ ಹರಿಜನ ನಿಧಿಯನ್ನು ಸಂಗ್ರಹಿಸಿದರು. ಮಹಿಳೆಯರು ಧಾರಾಳವಾಗಿ ಒಡವೆಗಳನ್ನು ಹರಿಜನರ ಕಾರ್ಯಕ್ಕಾಗಿ ಬಿಚ್ಚಿಕೊಟ್ಟರು.

ಕೈಕೇರಿಯಿಂದ ಪೊನ್ನಂ ಪೇಟೆಗೆ ಆಗಮಿಸಿದ ಗಾಂಧೀಜಿ ಅಲ್ಲಿಂದ ಐದು ಮೈಲಿ ದೂರದಲ್ಲಿದ್ದ ಹರಿಜನ ಕೇರಿಗೆ ಹೋಗಿ 75 ರೂಪಾಯಿಗಳ ನಿಧಿಯನ್ನು ಸ್ವೀಕರಿಸಿ ಸಂಜೆ ಪೊನ್ನಂ ಪೇಟೆಗೆ ಹಿಂದಿರುಗಿ ಬಂದರು. ಪೊನ್ನಂ ಪೇಟೆಯ ಜನರನ್ನುದ್ದೇಶಿಸಿ ಗಾಂಧೀಜಿ "ಈ ಸುಂದರವಾದ ದೇಶವನ್ನು ಅಸ್ಪೃಶ್ಯವೆಂಬ ಕೆಟ್ಟ ಬಾಳ್ವೆಯಿಂದ ಕುರೂಪಿಯನ್ನಾಗಿ ಮಾಡಬೇಡಿ" ಎಂದರು.

ಲಿಂಗತಾರತಮ್ಯ ನಿವಾರಣೆ :

ಗುಂಡುಕುಟ್ಟಿಯಲ್ಲಿ ಗಾಂಧೀಜಿ ಇಳಿದುಕೊಂಡಿದ್ದ ಮಂಜುನಾಥಯ್ಯನವರ ಮನೆಯ ಸ್ವಲ್ಪ ದೂರದಲ್ಲಿಯೇ ಕೊಡಗಿನ ಗೌರಮ್ಮನವರ ಮನೆ. ಆಕೆಗೆ ಆಗ ಕೇವಲ 21 ವರ್ಷ, ಮದುವೆಯೂ ಆಗಿತ್ತು. ಟೆನಿಸ್ ಮತ್ತು ಈಜುಗಾರ್ತಿ ಹಾಗೂ ಸಣ್ಣಕತೆಗಳ ಪ್ರಥಮ ಕಥೆಗಾರ್ತಿ ಗೌರಮ್ಮನಿಗೆ ಗಾಂಧೀಜಿಯನ್ನು ತಮ್ಮ ಮನೆಗೆ ಕರೆತರಬೇಕೆಂದು ಆಸೆಯಾಗಿತ್ತು. ಆ ಊರಿನ ಸ್ವಾಗತ ಸಮಿತಿಯವರು ಅದಕ್ಕೆ ಗಮನ ಕೊಡಲಿಲ್ಲ. ಆಕೆಗೆ ತುಂಬ ನೋವಾಯಿತು. ಬೆಳಗಿನಿಂದ ಉಪವಾಸವಿದ್ದ ಆಕೆ ಗಾಂಧೀಜಿ ಇದ್ದಲ್ಲಿಗೇ ಬಂದು ಅಳತೊಡಗಿದಳು. ಬೆಳಗಿನಿಂದ ಆಕೆ ಉಪವಾಸವಿದ್ದದ್ದು ಬೇರೆಯವರ ಮೂಲಕ ತಿಳಿದುಕೊಂಡಿದ್ದ ಗಾಂಧೀಜಿ "ಉಪವಾಸ ಏಕಮ್ಮ ತಾಯಿ" ಎಂದರು. "ನೀವು ನಮ್ಮ ಮನೆಗೆ ಬರಲಿಲ್ಲ; ನಿಮಗಾಗಿ ಕೆಲವು ಒಡವೆ ತೆಗೆದಿಟ್ಟಿದ್ದೇವೆ" ಎಂದಳು, ಗಾಂಧೀಜಿ "ಮೊದಲು ನೀನು ಉಪವಾಸ ನಿಲ್ಲಿಸಬೇಕು." "ನೀವು ನಮ್ಮ ಮನೆಗೆ ಬರುತ್ತೇನೆಂದು ಮಾತು ಕೊಟ್ಟರೆ ನಿಲ್ಲಿಸುತ್ತೇನೆ" ಎಂದಳು. ಇದನ್ನೆಲ್ಲಾ ಗಮನಿಸುತ್ತಿದ್ದ ಮೀರಾಬೆನ್ ಹಣ್ಣು ಸುಲಿದು ಗೌರಮ್ಮನಿಗೆ ಕೊಟ್ಟಳು. ಗಾಂಧೀಜಿ ಒಂದು ಕರಾರು ಹಾಕಿದರು, "ನೀನು ನನಗೆ ಆಭರಣ ಕೊಟ್ಟ ನಂತರ ಪುನಃ ಯಾವ ಒಡವೆಯನ್ನು ಧರಿಸಬಾರದು." ಅದಕ್ಕೆ ಗೌರಮ್ಮ ಒಪ್ಪಿದಳು. ಆಕೆಯ ಗಂಡ ಗೋಪಾಲಕೃಷ್ಣಯ್ಯನು ಜೊತೆಯಲ್ಲಿದ್ದ್ರು. ಗಾಂಧೀಜಿ ಆತನನ್ನು ಕುರಿತು "ಒಡವೆ ನನಗೆ ಕೊಡಬೇಕೆಂದು ಈಕೆಗೆ ಯಾರು ಹೇಳಿದರು?" "ಯಾರೂ ಇಲ್ಲ, ಆಕೆಯದೇ ಒಡವೆ; ಆಕೆಯ ಇಚ್ಛೆ! ನನ್ನ ಒಪ್ಪಿಗೆಯೂ ಇದೆ" ಎಂದರು. ಕೊನೆಗೆ ಗಾಂಧೀಜಿ ಅವರ ಮನೆಗೆ ಹೋದರು. ಮಾಂಗಲ್ಯ, ಮೂಗುಬೊಟ್ಟು, ಕಿವಿಯೋಲೆ ಬಿಟ್ಟು ಉಳಿದ ಎಲ್ಲಾ ಆಭರಣಗಳನ್ನು ಗೌರಮ್ಮ ಗಾಂಧೀಜಿಗೆ ಸಮರ್ಪಿಸಿ "ಇನ್ನೂ ಮುಂದೆ ಸೌಭಾಗ್ಯದ ಸಂಕೇತವಾದ ಕರಿಮಣಿ, ಕಿವಿಯ ಬೆಂಡೋಲೆ, ಮೂಗುಬೊಟ್ಟು ಬಿಟ್ಟು ಬೇರೆ ಯಾವುದೇ ಒಡವೇ ಧರಿಸುವುದಿಲ್ಲ" ಎಂದು ಪ್ರತಿಜ್ಞೆ ಮಾಡಿದಳು. "ಸರಳವಾದ ಮಿತ ಜೀವನ ಎಂದಿಗೂ ಒಳ್ಳೆಯದು" ಎಂದು ಗಾಂಧೀಜಿ ಗೌರಮ್ಮನ ಮನೆಯಿಂದ ತುಂಬು ಹೃದಯದಿಂದ ಹೊರಬಂದರು. (ಇಂತಹ ಗೌರಮ್ಮ ಕೇವಲ 27 ವಯಸ್ಸಿನಲ್ಲಿ ಅಂದರೆ 13ನೇ ಏಪ್ರಿಲ್ 1939ರಂದು ಆರು ವರ್ಷದ ಪುತ್ರ ವಸಂತನನ್ನು ಅಗಲಿ ಹಾರಂಗಿ ಹೊಳೆಯಲ್ಲಿ ಈಜಲು ಹೋದಾಗ ಆಕಸ್ಮಿಕವಾಗಿ ಮುಳುಗಿ ದುರಂತ ಸಾವಿಗೀಡಾದರು.) ತರುವಾಯ ಗಾಂಧೀಜಿ ಗುಂಡುಕುಟ್ಟಿಯಿಂದ ಶೊಂಟಿಕೊಪ್ಪದ ಮಾರ್ಗವಾಗಿ ಮಡಿಕೇರಿಗೆ ಹೊರಟರು.

ಸಂಜೆ ಮಡಿಕೇರಿಯಲ್ಲಿ ಸಭೆ. ಹದಿನೈದು ಸಾವಿರಕ್ಕೂ ಹೆಚ್ಚು ಜನ ರಾಜಪೀಠದ ಬಳಿಯ ಮೈದಾನದಲ್ಲಿ ನೆರೆದಿದ್ದ್ರು. ಗಾಂಧೀಜಿಯವರಿಗೆ ಅರ್ಪಿಸಿದ ಮನಪತ್ರದಲ್ಲಿ ಕೊಡಗಿನ ಹರಿಜನರ ವಿಷಯ ಎಲ್ಲವೂ ಸೂಚಿಸಿತ್ತು. ಅಲ್ಲದೆ 750 ರೂಪಾಯಿಗಳ ಒಂದು ನಿಧಿಯೂ ಅರ್ಪಿಸಲ್ಪಟ್ಟಿತು. ಗಾಂಧೀಜಿ ಸಾರ್ವಜನಿಕ ಭಾಷಣ ಮಾಡುತ್ತಾ "ಬಹುಶಃ ನಿಮ್ಮನ್ನು ನೋಡುವುದು ಇದು ಮೊದಲನೆಯ ಸಲ. ಇದು ಕಡೆಯ ಸಲವೂ ಆಗಬಹುದು. ಇಲ್ಲಿಗೆ ಬರುವ ಮೊದಲು ಈ ಪ್ರದೇಶದ ನಿಸರ್ಗ ಸೌಂದರ್ಯವನ್ನು ಕುರಿತು ನಾನು ಎಷ್ಟೋ ಊಹಿಸಿದ್ದೆ. ಅದೆಲ್ಲವೂ ಇಂದು ಸಾರ್ಥಕವಾಯಿತು. ನಿಮ್ಮ ಪ್ರಾಂತಕ್ಕೆ ನಾನು ಕೊಟ್ಟ ಈ ಎರಡು ದಿನದ ಪ್ರವಾಸ ಸ್ವಲ್ಪ ಪ್ರಯಾಸ ಆಗಿದ್ದರೂ ಸಂತೋಷವಾಗಿದೆ. ನಿಮ್ಮ ಪ್ರಾಂತದಲ್ಲಿರುವ ನಿಸರ್ಗ ರಮಣೀಯತೆಯನ್ನು ಇಂದು ಸವಿಯುತ್ತಿದ್ದೇನೆ. ನಿಮ್ಮ ಹೃದಯ ಮಾಧುರ್ಯದ ಬಗ್ಗೆ ಏನೋ ಸಂದೇಹ. ನಿಮ್ಮಲ್ಲಿ ಇನ್ನೂ ಸ್ವಲ್ಪ ಅಸ್ಪೃಶ್ಯತೆ ಅಂಟಿಕೊಂಡಿದೆಯೆಂದು ಕಾಣುತ್ತದೆ. ನಿಮ್ಮ ಮಾನ ಪತ್ರದಲ್ಲಿ ಇಲ್ಲಿ ಹರಿಜನರಿಗೆ ಪ್ರವೇಶವಿಲ್ಲವೆಂದು ಹೇಳಿದ್ದೀರಿ. ಒಬ್ಬ ತಂದೆ ತನ್ನ ಮಕ್ಕಳಿಗೆ ಅನ್ನ ಬಟ್ಟೆ ಕೊಡುತ್ತೇನೆ. ಮನೆ ಕೊಡುತ್ತೇನೆ. ಆದರೆ ನನ್ನ ಹೃದಯದಲ್ಲಿ ನಿಮಗೆ ಸ್ಥಳವಿಲ್ಲವೆಂದು ಹೇಳಿದರೆ ಆ ಮಕ್ಕಳಿಗೆ ಹೇಗೆ ಅನಿಸುತ್ತದೆಯೋ ಯೋಚನೆ ಮಾಡಿ. ನಿಮ್ಮ ಹಾಗೆಯೇ ಹರಿಜನರಿಗೂ ದೇವಾಲಯ ಪ್ರವೇಶ ನೀಡದಿದ್ದರೆ ನಿಮ್ಮ ಹೃದಯ ಸುಂದರ ಎನ್ನಲಾರೆ. ಪ್ರಕೃತಿಯಿಂದ ಪಾಠ ಕಲಿತು ನಿಮ್ಮ ಹೃದಯದಿಂದ ಆ ಕಳಂಕವನ್ನು ತೊಳೆದು ಹಾಕಿ" ಮುಂತಾದಿ ಮಾತನಾಡಿದರು.

ರಾತ್ರಿ ಕೊಡಗಿನ ಹರಿಜನ ಕೆಲಸಗಾರರೊಂದಿಗೆ ಸಂಭಾಷಣೆ ನಡೆಸಿ ಹರಿಜನರ ಉದ್ಧಾರಕ್ಕಾಗಿ ನಡೆಸಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಲ್ಪಟ್ಟವು. ಕೊಡಗಿನ ಪ್ರವಾಸದಲ್ಲಿ ಒಟ್ಟು ಎರಡು ಸಾವಿರ ರೂಪಾಯಿಗಳು ಮತ್ತು ಒಂದು ಸಾವಿರ ರೂಪಾಯಿಗಳ ಬೆಲೆ ಬಾಳುವ ಒಡವೆಗಳು ದೊರಕಿತು. ಬಿಹಾರಿನಲ್ಲಿ ಸಂಭವಿಸಿದ ಭೀಕರ ಭೂಕಂಪದ ವಿಷಯ ಎಲ್ಲರಿಗೂ ತಿಳಿಸಿ ಒಡವೆಗಳನ್ನು ಹರಾಜು ಹಾಕಿದರು. ಅನಂತರ ಮೈಸೂರಿನಲ್ಲಿ ವೈದ್ಯರಾಗಿದ್ದ ದಿವಂಗತ ನಂಜಪ್ಪನವರ ಬಿಡಾರದಲ್ಲಿ ಉಳಿದುಕೊಂಡು ಮರುದಿವಸ ಅಂದರೆ 24 ರಂದು

ಮುಂಜಾನೆ ಮಡಕೇರಿಯಿಂದ ಪುತ್ತೂರು, ಬಂಟ್ವಾಳ ಮಾರ್ಗವಾಗಿ ಮಂಗಳೂರಿನತ್ತ ಪ್ರಯಾಣ ಬೆಳೆಸಿದರು. ತತ್ಪರಿಣಾಮವಾಗಿ ಮಹಾತ್ಮಾ ಗಾಂಧೀಜಿಯವರ ಈ ಪ್ರವಾಸ ಕೊಡಗು ಜಿಲ್ಲೆಯಾದ್ಯಂತ ರಾಜಕೀಯ ಜಾಗೃತಿ, ಸಾಮಾಜಿಕ ಕಳಕಳಿ ಹಾಗೂ ಸಾಂಸ್ಕೃತಿಕ ಅರಿವನ್ನು ಮೂಡಿಸುವ ಮೂಲಕ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರಕ, ವೇದಿಕೆಯನ್ನು ಒದಗಿಸಿತೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

ದೇವಸ್ಥಾನ ಪ್ರವೇಶದ ಚಳುವಳಿ :

25ನೇ ಫೆಬ್ರುವರಿ 1934ರಂದು ಗಾಂಧೀಜಿ ಉಡುಪಿಗೆ ಭೇಟಿ ಕೊಟ್ಟಿದ್ದರು. ಗಾಂಧೀಜಿ ತಮ್ಮ ಭಾಷಣದಲ್ಲಿ "ಉಡುಪಿ ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಇದೆ. ಇಲ್ಲಿನ ಬಗ್ಗೆ ಬಹಳ ಮಂದಿಯಿಂದ ಈಗಾಗಲೇ ಕೇಳಿದ್ದೇನೆ. ನಿಮ್ಮಲ್ಲಿನ ಪ್ರಸಿದ್ಧ ಕೃಷ್ಣ ದೇವಾಲಯದ ಬಗ್ಗೆ ತಿಳಿದಿದ್ದೇನೆ. ಕೆಳಜಾತಿಯವ ಎಂಬ ಕಾರಣದಿಂದ ಭಕ್ತನೋರ್ವನಿಗೆ ದೇವಾಲಯ ಪ್ರವೇಶ ನಿರಾಕರಿಸಿದ ಕಾರಣ ಇಲ್ಲಿನ ದೇವರೇ ಮಡಿವಂತ ಬ್ರಾಹ್ಮಣರಿಗೆ ಬೆನ್ನು ಹಾಕಿ ತಿರುಗಿ ಭಕ್ತನಿಗೆ ದರುಶನವನ್ನು ದಯಪಾಲಿಸಿದ ಕಥೆಯನ್ನು ಅರಿತಿದ್ದೇನೆ. ಆದುದರಿಂದ ಈ ದೇವಸ್ಥಾನಕ್ಕೆ ದಲಿತರಿಗೂ ಪ್ರವೇಶಿಸಲು ಸಾಧ್ಯವಾಗುವಂತೆ ಸೌಮ್ಯ ಮಾರ್ಗದಿಂದ ಜನಾಭಿಪ್ರಾಯವನ್ನು ರೂಪಿಸಬೇಕು. ಬಹಳ ಸೌಮ್ಯ ಮಾರ್ಗದಿಂದಲೇ ಇಂಥ ಸದಾಭಿಪ್ರಾಯವನ್ನು ರೂಪಿಸುವದು ಸಾಧ್ಯ. ಇದು ಆತ್ಮಶುದ್ಧಿಯ ಚಳುವಳಿ, ದೇವಾಲಯಗಳ ಭಕ್ತರು ಬಹುಸಂಖ್ಯೆಯಲ್ಲಿ ಈ ಅಭಿಪ್ರಾಯ ರೂಪಿಸಿ ದೇವಾಲಯ ಪ್ರವೇಶವನ್ನು ಸರ್ವರಿಗೂ ಮುಕ್ತವಾಗಿಸಬೇಕು. ನೀವೆಲ್ಲಾ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ನಿಮ್ಮ ವಾಗ್ದಾನಕ್ಕೆ ಬದ್ಧರಾಗಿದ್ದಲ್ಲಿ ಕರ್ನಾಟಕಕ್ಕೆ ಉಡುಪಿಯು ಮಾದರಿಯಾಗುವುದು" ಎಂದು ತಿಳಿಹೇಳಿದರು. ಬಳಿಕ ರಥಬೀದಿಯ ಮೂಲಕ ಹಾದು ಹೋಗುವ ಮಾರ್ಗದಲ್ಲಿ ಗಾಂಧೀಜಿ ಮೊದಲ ಬಾರಿ ಉಡುಪಿ ಕೃಷ್ಣಮಂದಿರವನ್ನು ಕಂಡು "ಇದು ಆ ಕೃಷ್ಣ ಮಂದಿರವೇ?' ಎಂದು ಕೇಳಿದಾಗ ಜತೆಗಿದ್ದ ಪುರ ಪ್ರಮುಖರು ಮೌನದಿಂದ ತಲೆಯಾಡಿಸಿದರು. ದೇವಾಲಯದ ಬಗ್ಗೆ ತಮ್ಮ ಭಾಷಣದಲ್ಲಿ ಅದಾಗಲೇ ಪ್ರಸ್ತಾಪಿಸಿದ್ದ ಗಾಂಧೀಜಿಯವರು ತಮ್ಮ ಸಂಕಲ್ಪದಂತೆ ದೇವಾಲಯ ಪ್ರವೇಶಿಸದೇ ಮುಂದಕ್ಕೆ ಹೊರಟರು.

ಗಾಂಧಿ ನೋಡಿದ ನಾಟಕಗಳು : 'ಅಸ್ಪೃಶ್ಯತಾ ನಿವಾರಣೆ'

ಸಾಹಿತ್ಯ ಮತ್ತು ಕಲೆ ಇವು ಮನುಷ್ಯನ ಬದುಕಿನ ಒಂದು ಭಾಗ. ಹಾಗೆಯೇ ರಂಗಭೂಮಿಯೂ ಸಹ. ಸಮಾಜದ ಎಲ್ಲಾ ಜನ ವರ್ಗವನ್ನು ವರ್ಣ-ವರ್ಗ ಭೇದವಿಲ್ಲದೇ ಜಾತಿಧರ್ಮಗಳ ಭೇದವಿಲ್ಲದೇ ಸಾಮಾಜಿಕ-ಆರ್ಥಿಕ ಭೇದವಿಲ್ಲದೇ, ಲಿಂಗ ತಾರತಮ್ಯವಿಲ್ಲದೇ ಪಂಡಿತ ಪಾಮರರೆಲ್ಲರನ್ನು ಸಮಸಮವಾಗಿ ಪರಿಭಾವಿಸುವ ಸಮಾಜದ ಎಲ್ಲಾ ಸ್ತರವೂ ಒಟ್ಟಿಗೆ ಕೂಡುವ ತಾಣ ಯಾವುದಾದರೂ ಇದ್ದರೆ ಅದು ರಂಗಭೂಮಿ. ರಂಗಭೂಮಿಯೆಡೆಗೆ ಆಕರ್ಷಿತನಾದವನು ನಾಟಕಗಳನ್ನು ನೋಡದವನು ಅದರಿಂದ ಪ್ರಭಾವಿತನಾಗದವನು, ರಂಜನೆ ಪಡೆಯದವನು, ಅರಿವು ಪಡೆಯದವನು ಈ ಲೋಕದೊಳಗೆ ಯಾರಿಲ್ಲ ಹೇಳಿ. ಎಲ್ಲರಂತೆ ಮೋಹನದಾಸ ಕರಮಚಂದ ಗಾಂಧಿಯೂ ಸಹ ನಾಟಕ ನೋಡಿ ಪ್ರಭಾವಿತನಾದವನೆ. ಸತ್ಯ, ಅಹಿಂಸೆ, ಶಾಂತಿ ಮಂತ್ರವನ್ನು ಭಾರತೀಯ ಮನಮನದಲ್ಲೂ ಭಿತ್ತಿ, ಭಾರತೀಯರ ಆತ್ಮ ಸಾಕ್ಷಾತ್ಕಾರಕ್ಕೆ, ಆತ್ಮಶುದ್ಧತೆಗೆ ಜ್ಯೋತಿಯಾಗುತ್ತಲೇ ಈ ಮಹಾತ್ಮನೆನಿಸಿಕೊಡ ಗಾಂಧೀಜಿಯ ಆತ್ಮೋನ್ನತಿಗೆ ಪ್ರೇರಣೆಯಾದದ್ದು 'ನಾಟಕ'. ಆತನ ಸತ್ಯ, ಪರಿಪಾಲನೆಗೆ ಬುನಾದಿ ಹಾಕಿದ್ದು 'ರಂಗಮಂಚ' ಎಂಬುದು ತಿಳಿದ ವಿಷಯ. ತಮ್ಮ ಎಳವೆಯಲ್ಲಿ ಗಾಂಧೀಜಿ ತಮ್ಮ ಹಳ್ಳಿಯಲ್ಲಿ 'ಸತ್ಯ ಹರಿಶ್ಚಂದ್ರ' ನಾಟಕ ನೋಡುತ್ತಾರೆ. ಅದು ಆ ಎಳೆಯ ವಯಸ್ಸಿನ ಮೇಲೆ ತುಂಬಾ ಪ್ರಭಾವ ಬೀರುತ್ತದೆ. ಆ ನಾಟಕದಿಂದ ಪ್ರಭಾವಿತರಾದ ಗಾಂಧಿ 'ತಾವು ಹಿಂದೆ ತಂದೆಯೊಡನೆ ಸುಳ್ಳು ಹೇಳಿದ್ದನ್ನು ನೆನಪಿಸಿಕೊಂಡು ತಂದೆಯ ಬಳಿ ಹೋಗಿ ತಪ್ಪನ್ನು ಒಪ್ಪಿಕೊಂಡು ನಡೆದ ಸತ್ಯವನ್ನು ಹೇಳಿಬಿಡುತ್ತಾರೆ. ಆ ಘಟನೆಯಿಂದ ಅವರ ಮನ ಶುದ್ಧಗೊಂಡ ಹೊಸ ಚೇತನವೊಂದು ಹರಿದಾಡಿ ಆಹ್ಲಾದ ತರುತ್ತದೆ. ಆಗ ಅವರಿಗೆ ಸತ್ಯದ ಮಹತ್ವ ಅರಿವಿಗೆ ಬರುತ್ತದೆ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿಯವರು ದೇಶದ ಉದ್ದಗಲಕ್ಕೂ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಓಡಾಡುತ್ತಾರೆ. ಅನೇಕ ಕಡೆ ತಂಗುತ್ತಾರೆ. ತಾವು ಹೋದ ಕೆಲವು ಕಡೆ ನಾಟಕಗಳನ್ನು ನೋಡುತ್ತಾರೆ. ಅದೇ ರೀತಿ ಅವರು ಕರ್ನಾಟಕಕ್ಕೂ (ಮೈಸೂರು ಪ್ರಾಂತ್ಯ)ಕ್ಕೂ 19 ಬಾರಿ ಬರುತ್ತಾರೆ. ಆ ಸಂದರ್ಭಗಳಲ್ಲಿ 3 ನಾಟಕಗಳನ್ನು ನೋಡುತ್ತಾರೆ. (ಅವರು ಭೇಟಿ ಕೊಟ್ಟ ಪ್ರದೇಶಗಳಲ್ಲಿ ಬೇರೆ ಬೇರೆ ಭಾಷೆಯ ಯಾವ ಯಾವ ನಾಟಕಗಳನ್ನು ನೋಡಿದರು ಈ ಕುರಿತು ಹೆಚ್ಚಿನ ಸಂಶೋಧನೆಯಾದರೆ ಒಳಿತಾದೀತು).


1924ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯುತ್ತದೆ. ಗಾಂಧೀಜಿಯವರೇ ಆ ಅಧಿವೇಶನದ ಅಧ್ಯಕ್ಷರಾಗಿರುತ್ತಾರೆ. ಅದು ಅಸಹಕಾರ ಚಳುವಳಿಯ ಜ್ವಾಲೆ ಎಲ್ಲೆಡೆ ಹರಡಿದ್ದ ಕಾಲ. ಆ ಸಂದರ್ಭದಲ್ಲಿ ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು (ಸ್ವಾಮಿ) ರಚಿಸಿದ ಶಿವಲಿಂಗೇಶ್ವರ ನಾಟ್ಯ ಸಂಘ ಪ್ರದರ್ಶಿಸಿದ 'ಅಸ್ಪೃಶ್ಯತಾ ನಿವಾರಣೆ' ನಾಟಕವನ್ನು ಗಾಂಧೀಜಿಯವರು ನೋಡುತ್ತಾರೆ. ಈ ನಾಟಕದಲ್ಲಿ ಶಾಸ್ತ್ರಿಗಳು ಗಾಂಧೀಜಿಯನ್ನು ಹರಿಜನರೋದ್ಧಾರಕ, ಸಮಸಮಾಜದ ಹರಿಕಾರ, ಒಂಬತ್ತು ನೂರು ವರ್ಷಗಳ ಹಿರಿಮೆ, ಜಾತಿಯ ಉದ್ಧಾರದ ಕನಸು ಕಂಡ 'ಬಸವನ ಆಧುನಿಕ ಅವತಾರಿ'ಯಂತೆ ಚಿತ್ರಿಸುತ್ತಾರೆ. 1924ರ ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಶಾಸ್ತ್ರಿಗಳ 'ಪವಿತ್ರಖಾದಿ' ನಾಟಕವು ಪ್ರದರ್ಶಿಸಲ್ಪಟ್ಟಿತ್ತು.

ಗರೂಡ ಸದಾಶಿವರಾಯರು ತಮ್ಮ ನಾಟಕಗಳಲ್ಲಿ ವಿಧವಾ ಪುನರ್ವಿವಾಹ, ಅಸ್ಪೃಶ್ಯತಾ ನಿವಾರಣೆ, ಸತ್ಯಾಗ್ರಹ, ಖಾದಿ ಗ್ರಾಮೋದ್ಯೋಗ, ಹರಿಜನೋದ್ಧಾರ, ಸ್ವದೇಶಿ ಚಳವಳಿ, ಅಹಿಂಸಾ ಚಳುವಳಿ ಇವುಗಳನ್ನು ತಮ್ಮ ಸತ್ಯ ಸಂಕಲ್ಪ(1930), ನಮ್ಮ ಭಾಗ್ಯೋದಯ(1936), ಭಕ್ತ ಮಾರ್ಕಂಡೇಯ (ಸತ್ಯಾಗ್ರಹ) ಇಂತಹ ನಾಟಕಗಳಲ್ಲಿ ತರುವುದಲ್ಲದೇ 'ಸತ್ಯ ಸಂಕಲ್ಪ' ನಾಟಕದಲ್ಲಿ 'ಗಾಂಧೀಜಿ'ಯವರನ್ನು ಒಂದು ಪಾತ್ರವಾಗಿ ಚಿತ್ರಿಸಿ ರಂಗದ ಮೇಲೆ ಅವರಿಗೆ ಪ್ರವೇಶ ಕೊಡುತ್ತಾರೆ.

ಕಂದಗಲ್ಲ ಹನುಮಂತರಾಯ ತಮ್ಮ 'ಅಕ್ಷಯಾಂಬರ ಖಾದಿಸೀರೆ'(1930)ಯಲ್ಲಿ ಸ್ವದೇಶಿ ಅಂದೋಲನ ಮತ್ತು ಖಾದಿ ಬಟ್ಟೆಯ ಮಹತ್ವ ಮತ್ತು ಔಚಿತ್ಯದ ಪ್ರಚಾರ ಮಾಡಲು ದ್ರೌಪದಿ ವಸ್ತ್ರಾಪಹರಣದ ಸನ್ನಿವೇಶವನ್ನು ಬಳಸಿಕೊಳ್ಳುತ್ತಾರೆ. ಕೌರವರು ಮತ್ತು ಪಾಂಡವಾದಿಗಳು ಕೂಡಿದ ದುರ್ಯೋಧನನ ರಾಜಸಭೆಯಲ್ಲಿ ದುಶ್ಯಾಸನನು ದ್ರೌಪದಿಯ ಸೀರೆಯನ್ನು

ಸೆಳೆದು ಅಪಮಾನಿಸಿದಾಗ ಕೃಷ್ಣನು ಆಕೆಯ ಮಾನರಕ್ಷಣೆಗಾಗಿ ಸೀರೆಯನ್ನು ನೀಡುತ್ತಾನೆ. ಇದು ಎಲ್ಲರಿಗೂ ತಿಳಿದ ಸಂಗತಿ. ಇದು ಅಕ್ಷಯಾಂಬರದ ಕಥೆ.

ಆದರೆ ಕಂದಗಲ್ಲರ 'ಅಕ್ಷಯಾಂಬರ'ದಲ್ಲಿ ಕೃಷ್ಣ ನೀಡುವ ಸೀರೆ 'ಖಾದಿ ಸೀರೆ'ಯಾಗಿರುತ್ತದೆ. ಹರಿಜನೋದ್ಧಾರ ಗಾಂಧೀಜಿಯವರ ಮತ್ತೊಂದು ಮುಖ್ಯ ಧ್ಯೇಯ. ಕಂದಗಲ್ಲರು ತಮ್ಮ 'ಕುರುಕ್ಷೇತ್ರ' ನಾಟಕದಲ್ಲಿ 'ಅಸ್ಪೃಶ್ಯತಾ ನಿವಾರಣೆ'ಯ ಕುರಿತಾದ ಒಂದು ಸನ್ನಿವೇಶವನ್ನು ಸೃಷ್ಟಿಸುತ್ತಾರೆ. ದಾಯಾದಿಗಳ ನಡುವೆ ನಡೆಯುವ ಯುದ್ಧವನ್ನು ತಪ್ಪಿಸುವ ಸಂಧಾನಕ್ಕಾಗಿ ಕೃಷ್ಣನು ಕೌರವರ ಹಸ್ತಿನಾವತಿಗೆ ಬರುತ್ತಾನೆ. ಇದನ್ನು ತಿಳಿದ ಕೌರವನು ಆತನನ್ನು ಯಾರೂ ಸ್ವಾಗತಿಸತಕ್ಕದಲ್ಲ ಎಂದು ಡಂಗೂರ ಸಾರಿಸುತ್ತಾನೆ. ಇದರಿಂದ ಭೀತಿಗೊಂಡ ಜನ ಮನೆಯೊಳಗೆ ಅಡಗಿ ಕುಳಿತಿರುತ್ತಾರೆ. ಆದರೆ ಊರಿನ ಅಸ್ಪೃಶ್ಯ ಜನರ ಪ್ರತಿನಿಧಿಗಳಾದ ಕಾಲಿಯಾ, ಕನಕ, ಭಂಡಾರಿ ಇನ್ನೂ ಮುಂತಾದವರು ಕೃಷ್ಣನನ್ನು ಎದುರುಗೊಂಡು ಸ್ವಾಗತಿಸುತ್ತಾರೆ. ಕೃಷ್ಣನೆದುರು ಆ ಜನ ತಮಗಾಗುತ್ತಿರುವ ಅನ್ಯಾಯ, ದೌರ್ಜನ್ಯಗಳನ್ನು ಹೇಳಿಕೊಳ್ಳುತ್ತಾರೆ. ಅವರಿಗೆ ಸಾಂತ್ವನ ಹೇಳಿದ ಕೃಷ್ಣನು ಆ ಜನರು ಪ್ರೀತಿಯಿಂದ ಕೊಟ್ಟ ಮಜ್ಜಿಗೆಯನ್ನು ಅಷ್ಟೇ ಪ್ರೀತಿಯಿಂದ ಕುಡಿಯುವುದರ ಮೂಲಕ ಅವರ ಕೀಳರಿಮೆಯನ್ನು ತೊಡೆದು ಹಾಕುತ್ತಾನೆ. ಇದಲ್ಲದೆ ಕಂದಗಲ್ಲರು ತಮ್ಮ 'ಮಾತಂಗ ಕನ್ಯೆ' ನಾಟಕದಲ್ಲಿ 'ಹರಿಜನ' ಮಹಿಳೆಯ ಮೇಲೆ ಸವರ್ಣೀಯ ಪುರುಷನೊಬ್ಬ ನಡೆಸುವ ದೌರ್ಜನ್ಯವನ್ನು ತೋರಿ ಮೇಲ್ಜಾತಿಯ ದರ್ಪ, ಕ್ರೌರ್ಯದ ಅಟ್ಟಹಾಸವನ್ನು ಬಯಲಿಗೆಳೆದು ಖಂಡಿಸುತ್ತಾರೆ. ರಚನಾತ್ಮಕ ಕೆಲಸಗಾರರು ಮೊದಲು ಅಸ್ಪೃಶ್ಯತೆಯನ್ನು ತಮ್ಮಿಂದ ಕಿತ್ತು ಒಗೆಯಬೇಕು. ಜನನ, ಕಸಬು ಇವುಗಳಿಂದ ಒಬ್ಬನು ದೊಡ್ಡವನು ಒಬ್ಬನು ಚಿಕ್ಕವನು ಎಂಬುದನ್ನು ಅವನು ಪೂರ್ಣವಾಗಿ ತಿರಸ್ಕರಿಸಬೇಕು. ■



ಶ್ರಮದ ದುಡಿಮೆ


ಗಾಂಧೀಜಿಯವರು ಆಘಾಖಾನ್ ಸೆರಮನೆಯಿಂದ ಬಿಡುಗಡೆಗೊಂಡಾಗ ಬಹಳ ನಿತ್ರಾಣರಾಗಿದ್ದರು. ವಯೋಸಹಜವಾದ ಬಳಲಿಕೆ ಅವರನ್ನು ಕಾಡುತ್ತಿತ್ತು. ಹಾಗಾಗಿ ವಿಶ್ರಾಂತಿಗೆಂದು ಜುಹು ಆಶ್ರಮಕ್ಕೆ ತೆರಳಿದರು. ಅವರನ್ನು ನೋಡಲು, ಮಾತನಾಡಲು ನಿರ್ಬಂಧ ವಿಧಿಸಲಾಗಿತ್ತು. ಕೆಲವು ಆತ್ಮೀಯರು ಮಾತ್ರವೇ ಅವರೊಂದಿಗಿದ್ದರು.

ಒಂದುದಿನ ಹತ್ತು-ಹನ್ನೆರಡು ವರ್ಷದ ಹುಡುಗನೊಬ್ಬ ಗಾಂಧೀಜಿಯವರನ್ನು ನೋಡಲೇಬೇಕೆಂದು ಅವರ ಆಶ್ರಮದ ಹೊರಗೆ ನಿಂತು ಹಠಮಾಡತೊಡಗಿದ. ಅವನ ಬೊಗಸೆ ತುಂಬಾ ಹಣ್ಣುಗಳಿದ್ದವು. ಸರೋಜಿನಿ ನಾಯ್ಡು ಅವರಿಗೆ ಹುಡುಗನ ಮೇಲೆ ಕರುಣೆ ಹುಟ್ಟಿತು. ಅವನನ್ನು ಒಳಗೆ ಬಿಟ್ಟರು.

ಅವನು ಗಾಂಧೀಜಿಯವರನ್ನು ನೋಡಿದೊಡನೆ, "ಬಾಪೂ, ನಿಮಗೆಂದು ಹಣ್ಣನ್ನು ತಂದಿರುವೆ" ಎಂದು ತನ್ನ ಬೊಗಸೆಯಲ್ಲಿದ್ದ ಹಣ್ಣುಗಳನ್ನು ಗಾಂಧೀಜಿಯವರ ಎದುರು ಇಟ್ಟನು. ಸಾಮಾನ್ಯವಾಗಿ ಗಾಂಧೀಜಿಯವರನ್ನು ನೋಡಲು ಬರುವವರೆಲ್ಲ ಬುಟ್ಟಿ ತುಂಬಾ ಹಣ್ಣನ್ನು ತರುತ್ತಿದ್ದರು. ಇವನೋ ಅಗ್ಗದ ಹಣ್ಣುಗಳನ್ನು ಬೊಗಸೆಯಲ್ಲಿ ತುಂಬಿಸಿ, ತಂದಿದ್ದನು. ಸುತ್ತ ನಿಂತವರಲ್ಲಿ ಯಾರೋ ಇವನು ಭಿಕ್ಷುನಿರಬೇಕು ಎಂದು ಗೊಣಗಿದ್ದು ಅವನಿಗೆ ಕೇಳಿಸಿತು. ಅದಕ್ಕೆ ಅವನು ಆತ್ಮವಿಶ್ವಾಸದಿಂದ ಎದೆಸೆಟೆದು ನಿಂತು ಹೇಳಿದನು, " ಬಾಪೂ, ಈ ಹಣ್ಣುಗಳನ್ನು ನಾನು ನನ್ನ ಸ್ವಂತ ಪರಿಶ್ರಮದಿಂದ ಗಳಿಸಿದ ಹಣ ನೀಡಿ ನಿಮಗೆಂದು ತಂದಿರುವೆ. ನೀವಿದನ್ನು ತಿನ್ನಲೇಬೇಕು". ಗಾಂಧೀಜಿಯವರಿಗೆ ಹುಡುಗನ ಮಾತುಗಳು ಇಷ್ಟವಾದವು. ಅವರು ಅವನ್ನು ಹತ್ತಿರ ಕರೆದು ಬೆನ್ನು ನೇವರಿಸಿ ಹೇಳಿದರು, "ಮಗೂ, ಇವು ನಿನ್ನ ಶ್ರಮದ ಫಲಗಳಾದರೆ ಇದನ್ನು ತಿನ್ನಲು ನೀನೇ ಹೆಚ್ಚು ಅರ್ಹನಾಗಿರುವೆ. ಇಗೋ ಇವುಗಳನ್ನು ತಿನ್ನು" ಎಂದು ಅವನಿಗೆ ನೀಡಲು ಹೋದರು. ಆದರೆ ಆ ಹುಡುಗ, "ನೀವು ತಿಂದರೆ ನಾನು ತಿಂದುದಕ್ಕಿಂತಲೂ ನನಗೆ ಹೆಚ್ಚು ಸಂತೋಷವಾಗುವುದು" ಎಂದನು. ಗಾಂಧೀಜಿಯವರು ನಗುತ್ತಾ ಹಣ್ಣುಗಳನ್ನು ಎಲ್ಲರಿಗೂ ಹಂಚಿ ಹುಡುಗನೊಂದಿಗೆ ತಿಂದರು.

ಈಗ ಗಾಂಧೀಜಿಯವರು ಬದುಕಿದ್ದರೆ ಬಹುಶಃ ಅವನನ್ನು ದುಡಿಮೆಯಿಂದ ಬಿಡಿಸಿ, ಶಾಲೆಗೆ ಸೇರಿಸುತ್ತಿದ್ದರು ಅಲ್ಲವೆ? ಪ್ರಜಾಪ್ರಭುತ್ವ ಮಕ್ಕಳಿಗೆ ನೀಡಿದ ಅಮೂಲ್ಯ ಕೊಡುಗೆಗಳಲ್ಲಿ ಶಿಕ್ಷಣದ ಹಕ್ಕು ಬಹಳ ಮಹತ್ವದ್ದು ಅಲ್ಲವೆ?

ಸಂಗ್ರಹ : ಸುಧಾ ಅಡುಕುಳ




ಗಾಂಧೀಜಿ ಪತ್ರಲೋಕದ ಮೋಡಿ

▪ ಸಿ.ಯು.ಬೆಳ್ಳಕ್ಕಿ

ಪತ್ರ ಬರೆಯುವುದನ್ನೇ ಮರೆತ ನಮಗೆ, ಅದರ ಮಹತ್ವ, ಪ್ರಭಾವ, ಅದು ಪತ್ರಿಕೋದ್ಯಮದ ಒಂದು ಪರಿಣಾಮಕಾರಿ ಅಂಗ ಅನ್ನುವುದು ಅರ್ಥವಾಗುವುದೇ ಕಷ್ಟ. ಅನ್ಯಾಯದ ವಿರುದ್ಧ ಹೋರಾಡಲು, ಜನರಲ್ಲಿ ಜಾಗ್ರತಿ ಮೂಡಿಸಲು, ಯಾವುದೇ ಒಂದು ವಿಷಯದ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಲು, ಆತ್ಮೀಯ ಸಂಬಂಧ ಬೆಳೆಸಲು ಪತ್ರ ಬರವಣಿಗೆಯನ್ನೇ ಗಾಂಧೀಜಿ ಒಂದು ಪ್ರಬಲ ಅಸ್ತ್ರವನ್ನಾಗಿಸಿದರು. ಅವರು ಪತ್ರ ಬರವಣಿಗೆಯಲ್ಲಿ ಹೊಸ ಆಯಾಮ ನೀಡಿದ್ದಾರೆ. ಪತ್ರ ಬರವಣಿಗೆಯಲ್ಲಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಪ್ರತಿದಿನ ಕಡಿಮೆ ಅಂದರೂ 50 ಪತ್ರಗಳನ್ನು ಬರೆಯುತ್ತಿದ್ದರು. ಒಂದು ಅಂದಾಜಿನಂತೆ ಅವರು ಬರೆದ ಪತ್ರಗಳ ಸಂಖ್ಯೆ ಒಂದು ಲಕ್ಷ ಮೀರಿದೆ. ಅವರು ಇಂಗ್ಲೀಷ್, ಹಿಂದಿ ಹಾಗೂ ಗುಜರಾಥಿ ಭಾಷೆಗಳಲ್ಲಿ ಪತ್ರ ಬರೆಯುತ್ತಿದ್ದರು. ಸಮಯ ದೊರೆತಾಗಲೆಲ್ಲ, ಹಾಗೇ ಹಡಗು, ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಸಹ ಪತ್ರ ಬರೆಯುತ್ತಿದ್ದರು. ಬಹಳಷ್ಟು ಪತ್ರಗಳನ್ನು ಮನೆಯಲ್ಲಿ ಪೆನ್ಸಿಲ್ಲಿನಿಂದ ಬರೆದರೆ, ಹಲವು ಟೈಪ್ ಮಾಡಿದ, ಇನ್ನು ಕೆಲವು ಬೇರೆಯವರಿಂದ ಹೇಳಿ ಬರೆಸಿದವುಗಳಾಗಿದ್ದವು.

ತಮ್ಮ ಸುಮಾರು ಐದು ದಶಕಗಳ



ರಾಷ್ಟ್ರೀಯ ಜೀವನಾವಧಿಯಲ್ಲಿ ಬ್ರಿಟೀಷ್ ವೈಸ್‌ರಾಯ್, ಹಾಗೂ ರಾಜನೀತಿ ನಿಪುಣರಿಗೆ ಸಲಹಾಪತ್ರ, ಬಿನ್ನವತ್ತಳೆ, ಕೊನೆಯ ಎಚ್ಚರಿಕೆಯ ರೂಪದಲ್ಲಿ ಅಗಾಗ ಪತ್ರಗಳನ್ನು ಬರೆಯುತ್ತಿದ್ದರು. 'ಗಾಂಧೀಜಿ ಸರಳ ನೇರ, ಹೇಳಬೇಕಾಗಿದ್ದನ್ನು ತಮ್ಮ ಸುಂದರ ಇಂಗ್ಲೀಷ್ ಭಷೆಯಲ್ಲಿ ವಿವೇಚನೆಯಿಂದ ಶಬ್ದಗಳ ಬಳಕೆ ಮಾಡಿ ಲಿಖಿತ ಸಂವಹನ ನಡೆಸುತ್ತಾರೆ' ಎಂದು ಹಲವು ಬ್ರಿಟಿಷ್ ವೈಸ್‌ರಾಯ್‌ರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ.

ಜನಸಾಮಾನ್ಯರು, ಸ್ವಾತಂತ್ರ್ಯ ಹೋರಾಟಗಾರರು, ಉನ್ನತ ಅಧಿಕಾರಿಗಳು, ರಾಷ್ಟ್ರ ಅಂತರ ರಾಷ್ಟ್ರೀಯ ಮಟ್ಟದ ಧುರೀಣರು, ಚಿಂತಕರು ಅಲ್ಲದೆ ಮಹತ್ವದ ವ್ಯಕ್ತಿಗಳೊಡನೆ ನಿರಂತರ ಪತ್ರವ್ಯವಹಾರ ನಡೆಸುತ್ತಿದ್ದರು. ತಮ್ಮ ಕಾಲದ ಹಲವಾರು ಪ್ರಮುಖ ವ್ಯಕ್ತಿಗಳ ವಿಚಾರ ಹಾಗೂ ತಮ್ಮ ಜೀವನದ ಮಹತ್ವದ ಘಟನೆಗಳಿಗೆ ಪ್ರತಿಕ್ರಿಯೆ ರೂಪದಲ್ಲಿ ಗಾಂಧೀಜಿಯವರ ಪತ್ರಗಳು ಇರುತ್ತಿದ್ದವು. ಅವರ ಪತ್ರಗಳು ಕೇವಲ

ರಾಜಕೀಯ ವಿಷಯಗಳಿಗೆ ಸೀಮಿತವಾಗದೆ ಅಂದಿನ ಎಲ್ಲ ಪ್ರಚಲಿತ ವಿಷಯಗಳ ಬಗ್ಗೆ ಇರುತ್ತಿದ್ದವು. ಅವರ ವ್ಯಕ್ತಿತ್ವ ವಿಕಾಸ ಹಾಗೂ ಜೀವನ ಉದ್ದೇಶದ ಮೇಲೆ ಅವು ಬೆಳಕು ಚೆಲ್ಲುತ್ತವೆ. ಗಾಂಧೀಜಿಯವರ ಪತ್ರಬರಹ ಸುಂದರ, ನೇರ. ಅಲ್ಲಿ ಆತ್ಮೀಯತೆ, ಪ್ರೀತಿ, ವಾತ್ಸಲ್ಯ, ಕಾಳಜಿ ಎದ್ದು ಕಾಣುತ್ತದೆ. ತಮ್ಮ ಹೃದಯದಾಳದ ವಿಚಾರ ಅನಿಸಿಕೆಗಳನ್ನು ಪತ್ರದ ಮುಖೇನ ತಲುಪಬೇಕಾದವರ ಹೃದಯಕ್ಕೆ ತಟ್ಟುವಂತೆ ಬರೆಯುವ ಕಲೆ ಅವರಿಗೆ ಕರಗತವಾಗಿತ್ತು.

ಗಾಂಧೀಜಿಯವರ ನಾಲ್ಕು ಅಪರೂಪದ ಪತ್ರಗಳು ವಿಶ್ವದ ಶ್ರೇಷ್ಠ ಪತ್ರಗಳೆಂದು ಸ್ಥಾನ ಪಡೆದಿವೆ.

1. ವಿಶ್ವವನ್ನು ವಿನಾಶದ ಅಂಚಿಗೆ ತಂದ ಹಿಟ್ಲರನಿಗೆ ಹಿಂಸೆಯನ್ನು ತ್ಯಜಿಸಿ ಶಾಂತಿ ನೆಲೆಸುವಂತೆ ಮನ ಒಲಿಸಲು ಬರೆದ ಎರಡು ಪತ್ರಗಳು,

2. ತಮ್ಮನ್ನು 'ಬತ್ತಲೆ ಫಕೀರ'ನೆಂದು ಕರೆದ ಬ್ರಿಟಿಷ್ ಪ್ರಧಾನಿ ವಿನ್ಸೆಂಟ್ ಚರ್ಚಿಲ್‌ಗೆ ವಿಡಂಬನಾತ್ಮಕವಾಗಿ ಧನ್ಯವಾದ ತಿಳಿಸಿ ಬರೆದ ಪತ್ರ.

3. ಉಪ್ಪು ಉತ್ಪಾದನೆ ಮೇಲಿನ ನಿರ್ಬಂಧ ಹಾಗೂ ಸುಂಕವನ್ನು ತೆಗೆದು ಹಾಕುವಂತೆ ಬಿನ್ನವಿಸಿ ವೈಸ್‌ರಾಯ್ ಲಾರ್ಡ್ ಐರ್‌ವಿನ್‌ಗೆ ಬರೆದ ಸುದೀರ್ಘ ಪತ್ರ.


4. ಭಾರತೀಯರನ್ನು ತಮ್ಮ ಸರಿಸಮಾನರಂತೆ ಪರಿಗಣಿಸಿ ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡುವಂತೆ ಪ್ರತಿಯೊಬ್ಬ ಬ್ರಿಟಿಷ್ ಪ್ರಜೆಯನ್ನು ಉದ್ದೇಶಿಸಿ ಬರೆದ ಪತ್ರ.

ಭಾರತೀಯರಿಗೆ ಗಾಂಧೀಜಿಯವರ ಪತ್ರಗಳು ಅತ್ಯಂತ ಮಹತ್ವದ್ದಾಗಿವೆ, ಅಲ್ಲದೆ ಪ್ರೇರಣಾದಾಯಕವಾಗಿವೆ. ಮಹಾತ್ಮನ ಒಳಮನಸ್ಸನ್ನು ತಿಳಿಯುವ ಅವಕಾಶವನ್ನು ಕಲ್ಪಿಸುತ್ತವೆ. ಇದಲ್ಲದೆ ಪತ್ರಗಳು ನಮ್ಮ ದೇಶದ ರಾಜಕೀಯ ಇತಿಹಾಸದಲ್ಲಿ ಆಸಕ್ತಿ ಹೊಂದಿದವರಿಗೆ ಐತಿಹಾಸಿಕ ಮಹತ್ವದ ಕಾಲಾನುಕ್ರಮ ರಾಜಕೀಯ ಘಟನೆಗಳ ಪರಿಚಯ ನೀಡುತ್ತವೆ. ಗಾಂಧೀಜಿಯವರ ಪತ್ರಗಳನ್ನು ಓದಿದಾಗ ಓದುಗರು ಭಾವುಕರಾಗುವುದು ಖಂಡಿತ. ಬಾರತ ಯುವಜನರಿಗೆ ಭಾವನಾತ್ಮಕ ಹಾಗೂ ಉತ್ತೇಜಕವಾಗಿವೆ ಈ ಪತ್ರಗಳು.

ದಕ್ಷಿಣ ಆಫ್ರಿಕಾದಲ್ಲಿದ್ದಾಗಲೂ ಗಾಂಧೀಜಿಯವರು ನಿರಂತರವಾಗಿ ಸಾವಿರಾರು ಪತ್ರಗಳನ್ನು ಬರೆದರು. ಒಂದು ಅಂದಾಜಿನಂತೆ ಅಲ್ಲಿ ಅವರು ಬರೆದ ಪತ್ರಗಳ ಸಂಗ್ರಹ 1200 ಪುಟಗಳನ್ನು ಮೀರಿದೆ. ಅಲ್ಲಿ ತಮ್ಮ ಹೋರಾಟಕ್ಕೆ ಬೆಂಬಲ ಬೆಳೆಸಲು, ಜನರೊಡನೆ ಸಂಪರ್ಕ ಬೆಳೆಸಲು, ತಮ್ಮ ಅನಿಸಿಕೆಗಳನ್ನು ವ್ಯಕ್ತಗೊಳಿಸಲು ಪತ್ರಗಳನ್ನು ಸಮರ್ಪಕ ಸಾಧನವನ್ನಾಗಿಸಿದರು. ಇಂದಿಗೂ ಗಾಂಧೀಜಿಯವರ ಪತ್ರಗಳು ಪ್ರಸ್ತುತ. ಅವುಗಳಲ್ಲಿ ಜನ ಆಸಕ್ತಿ ಹೊಂದಿದ್ದಾರೆ. ಅವರು ಗುಜರಾಥಿ ಭಾಷೆಯಲ್ಲಿ ಬರೆದ ಎರಡು ಪತ್ರಗಳು ಅನುಕ್ರಮವಾಗಿ 11.5 ಹಾಗೂ 9 ಲಕ್ಷ ರೂಪಾಯಿಗಳಿಗೆ ಹರಾಜಾದದ್ದು ಇದಕ್ಕೊಂದು ನಿದರ್ಶನ. ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಬರೆದ ಪತ್ರ ಹಾಗೂ ಇನ್ನಿತರ ಬರವಣಿಗೆಗಳನ್ನು ಭಾರತ ಖಾಸಗಿ ಹರಾಜುದಾರರಿಂದ ಒಂದು 1.1 ಮಿಲಿಯನ್ ಡಾಲರ್(ಸುಮಾರು ಆರೂ ಕೋಟಿ ರೂಪಾಯಿ)ನೀಡಿ ಖರೀದಿಸಿದ್ದನ್ನು ಬಿಬಿಸಿ ಸಮಾಚಾರ ಹಾಗೂ ಇನ್ನಿತರ ಮಾಧ್ಯಮಗಳು ಖಚಿತಪಡಿಸಿವೆ.

ದಕ್ಷಿಣ ಆಫಿಕಾದಲ್ಲಿ ಹೋರಾಟ ನಡೆಸುತ್ತಿದ್ದಾಗ ಗಾಂಧೀಜಿಯವರು ಸಮಸ್ಯೆ, ಅನ್ಯಾಯಗಳತ್ತ ಜನರ, ಸರಕಾರದ ಗಮನ ಸೆಳೆಯಲು ಅಲ್ಲಿನ ವೃತ್ತ ಪತ್ರಿಕೆಗಳ ವಾಚಕರ ವಾಣಿಗಳಲ್ಲಿ ಪತ್ರಗಳನ್ನು ಬರೆದರು. ಗಾಂಧೀಜಿಯವರು ಬರೆಯುತ್ತಿದ್ದ ಆ ಪತ್ರಗಳು ಅನ್ಯಾಯದ ವಿರುದ್ಧದ ಹೋರಾಟದಲ್ಲಿ ಹೇಗೆ ಬಳಸಿಕೊಳ್ಳಬಹುದು ಎನ್ನುವುದನ್ನು ತೋರ್ಪಡಿಸುತ್ತವೆ. ಪತ್ರಕರ್ತರಿಗೆ ಜನಸಾಮಾನ್ಯರಿಗೆ ಇಂದಿಗೂ ಮಾದರಿಯಾಗಿವೆ.

ಕೇವಲ ಅವರ ಪತ್ರಬರವಣಿಗೆಯೇ ಗಾಂಧೀಜಿಯವರನ್ನು ಒಬ್ಬ ಶ್ರೇಷ್ಠಮಟ್ಟದ ಬರಹಗಾರರ ಸಾಲಿನಲ್ಲಿ ನಿಲ್ಲಿಸುವಂತಿದೆ. ಇಂದಿಗೂ ಅದು ಪ್ರಸ್ತುತ ಆದರ್ಶ ಹಾಗೂ ಮಾದರಿ. ■



"ಮನುಷ್ಯ ತಾನು ಮಾಡುವ ಯಾವುದೇ ಕೆಲಸದಲ್ಲಿ ತನ್ನ ಸಹಜೀವಿಗಳ ಕಲ್ಯಾಣಕ್ಕಾಗಿ ದುಡಿದರೆ ದೊಡ್ಡವನೆನಿಸಿಕೊಳ್ಳುತ್ತಾನೆ."

~ ಮಹಾತ್ಮ ಗಾಂಧಿ

ಚಿತ್ರ : ಬಿ.ಜಿ. ಗುಜ್ಜಾರಪ್ಪ



ಕುವೆಂಪು ಅವರ ಕವನ 'ಶ್ರೀರಾಮಪುರದಲ್ಲಿ ಗಾಂಧೀಜಿ'

–ನಾಡೋಜ ಡಾ. ಜಿ. ಕೃಷ್ಣಪ್ಪ

ಗಾಂಧೀಜಿಯವರು ದೇಶದ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಏಕತೆಗಾಗಿ ದುಡಿದರು. ಬ್ರಿಟೀಷರಿಂದ ಭಾರತ ಬಿಡುಗಡೆ ಹೊಂದುವ ಹೊತ್ತಿಗೆ ಮಹಮ್ಮದಾಲಿ ಜಿನ್ನಾ ಅವರ ನೇತೃತ್ವದಲ್ಲಿ ಪಾಕಿಸ್ಥಾನ ಪ್ರತ್ಯೇಕ ಮುಸಲ್ಮಾನ್ ರಾಷ್ಟ್ರಕ್ಕಾಗಿ ಉಗ್ರ ಚಳುವಳಿ ನಡೆಯಿತು. ಅದರಿಂದ ಗಾಂಧಿಯವರ ಭಾರತದ ಏಕರಾಷ್ಟ್ರ ಹೋರಾಟಕ್ಕೆ ಪ್ರಬಲ ಆಘಾತವಾಯಿತು. ಬಹುಸಂಖ್ಯಾತರಾದ ಹಿಂದೂಗಳು ಕಲ್ಕತ್ತದಲ್ಲಿ ಮುಸ್ಲಿಮರ ಮೇಲೆ ಹಿಂಸಾಚಾರ ನಡೆಸಿದರು. ಮುಸಲ್ಮಾನರು ಬಹುಸಂಖ್ಯಾತರಾಗಿದ್ದ ನೌಕಾಲಿ ಜಿಲ್ಲೆಯಲ್ಲಿ ಹಿಂದೂಗಳ ಮೇಲೆ ಹಿಂಸಾಚಾರ ನಡೆಯಿತು. ಈ ರೀತಿ ಹಿಂದೂ ಮುಸ್ಲಿಮರು ಕೋಮುದಂಗೆಯಲ್ಲಿ ಹಿಂಸಾಚಾರಕ್ಕೆ ತೊಡಗಿದುದನ್ನು ಕಂಡಾಗ ಗಾಂಧಿಗೆ ಇದು ತನ್ನ ಅಹಿಂಸೆಯ ಪ್ರಯೋಗದ ಸೋಲಿನ ಸೂಚನೆ ಎನಿಸಿತು.

ಗಾಂಧಿಯವರು 20–11–1946 ರಂದು ಮುಸ್ಲಿಮರೆ ಹೆಚ್ಚಾಗಿದ್ದ ನೌಕಾಲಿಯ ಶ್ರೀರಾಮಪುರದಲ್ಲಿ ಉಳಿದುಕೊಂಡರು. ಅಲ್ಲಿ ನಿರಾಶ್ರಿತರಿಗೆ ರಕ್ಷಣೆ, ಪರಿಹಾರ ಒದಗಿಸಿ ಪುನರ್ವಸತಿಗೆ ಏರ್ಪಾಡು ಮಾಡಿದರು. ಎರಡು ತಿಂಗಳುಗಳ ಕಾಲ ಪ್ರತಿದಿನ ಪಾದಯಾತ್ರೆಯಲ್ಲಿ ಸುತ್ತಮುತ್ತಲ ಹಳ್ಳಿಗಳಿಗೆ ಹೋದರು. ಸಂಜೆ ಪ್ರಾರ್ಥನಾ ಸಭೆ ನಡೆಸಿದರು. ಅವರು ಆ ಪಾದಯಾತ್ರೆಯಲ್ಲಿ ಬಡವರ, ಕೆಳಜಾತಿಗಳ, ಮುಸ್ಲೀಮರ ಮನೆಯಲ್ಲಿ ಆಹಾರ ಸ್ವೀಕರಿಸುತ್ತಿದ್ದರು. ಅಲ್ಲಿ ಅವರ ಪಾದಯಾತ್ರೆ ಒಂದು ಉತ್ಸವದಂತಿದ್ದು ಹಿಂದೂ ಹಾಗೂ ಮುಸಲ್ಮಾನರು ಅದರಲ್ಲಿ ಒಂದಾಗಿ ಭಾಗವಹಿಸುತ್ತಿದ್ದರು. ಅವರು ಸಭೆಗಳಲ್ಲಿ ಧಾರ್ಮಿಕ ಸಾಮರಸ್ಯದ ಜೊತೆಗೆ ಲೌಕಿಕ ಅಭ್ಯುದಯ ವಿಚಾರ ಹೇಳಿ ಜನರನ್ನು ಸಮರಸ ಬದುಕಿನತ್ತ ಒಂದಾಗಿಸುತ್ತಿದ್ದರು. ಅವರು 1947 ಫೆಬ್ರವರಿ ಮಧ್ಯಭಾಗದವರೆಗೆ ಅಲ್ಲಿದ್ದರು. ಪರಿಸ್ಥಿತಿ ತಿಳಿಗೊಂಡ ಮೇಲೆ ಅಲ್ಲಿಂದ ಬಿಹಾರ್‌ಗೆ ಹೋದರು.

ಕುವೆಂಪು ಅವರು 22–11–1946 ರಲ್ಲಿ 'ಶ್ರೀರಾಮಪುರದಲ್ಲಿ ಗಾಂಧೀಜಿ' ಕವನ ರಚಿಸಿದ್ದಾರೆ. ಅದರ ಭಾವಸಂದರ್ಭವನ್ನು ಹೀಗೆ ನೀಡಿದ್ದಾರೆ: 'ಗಾಂಧೀಜಿ ಒಬ್ಬರೆ ನೌಕಾಲಿಯ ಬಳಿಯ ಶ್ರೀರಾಮಪುರವೆಂಬ ಹಳ್ಳಿಯಲ್ಲಿ ವಾಸಮಾಡುತ್ತಾ ಮುಸ್ಲಿಮರ ಸಂಪರ್ಕ ಬೆಳೆಸಿ ಸಖ್ಯ ಸಾಧನೆಗೆ ತೊಡಗಿದ್ದಾರೆ. ಈ ಇಳಿ ವಯಸ್ಸಿನಲ್ಲಿ ಆ ಕಾಡು ನೀರಿನ ಭೀಷಣ ಪ್ರಕೃತಿಯಲ್ಲಿ, ಅದಕ್ಕಿಂತಲೂ ಹೆಚ್ಚಾಗಿ ಭೀಷಣತರವಾಗಿ ತೋರುತ್ತಿರುವ ಮನುಷ್ಯ ಪ್ರಕೃತಿಯ ಮಧ್ಯೆ, ಹಾಲಾಹಲದಲ್ಲಿ ಅಮೃತ ಮಥನಕ್ಕಾಗಿ ದೀಕ್ಷೆ ತೊಟ್ಟಿದ್ದಾರೆ.'

ಆ ಕವನದಲ್ಲಿ ಕವಿಯು ರಾವಣಾರಿ ಶ್ರೀರಾಮನನ್ನು – ನಿನ್ನ ಹೆಸರಿನ ಹಳ್ಳಿಯಲ್ಲಿ ಮತಿವೈರದ ಕೋಮುದಳ್ಳುರಿ ದಹಿಸಲು ಗಾಂಧಿಯವರಿಗೆ ರಕ್ಷೆ ನೀಡೆಂದು ಪ್ರಾರ್ಥಿಸಿದ್ದಾರೆ. ಆ ಪೂಜ್ಯ ಗಾಂಧಿ ನಿನ್ನ ನಾಮದ ಭಕ್ತ; ನಾನು ನಿನ್ನ ಚರಿತೆಯನ್ನು ಹಾಡಿದ ಕವಿ. ನಿನ್ನನ್ನು ಬೇಡುತ್ತಿರುವೆ ಅಸಹಾಯಕನಾದ ಗಾಂಧಿಯನ್ನು ಕಾಪಾಡು.

ಇದೊಂದು ಕವಿಯ ಆತ್ಮ, ಮಹಾತ್ಮನ ಉಳಿವಿಗೆ ಪರಮಾತ್ಮನಲ್ಲಿ ಆತ್ಮೀಯವಾಗಿ ಧ್ಯಾನಶೀಲವಾದ ಪ್ರಾರ್ಥನೆ :

'ದಿವ್ಯಮಂತ್ರವ ಜಪಿಸು: ಬೆಂಬಲ ಮಹಾತ್ಮನಿಗೆ!
ದೂರವೆನಿತಾದರೇನ್ ಪ್ರಾರ್ಥನಾ ಜವಕೆ?
ಇಂದೊಬ್ಬನೆಯೆ ನಡೆದನಾ ದೈವವನು ನೆಮ್ಮಿ
ಮತವೈರ ದಹಿಸಿದಾ ಶ್ರೀರಾಮಪುರಕ್ಕೆ!'

ಕುವೆಂಪು ಅವರು ಮಹಾತ್ಮಗಾಂಧಿಯು ಒಂಟಿಗನಲ್ಲ. ಅವನು ಭಾರತದ ಕೋಟ್ಯಾಂತರ ಜನಗಳ ಆತ್ಮಸಂಬಂಧಿ. ಭಾರತೀಯರು ಆ ಮಹಾತ್ಮನ ಸತ್ಯ, ಅಹಿಂಸೆ, ಉಪವಾಸ ವ್ರತ, ಹರಿಜನೋದ್ಧಾರ, ಸರ್ವೋದಯ, ನಿಸ್ವಾರ್ಥ ನಡೆ, ಸ್ವಾತಂತ್ರ್ಯ, ಸತ್ಯಾಗ್ರಹ ಹೋರಾಟ ಕಾರ್ಯಗಳನ್ನು ಮೆಚ್ಚಿ ಒಪ್ಪಿ ಬೆಂಬಲಿಸಿ ಆತನಲ್ಲಿ ಒಂದಾಗಿದ್ದಾರೆ. ಹಾಗಾಗಿ ಕವಿ ಬಾಪುವನ್ನು 'ಕೋಟ್ಯಾತ್ಮ ಸಂಬಂಧಿ' ಎಂಬ ರೂಪಕದಲ್ಲಿ ಬಣ್ಣಿಸಿದ್ದಾರೆ. ಕೋಟಿ ಕೋಟಿ ಜನ ಹೃದಯಂತರಾಳದಿಂದ ಪ್ರಾರ್ಥಿಸಿದರೆ, ಅವರ ಹೋರಾಟ ಸಫಲವಾಗುತ್ತದೆ. ಅದಕ್ಕೆ ಜಗದೀಶನ ರಕ್ಷಣೆಯು ದೇವತೆಗಳ ಲಕ್ಷಸೇನೆಯೊಂದಿಗೆ ಲಭಿಸುತ್ತದೆ ಎಂದು ತಿಳಿಸಿದ್ದಾರೆ:

'ಇರಲು ಜಗದೀಶದಯಾ
ರಕ್ಷೆಯಾಗದೆ ಪೇಳ್ ಅಮರ ಲಕ್ಷಸೇನೆ?
ಕೋಟ್ಯಾತ್ಮ ಸಂಬಂಧಿ ಪೇಳೊಂಟಿಗನೆ ಗಾಂಧಿ?

■

ಚಿ | ತ್ರಾ | ವ | ಳಿ



ಕಸ್ತೂರ್ ಬಾ ಸ್ಮಾರಕ ರಾಷ್ಟ್ರೀಯ ಟ್ರಸ್ಟ್ ಮತ್ತು ಸಮಾಜಮುಖಿ ಬಳಗದ ಸಂಯುಕ್ತ ಆಶ್ರಯದಲ್ಲಿ ಗಾಂಧಿ,ಅಂಬೇಡ್ಕರ್ ಮತ್ತು ರಾಮ ಮನೋಹರ್ ಲೋಹಿಯಾ ಅವರ ಬಗ್ಗೆ ವಿಚಾರ ವಿನಿಮಯದ ಎರಡು ದಿನಗಳ ಕಾರ್ಯಾಗಾರ ಅರಸೀಕೆರೆಯ ಆಶ್ರಮದಲ್ಲಿ ನಡೆಯಿತು. ಇದರ ಸಮಾರೋಪ ಸಮಾರಂಭದಲ್ಲಿ ಸಮಾಜಮುಖಿ ಬಳಗದ ವತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಆಯುಕ್ತರಾದ ಜಯರಾಮ್ ರಾಯಪುರ , ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪುತ್ರಿ, ಕಸ್ತೂರ್ ಬಾ ರಾಷ್ಟ್ರೀಯ ಸ್ಮಾರಕದ ಟ್ರಸ್ಟಿ ಎನ್.ಆರ್ ವಿಶುಕುಮಾರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ ಕೃಷ್ಣ, ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷ ಎಂ. ಸಿ. ನರೇಂದ್ರ ಮತ್ತು ಸಾಹಿತಿ ಹಾಗೂ ಜನಪರ ಹೋರಾಟಗಾರ್ತಿ ಎಚ್ ಎಸ್ ಅನುಪಮ ಅವರು ಭಾಗವಹಿಸಿದ್ದರು.



ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರ 119 ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಅವರ ಕುರಿತ ಪುಸ್ತಕಗಳ ಬಿಡುಗಡೆ ಸಂದರ್ಭ.ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ , ಖಜಾಂಚಿ ಎಚ್ ಬಿ ದಿನೇಶ್ , ಗೊರೂರು ಪುತ್ರಿ ವಸಂತಿ ಮೂರ್ತಿ, ಸುಮಂಗಲಿ ಸೇವಾಶ್ರಮದ ಎಸ್ ಜಿ ಸುಶೀಲಮ್ಮ , ಅಧ್ಯಕ್ಷರಾದ ವೂಡೇ ಪಿ ಕೃಷ್ಣ , ನಾಡೋಜ ಹಂ.ಪ ನಾಗರಾಜಯ್ಯ, ಸಂಸ್ಕೃತ ವಿಶ್ವ ವಿದ್ಯಾಲಯದ ಮಾಜಿ ಉಪಕುಲಪತಿ ಮಲ್ಲೇಪುರಂ ವೆಂಕಟೇಶ್, ಡಾ .ಕಮಲ ನರಸಿಂಹ .



ಕಸ್ತೂರ್ ಬಾ ಸ್ಮಾರಕ ರಾಷ್ಟ್ರೀಯ ಟ್ರಸ್ಟ್ ನ ಚಟುವಟಿಕೆಗಳಿಗೆ ಕಾರ್ಪೊರೇಟ್ ಕೊಡುಗೆ ನೀಡಿದ ಮೈಸೂರು ರಿಯಾಲಿಟಿಸ್ ಸಂಸ್ಥೆಯ ಸ್ವಿಟ್ಜರ್ ಲ್ಯಾನ್ಡ್ ದೇಶದ ಉದ್ಯಮಿ ಮತ್ತು ಅವರ ಕುಟುಂಬ ಸದಸ್ಯರು ಕಸ್ತೂರ್ ಬಾ ಆಶ್ರಮದ ಆವರಣದಲ್ಲಿರುವ ಬಾಪೂ ಚಿತಾಭಸ್ಮ ಇಟ್ಟಿರುವ ಸ್ಥಳಕ್ಕೆ ಭೇಟಿ ನೀಡಿ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಸ್ತೂರ್ ಬಾ ಆಶ್ರಮದ ಪದಾಧಿಕಾರಿಗಳು ಅವರ ಜೊತೆಗಿದ್ದರು.



ಇತ್ತೀಚಿಗೆ ನಿವೃತ್ತರಾದ ರಾಷ್ಟ್ರೀಯ ಸೇವಾ ಯೋಜನೆಯ ಕರ್ನಾಟಕ ವಲಯ ನಿರ್ದೇಶಕರಾದ ಖಾದ್ರಿ ನರಸಿಂಹಯ್ಯ ಅವರಿಗೆ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯಿಂದ ಗೌರವಿಸಿ ಸನ್ಮಾನಿಸಲಾಯಿತು. ಎನ್‌ಎಸ್‌ಎಸ್ ರಾಜ್ಯ ಅಧಿಕಾರಿ ಪ್ರತಾಪ್ ಲಿಂಗಯ್ಯ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ ಕೃಷ್ಣ, ಉಪಾಧ್ಯಕ್ಷರಾದ ಜಿ ಬಿ ಶಿವರಾಜು ಈ ಸಂದರ್ಭದಲ್ಲಿದ್ದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗ್ರಂಥಾಲಯದಲ್ಲಿರುವ ಗಾಂಧಿ ಕುರಿತ ಪುಸ್ತಕಗಳನ್ನು ಡಿಜಟಲೀಕರಣ ಮಾಡಿ ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವ ಯೋಜನೆಗೆ ಅಮೇರಿಕಾದ ಪಬ್ಲಿಕ್ ರಿಸೋರ್ಸ್ ಸಂಸ್ಥೆಯ ಜೊತೆಗೆ ಸಹಕಾರ ಒಡಂಬಡಿಕೆಗೆ ಜೂನ್ 19 ರಂದು ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಅಧ್ಯಕ್ಷರಾದ ವೂಡೇ ಪಿ ಕೃಷ್ಣ ಮತ್ತು ಪಬ್ಲಿಕ್ ರಿಸೋರ್ಸ್ ಸಂಸ್ಥೆಯ ಕಾರ್ಲ್ ಮಲಮಡ್ ಅವರು ಸಹಿ ಮಾಡಿದರು. ಈ ಸಂದರ್ಭದಲ್ಲಿ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀಮತಿ ಇಂದಿರಾ ಕೃಷ್ಣಪ್ಪ, ಉಪಾಧ್ಯಕ್ಷರುಗಳಾದ ವಿ.ಎನ್ ತಿಪ್ಪನಗೌಡ, ಜಿ. ಬಿ ಶಿವರಾಜು, ಖಜಾಂಚಿ ಹೆಚ್. ಬಿ. ದಿನೇಶ್ ಮತ್ತು ಉಪಾಧ್ಯಕ್ಷರಾದ ಎನ್ ಆರ್ ವಿಶುಕುಮಾರ್, ಸದಸ್ಯರಾದ ಎಂ ಸಿ ನರೇಂದ್ರ ಮತ್ತು ಸರ್ವೆಂಟ್ಸ್ ಆಫ್ ನಾಲೆಡ್ಜ್ ಸಂಸ್ಥೆಯ ಓಂಶಿವಪ್ರಕಾಶ್ ಇದ್ದರು.



#ServantsOfKnowledgeನ ಪುಸ್ತಕಗಳ ಡಿಜಿಟಲೀಕರಣದ ಕೆಲಸ ಈಗ ಗಾಂಧಿ ಭವನ, ಬೆಂಗಳೂರಿನಲ್ಲಿ ಪ್ರಾರಂಭವಾಗಿದೆ. ಕಳೆದ ವರ್ಷ ಗಾಂಧಿ ಸ್ಮಾರಕ ನಿಧಿಯ ಎಲ್ಲ ಪ್ರಕಟಣೆಗಳನ್ನು ಡಿಜಿಟಲೀಕರಿಸಿ ಎಲ್ಲರಿಗೂ ಲಭ್ಯವಾಗಿಸಲಾಗಿತ್ತು.



ದಿನಾಂಕ 28.07.2023 ರಂದು ಅರಸೀಕೆರೆ ಕಸ್ತೂರಿಬಾ ಗಾಂಧಿ ಆಶ್ರಮದಲ್ಲಿ ತುಮಕೂರು ಜಿಲ್ಲೆ, ಸಿರಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು" ಯುವ ಜನರಿಗೆ ಗಾಂಧಿ ಮತ್ತು ಅಂಬೇಡ್ಕರ್ ವ್ಯಕ್ತಿ ವಿಚಾರಗಳ ಪ್ರಸ್ತುತತೆ" ಎಂಬ ವಿಷಯದ ಬಗ್ಗೆ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಿಬಿರದ ನೇತೃತ್ವವನ್ನು ಡಾ. ಹೊನ್ನ ಆಂಜನೇಯ ವಹಿಸಿದ್ದರು. ಡಾ ತುಕಾರಾಂ ಉಪನ್ಯಾಸ ನೀಡಿದರು ಪ್ರೊ ಮರಿಸ್ವಾಮಿ ಗೌಡ ಶ್ರೀ ಲಕ್ಷ್ಮಣ್ ಗೌಡ ಮತ್ತು ಅಧ್ಯಾಪಕರು ಭಾಗವಹಿಸಿದ್ದರು.




ಕರ್ನಾಟಕ ಗಾಂಧಿ ಸ್ಮಾರಕ ನಿಧಿ , ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ , ಗಾಂಧಿ ಭವನ ಮಂಡ್ಯ ಇವರ ಸಹಯೋಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಒಂದು ದಿನದ ಕಾರ್ಯಕ್ರಮವನ್ನು ಮಂಡ್ಯ ನಗರದ ಗಾಂಧಿ ಭವನದಲ್ಲಿ ಆಚರಿಸಲಾಯಿತು .



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001

Printed at : **Printastic,** 272, 2nd Main Road, 6th Cross, Lavakushanagar, Laggere Bangalore-58